ಶಿವಾನುಭವ ಗ್ರಂಥಮಾಲಾ ಸಂ॥ ೪೧

ಬಸವೇಶ್ವರ

# ಷಟ್‌ಸ್ಥಲ ವಚನದ ಕಥಾಸಾರ.

ಸಂಪಾದಕರು.

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಏ. ಎಲ್. ಎಲ್. ಬಿ.

ವಿಜಾಪುರ.

ಆಣೆ.

931
236.

ಶಿವಾನುಭವ ಗ್ರಂಥಮಾಲಾ ನಂ|| ೪೧

# ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ.


ಸಂಪಾದಕರು.

ರಾ|| ಸಾ|| ಫ. ಗು. ಹಳಕಟ್ಟಿ.

ಬಿ. ಎ. ಎಲ್. ಎಲ್. ಬಿ.



ವಿಜಾಪುರ.

೧೯೩೪



ಶಿವಬಸವ ನಗರ

ಬೆಳಗಾವಿ ೧೦


ಬೆಲೆ ೧೨ ಆಣೆಗಳು.

236.

ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ"ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ತಮ್ಮ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

93/236.

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ 236.
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ

# ಪ್ರಸ್ತಾವನೆ.

ಈಗ ಶ್ರೀ ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ ಎಂಬ ಗ್ರಂಥವನ್ನು ಅಚ್ಚು ಹಾಕಿದ್ದೇವೆ. ಇದರ ಗ್ರಂಥಕರ್ತನಾರೆಂಬುದು ತಿಳಿದಿಲ್ಲ. ಅವನು ಈ ವಚನ ಗ್ರಂಥದಲ್ಲಿ ಉಲ್ಲೇಖವಾಗಿರುವ ಶಿವ ಶರಣರ ಮತ್ತು ಪೌರಾಣಿಕ ಪುರುಷರ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರುವನು. ಈ ವಿವರಣೆಗಳ ಮೇಲಿಂದ ಗ್ರಂಥಕಾರನು ಎಷ್ಟು ಬಹುಶೃತನಾಗಿದ್ದನೆಂಬದು ಚನ್ನಾಗಿ ವ್ಯಕ್ತವಾಗುತ್ತದೆ. ಬಸವೇಶ್ವರನ ವಚನಗಳನ್ನು ಅಭ್ಯಾಸಿಸುವವರಿಗೆ ಈ ಗ್ರಂಥವು ಉಪಯೋಗವಾಗಬಹುದೆಂದು ಎಣಿಸಿ ಇದನ್ನು ಪ್ರಸಿದ್ಧಿಸಿದ್ದೇವೆ.

ಈ ಗ್ರಂಥವು ಒಂದೇ ಒಂದು ಹಸ್ತಲಿಖಿತ ಗ್ರಂಥದ ಆಧಾರದಿಂದ ಅಚ್ಚು ಹಾಕಲ್ಪಟ್ಟಿದೆ. ಆದ್ದರಿಂದ ಅನೇಕ ಕಡೆಗೆ ಚರಿತ್ರೆಗಳ ಭಾಗಗಳು ಅಶುದ್ಧವಾಗಿ ಉಳಿದು ಅರ್ಥವಾಗುವದಿಲ್ಲಾದ್ದರಿಂದ ನಾವು ವಿಷಾದಿಸುತ್ತೇವೆ. ಅದಕ್ಕೋಸ್ಕರ ವಾಚಕರು ನಮ್ಮನ್ನು ಕ್ಷಮಿಸಬೇಕು. ಬೇರೆ ಹಸ್ತಲಿಖಿತ ಗ್ರಂಥಗಳು ದೊರೆದಲ್ಲಿ ಈ ಆವೃತ್ತಿಯನ್ನು ಶುದ್ಧಗೊಳಿಸಲು ಸಹಾಯವಾಗುವದು. ಆದ್ದರಿಂದ ಈ ಗ್ರಂಥದ ಪ್ರತಿಗಳು ಯಾರ ಕಡೆಗಾದರೂ ಇದ್ದಿದ್ದಾದರೆ ಅವರು ಅವುಗಳನ್ನು ನಮ್ಮ ಕಡೆಗೆ ಕಳಿಸಿಕೊಟ್ಟಲ್ಲಿ ನಾವು ಅವರಿಗೆ ಬಹಳ ಆಭಾರಿಯಾಗುವೆವು. ಇದರಿಂದ ೨ನೇ ಆವೃತ್ತಿಯನ್ನು ಶುದ್ಧವಾಗಿ ಅಚ್ಚುಹಾಕಲು, ನಮಗೆ ಬಹಳ ಸಹಾಯವಾಗುವದು.

| | |
|---|---|
| ವಿಜಾಪುರ | ಫ. ಗು. ಹಳಕಟ್ಟಿ |
| ತಾ॥ ೩-೧೨-೩೪ | ಸಂಪಾದಕ. |

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ 236.
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ

ಬಸವೇಶ್ವರ

# ಷಟ್‌ಸ್ಥಲ ವಚನದ ಕಥಾಸಾರ.

## ೨ ನೆಯ ವಚನದ ಕಥೆ. (೧-೧) *

### ಕಂಕಾಳ.

ಕಂಕಾಳೇ ಶೋಡಶಂ ಭವೇತ್ ಸ್ಕಂದಪುರಾಣದಲ್ಲಿಯ ಕಾಳಿಕಾಖಂಡದಲ್ಲಿ ಸೂತಮುನಿ ನೈಮಿಷಾರಣ್ಯವಾಸಿಗಳಿಗೆ-ಬಲಿಯು ಭಾಗೀರಥಿಯ ತೀರದಲ್ಲಿ ಒಂದು ಕಡಿಮೆ ನೂರು ಯಜ್ಞವ ಮಾಡಿ ಮತ್ತೊಂದಂ ಮಾಡಬೇಕೆಂಬಾಗ ಇಂದ್ರನು ವಿಷ್ಣುವಿನ ಕೂಡೆ ನನ್ನ ಪದವ ಕೊಡಿಸು ಎನಲು, ಆಗ ಹರಿಯು ಗದೆ, ಚಕ್ರ, ಬಿಲ್ಲು ಇವ ಕೂಡೆ ಬಲಿಯ ವಧಿಸು ಎನಲು ಅದು ನನ್ನ ಕಯ್ಯಲಾಗದೆನಲು ಆಗ ತಾನೆ ಅದಿತಿಯಲ್ಲಿ ವಾಮನನಾಗಿ ಹುಟ್ಟಿ ವೇದವನೋದುತ್ತ ಬಲಿಯ ಯಜ್ಞದ ಸಮೀಪಕ್ಕೆ ಬರಲು ಅವರಾರೆಂದು ಚಂಡ, ಅರ್ಕರೆಂಬ ದೂತರ ಕಳುಹಲು ಅವರು ನೋಡಿ ಒಬ್ಬ ಗಿಡ್ಡ ಹಾರುವನೆಂದು ಹೇಳಲು ತಾ ಬಂದು ಕರೆದುಕೊಂಡು ಹೋಗಿ ಏನು ಬಂದಿರೆಂದು ಕೇಳಲು ತೊಳಚಿಯ ಬಿತ್ತುವುದಕ್ಕೆ ಮೂರಡಿ ಭೂಮಿ ಬೇಕೆನಲು, ಆಗ ಬಲಿ ಮೂರಡಿ ಹೆಜ್ಜೆಯ ಕೋ ಎನಲು ಒಂದು ಹೆಜ್ಜೆಯಾಗುವಂತೆ ಭೂಮಿಯ ಮೆಟ್ಟಿ ಒಂದು ಹೆಜ್ಜೆಯ ಆಕಾಶಕ್ಕೆ ಇರಿಸಿ ಇನ್ನೊಂದು ಹೆಜ್ಜೆಯ ಭೂಮಿಯ ತಾ ಅಂದು ತಲೆಯ ಮೇಲೆ ಮತ್ತೊಂದು ಹೆಜ್ಜೆಯನಿಡಲು ಬಲಿ ಪಾತಳಕ್ಕಿಳಿದನು. ಅತ್ತ ಆಕಾಶಕ್ಕೆ ನೀಡಿದ ಹೆಜ್ಜೆ ಬ್ರಹ್ಮನ ಬಳಿಗೆ ಹೋಗಲು ಇದು ಶಿವನ ಪಾದವಾದರೆ ಅಭಿಷ್ಟವಾಗಲಿ ಮತ್ತೊಬ್ಬರದಾದೊಡೆ ಕೆಡಲಿ ಎಂದು ಕಮಂಡಲದುದಕವ ತಳಿಯಲು ಕತ್ತರಿಸಿ ಬಿತ್ತು. ಆ ಮೋಟಗಾಲಿಂದ ಬ್ರಹ್ಮಾಂಡ ತನ್ನ ಕಾಲು ಬೆಳೆದು ಲೋಕವ ಬಾಧಿಸುವಾಗ ಭೈರವ

---

* ಅಚ್ಚುಹಾಕಿದ "ಬಸವೇಶ್ವರನ ವಚನಗಳು" ೨ ನೇ ಆವೃತ್ತಿ ಇವರ ಪುಟ ಮತ್ತು ಪುಟದಲ್ಲಿಯ ವಚನ ಸಂಖ್ಯೆ ಇವುಗಳು ಕಂಸಿನಲ್ಲಿ ತೋರಿಸಲ್ಪಟ್ಟಿವೆ.

ಗಣೇಶ್ವರ ಬಂದು ಎಡೆ ಮೇಲೆ ಹಾಯ್ದು ಕೆಡಹಿ ಬೆನ್ನೆಲುವನು ಚರ್ಮ
ವನು ತೆಗೆದು ಶಿವನ ಮುಂದೆ ಮಡುಗಲು ಅಸ್ಥಿಯ ಕಂಕಾಳವ ಮಾಡಿ
ಹಿಡಿದು ಚರ್ಮವನುಟ್ಟುಕೊಂಡು ಶಿವನೊಪ್ಪಿದನು.

## ತ್ರಿಪುರ

ನವಮಂ ತ್ರಿಪುರಾರಿಶ್ಚ ಲೈಂಗ್ಯಪುರಾಣದೊಳಂ ಸೂತಮುನಿಗಳಿಗೆ
ದೇವತೆಗಳಿಗೆ ನಿರೂಪ ವೀರ ವಿದ್ಯುನ್ಮಾಲಿ ತಾರಕರು ತಪವ ಮಾಡು
ವಾಗ ಬ್ರಹ್ಮ ಬಂದು ಏನು ಬೇಕೆಂದು ಕೇಳಲು ನಿತ್ಯತ್ವವ ಕೊಡು
ಎನಲು ನಮಗೆ ನಿತ್ಯತ್ವವಿಲ್ಲ ನಿಮಗೆ ಹೇಗೆ ಕೊಟ್ಟೆನೆನಲು, ಹಾಗಾದರೆ
ಮೂರು ಪುರಗಳ ಮಾಡಿ ಕೊಡು ಎನಲು ರಕ್ಕಸರ ಬಡಗಿಯಾದ
ಮಯನಿಗೆ ಹೇಳಿ ಬ್ರಹ್ಮ ಹೋಗಲು ಇತ್ತ ಮಯನು ಭೂಮಿಗಂತರ
ದಲ್ಲಿ ಕಬ್ಬಿಣದ ಪುರ, ಆಕಾಶದಲ್ಲಿ ಬೆಳ್ಳಿಯ ಪುರ, ಸ್ವರ್ಗದಲ್ಲಿ ಚಿನ್ನದ
ಪುರಂಗಳ ಮಾಡಿಕೊಡಲು ಆ ಮೂರು ಪುರದಲ್ಲಿ ಮೂವರು ಇರುತ್ತಿ
ರಲು ಮಯ ಏನೆಂದನು, ನೀವು ಬ್ರಹ್ಮನ ನಿತ್ಯತ್ವ ಬೇಡುತ್ತಿದ್ದಿರಿ
ಲಿಂಗವ ಧರಿಸಿದರೆ ನಿತ್ಯತ್ವವಲ್ಲವೇ ಎನಲು, ಹಾಗಾದರೆ ನಮಗೆ
ಲಿಂಗವ ಧರಿಸಿ ಎನಲು ಮಯನು ಅವರಿಗೆ ಲಿಂಗಧಾರಣವ ಮಾಡಿ
ಹೋಗಲು, ಇತ್ತ ಈ ಮೂವರು ಶಿವನ ಕೆಯ್ಯಲ್ಲಿ ಕಾಮಧೇನು
ಕಲ್ಪವೃಕ್ಷವ ಪಡೆದು ಸುಖದಲ್ಲಿರುವಾಗ್ಗೆ, ಬ್ರಹ್ಮವಿಷ್ಣ್ವಾದಿಗಳು ಹೇಳಿದ
ಚಾಕರಿಯ ಮಾಡದಿದ್ದರೆ ತಮ್ಮ ಪುರ ಸಹವಾಗಿ ಹೋಗಿ ಅವರಿಗೆ ಪೆಟ್ಟ
ಹಾಕಿ ಬರುವರು. ಹೀಗೆ ದಿವ್ಯ ಸಾವಿರ ವರುಷವಿರುತಿರಲು ಆಗ ಬ್ರಹ್ಮ
ವಿಷ್ಣುಗಳು ತ್ರಿಪುರದ ರಕ್ಕಸರ ಬಾಧೆ ಬಹಳವೆಂದು ಶಿವನಿಗೆ ದೂರು
ಹೇಳಲು ಲಿಂಗಭಸಿತ ರುದ್ರಾಕ್ಷಿಗಳ ಧರಿಸಿದವರ ಮೇಲೆ ಹೇಗೆ ಕೈ
ಮಾಡಲಿ, ನೀವೆ ಕಾದಿ ಕೊಲ್ಲಿ ಎನಲು, ಆಗಲಾ ಬ್ರಹ್ಮವಿಷ್ಣುಗಳು
ಮಾರಣ ಯಜ್ಞವ ಮಾಡಿ ಭೂತಗಳ ಹುಟ್ಟಿಸಿ ತ್ರಿಪುರದವರ ಮೇಲೆ
ಕಳುಹಲು ಅವು ಹೋಗಿ ರಕ್ಕಸರ ಅಂಗದ ಮೇಲೆ ಲಿಂಗವ ಕಂಡು
ಹೆದರಿ ಬಂದು ನಮ್ಮ ಕೈಲಾಗದೆಂದು ವಿಷ್ಣುವಿಗೆ ಹೇಳಲು ಬಳಿಕ
ಹರಿಯು ನಾರದರ ಕರಕೊಂಡು ತ್ರಿಪುರದಲ್ಲಿ ಕುಳಿತುಕೊಂಡು ಮಣ್ಣನ್ನೇ
ಚಿನ್ನವ ಮಾಡಿ ತೋರುತ ನಾರದ ಹಳೆಯರುವಿಯನೆ ಚಿನಿಚೀನಾಂಬ
ರವ ಮಾಡಿ ತೋರುತ ಕಪಟದಿಂದ ಲಿಂಗಧಾರಣಂಗಳ ಬಿಡಿಸಿ ಅಲ್ಲಿ
ಬುದ್ಧಿಮೋಹಿ ಎಂಬ ತನ್ನ ಬೌದ್ಧನ ಮಡಗಿ ತಾವಿಬ್ಬರು ಹೋಗಿ



ಮಾನಸ ಸರೋವರದಲ್ಲಿ ಕೊರಳುದ್ದುದ್ದ ಉದಕದೊಳಗೆ ನಿಂತು ಮೊರೆ
ಇಡಲು ಶಿವನು ಕೇಳಿ ನಂದೀಶ್ವರನ ಕಳುಹಲು ಬಂದು ಯಾಕೆ ಕೂಗಿ
ದಿರೆಂದು ಕೇಳಲು ರಕ್ಕಸರು ಲಿಂಗಗಳ ಬಿಟ್ಟರು, ಇನ್ನಾದರೂ ಅವರ
ಕೊಲ್ಲಬಾರದೇ ಎನಲು ನಂದೀಶ್ವರ ಹಾಗೆ ಬಂದು ಶಿವಂಗೆ ಹೇಳಲು
ಆ ಮಾತಿಗೆ ಶಿವನು ರಥವ ಮುಸ್ತೈದೆ ಮಾಡಿ ಎನಲು ಬಳಿಕ ಬ್ರಹ್ಮ
ವಿಷ್ಣುಗಳು ವಿಶ್ವಕರ್ಮನ ಕರಸಿ ಭೂಮಿಯೇ ರಥ, ಚಂದ್ರಸೂರ್ಯ
ಗಳು ಗಾಲಿಗಳು, ವಿಂಧ್ಯಗಿರಿ ಅಚ್ಚು, ಕೆಸರಗಿರಿ ಈಸು, ಕ್ಷಣಮುಹೂ
ರ್ತಂಗಳು ಕೀಲಗಳು, ವೇದಗಳೇ ಕುದುರೆಗಳು, ಬ್ರಹ್ಮ ಸಾರಥಿ, ಓಂ
ಕಾರವೇ ಚಬುಕ, ಇಂತು ರಥ ಮುಸ್ತೈದೆಯಾಗಿ ಇರಲು ಅಂತಹ
ಶಿವನು ಮೇರುವೆ ಬಿಲ್ಲು, ಶೇಷನೇ ಹೆದೆ, ಚಂದ್ರ ಅಂಬಿನ ಗಣೆ,
ವಾಯು ಹಿಳಿಕು, ವಿಷ್ಣುವೇ ಅಲಗು, ಆದರ ತುದಿಯೇ ಅಗ್ನಿ, ಇಂತಹ
ಬಿಲ್ಲಂಬ ಹಿಡಿದುಕೊಂಡು ಶಿವನು ರಥವನೇರಲು ಆ ರಥ ಭೂಮಿಯಲ್ಲಿ
ಳಿಯಲು ವಿಷ್ಣು ವೃಷಭರೂಪಿನಿಂದೆತ್ತುವಾಗ ಶಿವನು ಸಾಮರ್ಥ್ಯವ
ಕೊಡಲು ಮೇಲಕ್ಕೆ ತಂದನು. ಬಳಿಕಾ ರಥವ ನಡಿಸಿ ತ್ರಿಪುರದ ಹತ್ತಿ
ರಲ್ಲಿ ನಿಲಿಸಿ ಆಗ ಶಿವನು ಬಿಲ್ಲಕೊಪ್ಪಿಗೆ ಹೊರಗೆ ಕೊಂಡು ಮುಗುಳು
ನಗೆಯಿಂದ ತ್ರಿಪುರವ ನೋಡಲು ನೊಸಲಕಣ್ಣಾ ಕಿಡಿ ಹೋಗಿ ತ್ರಿಪು
ರವ ಸುಡಲು ಆಗ ವಿಷ್ಣು ಅಂಬಾಗಿ ವ್ಯರ್ಥವಾದೆನಲ್ಲಾ ಎನಲು ಆಗ
ಬಿಲ್ಲನೇರಿಸಿ ಎಸೆಯಲು ತಿಗುರಿಯಂತೆ ತಿರುಗುವ ಮುಪ್ಪುರಗಳ ಕೀಲು
ಕಳಚಿ ಉರಿದು ಬಿದ್ದವು. ಮೂರು ಪುರದಲ್ಲಿದ್ದ ಪರಮ ಯೋಗಿ ಏಕ
ಶಿಲ ವಿರಕ್ತ ಇವರು ವಿಷ್ಣುವಿನ ಮಾಯೆಗೆ ಒಳಗಾಗದ ಕಾರಣ
ಉಳಿದು ಬಂದು ಶಿವನಿಗೆ ನಮಸ್ಕರಿಸಲು ಏನು ಬೇಕೆನಲು ನಿಮ್ಮ
ಕೈಲಾಸದ ಅಂತಃಪುರದ ಬಾಗಿಲಲ್ಲಿ ಇದ್ದವೆನಲು ಹಾಗಾಗಲೆಂದು ಮಡ
ಗಿಕೊಂಡರು. - ತ್ರಿಪುರವ ಸುಟ್ಟ ಮೇಲೆ ದೇವತೆಗಳೆಲ್ಲ ಸುಖದಲ್ಲಿದ್ದರು.

## ಹರಿವಿರಿಂಚಿಗಳು.

ಲಿಂಗೋತ್ಭವ ಸ್ವರೂಪಂ ತು ಪಂಚವಿಂಶತ್ ಪ್ರಕೀರ್ತಿತಂ ಶೈವ
ಪುರಾಣ ಧರ್ಮಸಂಹಿತೆಯಲ್ಲಿ ನಂದೀಶ್ವರನು ಸನತ್ಕುಮಾರಂಗೆ ನಿರೂಪ
ಒಂದು ವೇಳೆ ಬ್ರಹ್ಮ ವಿಷ್ಣುಗಳು ನಾ ಘನ ತಾ ಘನವೆಂದು ವಾದಿಸು
ವಾಗ ಆಕಾಶವಾಣಿ ನುಡಿದುದು. ಇಲ್ಲಿ ಒಂದು ಲಿಂಗ ಮೂಡಿತು.
ಆದರಡಿ ಮುಡಿಯ ಕಂಡು ಬಂದರೆ ನೀವೆ ದೊಡ್ಡವರೆನಲು ಆಗ ಉರಿ

ಲಿಂಗ ಮೂಡಲು ವಿಷ್ಣು ಸೂಕರನಾಗಿ ಸಪ್ತ ಪಾತಾಳಕ್ಕೆ ಹೋಗಿ ಪಾದವ ಕಾಣದೆ ತಿರುಗಿದನು. ಬ್ರಹ್ಮ ಹದ್ದಾಗಿ ಬ್ರಹ್ಮಾಂಡ ತನಕ ಹೋಗುತ್ತಿರಲು, ಆಗ ಕೇದಗೆ ರಾಜನು ಕಾಮಧೇನುವು ಕಂಡು ಪಕ್ಷಿಯೇ ಎಲ್ಲಿಗೆ ಹೋದೆ ಎನಲು ಶಿವನ ಮುಕುಟವ ಕಾಂಬುವುದಕ್ಕೆ, ನಲುಗಿ ಕಾಣಲಾರೆ ತಿರುಗಿ ಎನಲು, ವಿಷ್ಣುವಿನ ಕೂಡೆ ವಾದಿಸಿ ಬಂದೆನೆನಲು ಕಂಡೆವೆಂದು ನುಡಿ ಎನಲು ತಿರುಗಿ ಬರಲು ದೇವತೆಗಳೆಂದರು, ಬ್ರಹ್ಮ ಮುಕುಟವ ಕಂಡೆಯಾ ಎನಲು ಕಂಡೆನೆಂದನು. ಅವರು ಸತ್ಯವೇ ಎನಲು, ಆಗ ಕೇದಗೆರಾಜನು ಕಾಮಧೇನುಗಳಿಬ್ಬರೂ ಕಂಡನಹುದು ಎನಲು, ಆಗ ಆಕಾಶವಾಣಿ ಕೇಳಿ ಮೂವರ ವಾಕ್ಯವು ಸಟೆ ಎನಲು ಆಗ ದೇವತೆಗಳು ಕೇದಗೆಯೇ ಪೂಜೆಗೆ ಸಲ್ಲಬೇಡ, ಬ್ರಹ್ಮ ನೀನು ಗುಡಿಯಲ್ಲಿ ಪೂಜೆಗೊಳಬೇಡ, ವಿಷ್ಣುವೇ ನೀನು ಸತ್ಯವನಾಡಿದೆ, ನಿನಗೆ ಪೂಜೆಯಾಗಲಿ.

ಬಳಿಕ ಇತ್ತ ಕಲ್ಯಾಣದಲ್ಲಿ ಬಿಜ್ಜಳಗೆ ಕೇದಿಗೆ ಪುಷ್ಪಗಳು ಕಾಣಿಕೆ ಬರಲು ಒಂದೆಸಳ ಬಸವೇಶ್ವರಗೆ ಕೊಡಲು ಆದರೊಳೊಂದೆಸಳ ತಮ್ಮ ಲಿಂಗಕ್ಕೆ ಧರಿಸಲು ಆಗ ಬಿಟ್ಟಿಸಳ ಸಲ್ಲದುದ ಹೇಗೆ ಧರಿಸಿವಿರೆನಲು ಭಕ್ತ ತಂದರ್ಪಿಸಿದ ವಸ್ತುವ ಶಿವ ಕೈಕೊಂಬುತಾನೆ ಎನಲು ಅದ ತೋರಿ ಎನಲು, ಆಗ ಬಿಜ್ಜಳ ಸಹವಾಗಿ ಲಿಂಗಗಳ ನೋಡಲು, ಎಲ್ಲಾ ಲಿಂಗಗಳ ಮೇಲೆ ಒಂದೊಂದೆಸಳಿರಲು ಬಿಜ್ಜಳ ತಲೆದೂಗಿದನು.

### ಉಮೆಯ ಕಲ್ಯಾಣ.

ವೈವಾಹಂ ಪಂಚಮಂ ವಿಂಧ್ಯ ಶಿವನು ನಂದೀಶ್ವರಂಗೆ ನಿರೂಪಿಸಿದರು, ನಂದಿಕೇಶ್ವರನು ಸನತ್ಕುಂಮಾರಂಗೆ ನಿರೂಪಿಸಿದರು, ಸನತ್ಕುಮಾರ ವೇದವ್ಯಾಸಂಗೆ, ವ್ಯಾಸ ಸೂತಂಗೆ ನಿರೂಪಿಸಿದರು. ಅತ್ತ ಓಷಧೀಪ್ರಸ ಪುರದಲ್ಲಿ ಗಿರಿರಾಜ ಮೇನಕಾ ದೇವಿಯರು ತಮಗೆ ಮಗಳಾಗಬೇಕೆಂದು ತಪವ ಮಾಡುತ್ತಿರಲು ದೇವಿಯರ ತಪಕ್ಕೆ ಮೆಚ್ಚಿ ಮಾನಸ ಸರೋವರದಲ್ಲಿದ್ದ ನೈದಿಲೆ ಪುಷ್ಪದೊಳಗೆ ಶಿಶು ರೂಪಾಗಿ ಕಾಣಿಸಿಕೊಂಡು ಬಳಿಕ ಚತುರ್ಮುಖ ಅಷ್ಟಭುಜವ ತೋರಲು ಅದ ಕಂಡು ಹೆದರಲು ಮತ್ತೆ ಶಿಶುವಾದಳು. ಆಗ ಎತ್ತಿಕೊಂಡು ಹೋಗಿ ಮೇನಕಾದೇವಿಯ ಕೈಯ್ಯಲ್ಲಿ ಕೊಡಲು ಆಕೆ ಸಲಹಿದಳು. ಬಳಿಕ



ಜವ್ವನವಾಗಲು ಕಶ್ಯಪ, ಅತ್ರಿ, ಭಾರದ್ವಾಜ, ವಿಶ್ವಾಮಿತ್ರ, ಗೌತುಮ, ಜಮದಗ್ನಿ, ವಸಿಷ್ಠರೆಂಬ ಈ ಸಪ್ತಋಷಿಗಳ ಕೆಯ್ಯಕೇಳಿಸಿ ಶಿವನು ಪಾರ್ವತಿಯ ಮದುವೆಯಾಗಿ ಕೈಲಾಸದಲ್ಲಿದ್ದರು.

---

## ೪ ನೆಯ ವಚನದ ಕಥೆ. (೧-೩)

### ಬಸವ.

ಬಸವೇಶ್ವರನು ಜನನಿಯ ಮೊಲೆಹಾಲು ಹಾಲು ಬೆಣ್ಣೆಗೆ ಬಾಯ್ದೆರೆಯದೆ ಲಿಂಗ ಪ್ರಸಾದದ ಸಂತೋಷದಲ್ಲಿ ಸುಮ್ಮನಿರ್ದರು.

### ನಂದೀಶ್ವರ.

ನಂದೀಶ್ವರನ ಉತ್ಪತ್ತಿ-ಬ್ರಹ್ಮಂಗೆ ನಾಲ್ಕು ಯುಗವು ನಾಲ್ಕು ಸಾವಿರ ಬಾರೆ ತಿರುಗಲು ಒಂದು ದಿನ. ಅಂತಹ ದಿನ ಮುನ್ನೂರರುವತ್ತಾದರೆ ಒಂದು ವರುಷ. ಅಂತಹ ವರುಷ ನೂರಾದರೆ ಬ್ರಹ್ಮಂಗೆ ಮರಣ. ಅವನ ನೂರು ವರುಷ ವಿಷ್ಣುವಿಂಗೆ ಒಂದು ದಿನ. ಅಂತಹ ದಿನ ಮುನ್ನೂರುವತ್ತಾದರೆ ಒಂದು ವರುಷ. ಆ ವರುಷ ನೂರಾದರೆ ವಿಷ್ಣುವಿಂಗೆ ಮರಣವೆಂದರಿವುದು. ಎನುತಂ ಆ ಶಿವನಂತರಂಗದಲ್ಲಿರ್ದ ಧರ್ಮವು ಶಿವನಪ್ಪಣೆಯಿಂದ ಬ್ರಹ್ಮಾಂಡದಲ್ಲಿ ಸಂಚರಿಸುತ್ತಿರ್ದ ಬ್ರಹ್ಮ ವಿಷ್ಣುಗಳ ಪ್ರಳಯಮಂ ಕಂಡಂಜಿ ಶಿವನ ಸಮೀಪಕ್ಕೆ ಬಂದು ಮೊದಲಂತೆ ನಿನ್ನ ಕುಕ್ಷಿಯೊಳಗಿರ್ದೆನೆಂದು ಪೇಳಲು ಆಗ ಶಿವನು ಮಹಾ ಪರಾಕ್ರಮುವ ತೊಟ್ಟ ವೃಷಭ ರೂಪಿನಿಂದೆ ನಮ್ಮ ವಾಹನ ವಾಗು, ನಂದೀಶ್ವರನೆಂಬ ನಾಮದಿಂದೆ ಗಣಾಗ್ರಣಿಯಾಗಿರು ಎಂದರು. ಬಳಿಕ ನಂದೀಶ್ವರನುತ್ಪತ್ತಿ ಎಂತೆಂದೊಡೆ— ಶಾಲಂಕಾಯನ ಋಷಿಯ ಕುಮಾರನಾದ ಶಿಲಾದ ಮುನಿಯು ಪುತ್ರನಾಗಬೇಕೆಂದು ತಪವ ಮಾಡುವಾಗ ಮಂಜಿನ ಹನಿ ಗಡ್ಡೆ ಬೇರು ಪರ್ಣ ಹಣ್ಣು ನೀರು ಗಾಳಿ ಸೂರ್ಯಕಿರಣ ಚಂದ್ರಕಿರಣ ಮೊದಲಾದವ ಸೇವಿಸಿ ಮೂರು ಕೋಟಿ ವರುಷ ತಪದಲ್ಲಿರ್ದು ತೋರ ಶಿಲೆಯ ಸೇವಿಸಿಕೊಂಡು ನೂರು ಕೋಟಿ ವರುಷ ವಿದ್ದರು. ಆಗ ಶಿವ ಮೆಚ್ಚಿ ಬೇಡು ಎನಲು ಅದಕ್ಕೆ ಶಿಲಾದ ಮುನಿಯು ಭಕ್ತಿಯುಳ್ಳ ಅಯೋನಿಜನಾದ ಪುತ್ರನಾಗಬೇಕೆನಲು ಅಂತಹವನೆ ಆಗುವ

ನೆಂದು ಶಿವ ನಿರೂಪಿಸಲು ಬಳಿಕ ಶಿಲಾದ ಮುನಿ ತನ್ನಾಶ್ರಮಕ್ಕೆ ಬಂದು ಯಜ್ಞವ ಮಾಡಬೇಕೆಂದು ಭೂಮಿಯ ಶುದ್ಧವ ಮಾಡಲು ಅದಕ್ಕೆ ಚಿನ್ನದ ನೇಗಿಲ ಹೂಡುವಾಗ ತ್ರಿಲೋಚನ ಕೆಂಜೆಡೆಗಳಿಂ ಶಿಶು ರೂಪಾಗಿ ನಂದೀಶ್ವರನು ಕಾಣಿಸಿಕೊಳ್ಳಲು ಶಿಲಾದ ಮುನಿ ಸಂತೋಷ ಪಟ್ಟನು. ಆಗ ಶಿವ ಬಂದು ಆ ಶಿಶುವಿಂಗ ರತ್ನ ಕಿರೀಟವ ಧರಿಸಿ ಜಟಾ ಮುಕುಟ ಗಂಗೆಯಿಂದಭಿಷೇಕವ ಮಾಡುವಾಗ ಕಿರೀಟದಿಂದ ಬಿಂದುದಕವು ಸುವರ್ಣದ ನದಿ ಜಾಂಬುನದಿಗಳಾಗಿ ಹರಿದವು. ಜಟೆ ಯಿಂದಿಳಿದ ಗಂಗೆ ಜಟಾನದಿ ಎನಿಸಿತ್ತು. ಆ ವೃಷಭೇಶ್ವರ ಡುರುಕೆಯ ಹಾಕಲು ವೃಷಭಧ್ವನಿ ಎಂಬ ನದಿಯಾಯಿತ್ತು. ದೇವಿಯರ ಮೊಲೆ ತೊರೆದು ಸುರಿಯೆ ಕುಚಕ್ಷಿಕೆ ಪ್ರಾತಸ್ವನಿಗಳೆಂಬ ನದಿಗಳಾಗಿ ಹರಿದವು. ಆಮೇಲೆ ಶಿಲಾದಮುನಿಯು ಶಿಶುವನೆತ್ತಿಕೊಂಡು ತನ್ನಾಶ್ರಮಕ್ಕೆ ಹೋಗಿ ನಂದೀಶ್ವರನೆಂಬ ಹಸರಿಟ್ಟು ಸುಖದಲ್ಲಿದ್ದರು.

### ಸ್ಕಂದ.

ತ್ರೇತಾ ಯುಗದಲ್ಲಿ ಪರಶಿವನು ತ್ರಿಪುರದಹನವ ಮಾಡುವಲ್ಲಿ ಸ್ಕಂದನೆಂಬ ಗಣೇಶ್ವರನಾಗಿರ್ದನು ಬಸವಣ್ಣನು.

### ನೀಲಲೋಹಿತ.

ಪರಶಿವನು ಅಂಧಕಾಸುರನ ಕೊಲ್ಲುವಲ್ಲಿ ನೀಲಲೋಹಿತನೆಂಬ ಗಣೇಶ್ವರನಾಗಿರ್ದನು ಬಸವಣ್ಣನು.

### ಮನೋಹರ.

ಘಂಟಾಕರ್ಣನು ನಿರ್ಮಾಲ್ಯ ಪುಷ್ಪವ ಸೂರ್ಯನ ಆಕರ್ಷಿಸಿದನೆನೆ ಕುಷ್ಟ ರೋಗಿಯಾಗೆಂದು ಶಾಪಿಸಿ ಮನೋಹರ ಗಣೇಶ್ವರನ ಪಾದಾಂಬುವಿಂದ ಸೂರ್ಯನು ತನ್ನ ತೇಜಸ್ಸವ ಪಡೆದನು.

### ಕಾಲಲೋಚನ.

ಪರಶಿವನು ಉಮೆಯ ಕಲ್ಯಾಣದಲ್ಲಿ ಕಾಲಲೋಚನನೆಂಬ ಗಣೇಶ್ವರನಾಗಿರ್ದ ಬಸವಣ್ಣನು.

### ವೃಷಭ.

ತೃತೀಯಂ ವೃಷಭಾರೂಢಂ ಸ್ಕಂದ ಪುರಾಣದಲ್ಲಿಯ ಕಾಳಿಕಾ ಖಂಡದಲ್ಲಿ ಷಣ್ಮುಖನು ಆಗಸ್ತ್ಯರಿಗೆ ನಿರೂಪ. ಸಕಲ ತತ್ವಲಯ



ಕಾಲದಲ್ಲಿ ಹೇಳಿದ ಸದ್ಧರ್ಮರೂಪ ವೃಷಭನನೆ ವಾಹನವಾಗಿ ಧರಿಸಿದನು.

### ಬಸವ.

ಶ್ರೀಮತ್ಪರಮೇಶ್ವರನ ಒಡ್ಡೋಲಗದಲ್ಲಿ ಸಮಸ್ತರು ಒಡ್ಡೋಲಗಂಗೊಟ್ಟಿರಲು ನಾರದನ ದರುಶನ ಲೋಕಂಗಳಲ್ಲಿ ಶಿವಾಚಾರ ಮಸುಳಿಸಿದ್ದಿತ್ತು ನೀವು ಚಿತ್ತೈಸಬೇಕೆಂದು ಬಿನ್ನವಿಸೆ, ನಾನೆಂದಡೂ ನಂದೀಶ್ವರನೆಂದಡೂ ಒಂದೇ ಎಂದು ನಂದಿಕೇಶ್ವರಂಗೆ ಆಜ್ಞಾಪಿಸಲು, ಇಂಗುಳೇಶ್ವರ, ಬಾಗವಾಡಿಯ ಮಂಡಿಗೆಯ ಮಾದಿರಾಜನ ಭಾರ್ಯೆ ಮಾದಲಾಂಬಿಕೆ ವೃಷಭನ ನೋಂತು ಸುತನ ಕೊಡೆಂದು ವಂದಿಸಿ ಅವರಿಗೆ ಆ ವೃಷಭೇಶ್ವರನ ಬಸವನಾಮದಲ್ಲಿ ಅಯೋನಿಜವಾಗಿ ಸಂಗಮೇಶ್ವರನೆ ಗುರುವಾಗಿ ಉಪದೇಶವನೀಯಲು ಬಾಲಲೀಲೆಯಲ್ಲಿ ಅನಂತ ಪವಾಡವಂ ಮೆರೆವುತ್ತ ಪೂರ್ವ ಕ್ರಿಯವಂ ತೊರೆದು ವೀರಶೈವಾಚಾರದಿಂದಿರೆ ಬಲದೇವ ಮಂತ್ರಿಯು ತನ್ನ ತನುಜೆ ಗಂಗಾಂಬಿಕೆಯ ವಿವಾಹಂ ಮಾಡಿ ಅವರಿಂ ಕಳುಹಿಸಿಕೊಂಡು ಬಸವೇಶ್ವರನು ಸಂಗಮೇಶ್ವರಕ್ಕೆ ಬರೆ ಬಲದೇವ ಮಂತ್ರಿ ಶಿವಲೋಕಕ್ಕೈದೆ, ಬಿಜ್ಜಳನು ಆಳೋಚಿಸಿ ಬಸವೇಶ್ವರನಂ ಕಲ್ಯಾಣಕ್ಕೆ ಕರಿಸಿ ಇದಿರ್ಗೊಂಡು ಬಂದು ಓಲಗಸಾಲೆಯಲ್ಲಿ ಸುಖಗೋಷ್ಠಿಯಲ್ಲಿರೆ ಶಿವನಿರ್ಮಿತದ ಲಿಪಿಯ ಶಾಸನದ ಓಲೆ ಬರೆ ಬಿಜ್ಜಳ ತರಿಸಿ ಓದಿ ನೋಡಿ ಆರಿಗೂ ತಿಳಿಯದಿರಲು ಬಸವಣ್ಣನ ಕೆಯ್ಯಲು ಕೊಡೆ, ಶಿವಶರಣೆಂದು ಓದಿ ನೋಡಿ ಮೆಟ್ಟಿ ತೆಗಿಸಿದ ಐವತ್ತಾರು ಕೋಟಿ ವಸ್ತುವನೆಂದು ದಂಡೇಶಗೆ ಪಟ್ಟವಂ ಕಟ್ಟಿ, ಬಳಿಕ ಬಿಜ್ಜಳ ತಮ್ಮ ತಂದೆತಾಯೆ ಸಾವಲ್ಲಿ ನಮ್ಮ ತಮ್ಮ ಕರ್ಣದೇವನ ಸಿದ್ಧ ದಣ್ಣಾಯಕರ ಸ್ತ್ರೀ ಪದ್ಮಗಂಧಿಯು ಸಾಕಿದಳು. ಆಕೆಯ ಸುತೆಯು ನೀಲಲೋಚನೆಯಮ್ಮನು ನಮ್ಮ ತಂಗಿ ಎಂದು ಬಸವೇಶ್ವರಂಗೆ ವಿವಾಹವ ಮಾಡಿ ಸಾಮ್ರಾಜ್ಯಂ ಗೆಯ್ಯುತ್ತಿರಲು ಇತ್ತ ಬಸವೇಶ್ವರನು ಪಂಚಪರುಷಮೂರ್ತಿಯಾಗಿ ಶಿವಭಕ್ತ ಮಾಹೇಶ್ವರರಿಗೆ ನಿರ್ವಂಚಕತ್ವದಿಂ ದಾಸೋಹವ ಮಾಡುವ ಪರಿಕ್ರಮವೆಂತೆಂದೊಡೆ, ಬೆರಳುಗಳ ಹಡೆದೆನೆಂದು ದುರುಳತನದಲ್ಲಿದ್ದಡೆ ಹರ ತಾ ಕಳುಹಸೆ, ಬಸವಣ್ಣನ ನೋಡಲೆಂದು ಮುತ್ತಿನ ರಂಗ ಓಲೆಯ ನೇಮ ಉಂಟೆಂದಡೆ ಮನಸೃಷ್ಟಿ ಹಸ್ತ ಪರುಷವಾಗಿ ನೋಡಿದರೆ ಜೋಳ ತೊಗರೆ ಅವರೆ ಮುತ್ತು ಮಾಣಿಕವಾಗವೆ, ಬಂದಿ ಹಿಡಿಯ ಬಂದಲ್ಲಿ ಬದನೆ ಲಿಂಗ

ವಾಗದೆ, ಭಕ್ತನೆ ಕುಲಜನೆಂದಡೆ ರುಧಿರ ಹಾಲಾಗದೆ, ವಿಷಧರಂಗೆ ವಿಷವಮೃತವಾಗದೆ, ಪರಮಾರ್ಥವ ನೋಡಿಹೆನೆಂದಲಗ ಕಳುಹಿದಡೆ ಭಕ್ತಿ ಮುಂತಾಗಿ ಬಾರನೆ ಪ್ರಭುದೇವರು ಇದು ಕಾರಣ ಕೂಡಲ ಚನ್ನ ಸಂಗಾ ನಿಮ್ಮದಾಗಿ ತನುವ ಬಸವಣ್ಣಗಿತ್ತೆ.

ದಾಮೋದರನೆಂಬ ವಿಪ್ರನ ಮಗ ಭೀಮರಥಿಯಲ್ಲಿ ಮುಳುಗಿ ಸಾಯಲು ಬಸವಣ್ಣ ನೂಕಿದನೆಂದು ಪೇಳಲು ಆಗ ವಿಪ್ರರು ಹೊಡಿ ಬಡಿಯೆಂದು ಬೆನ್ನಟ್ಟ ಬರಲು ಮುಂದೆ ಕೃಷ್ಣವೇಣಿ ಎಂಬ ನದೆ ಬಸವಣ್ಣಂಗೆ ದಾರಿಯ ಕೊಡಲು ವಿಪ್ರರು ಹರಿಗೋಲಿನಿಂದ ಬರಲು ಅವರಿಗೆ ಜನಾರ್ದನನ ಮಗು ಕೃಷ್ಣ ನೂಕಿದನೆಂದು ಸಂಗಮೇಶ್ವರನ ಕೆಯ್ಯ ಸಾಕ್ಷಿಯ ನುಡಿಸಲು ಆಗ ವಿಪ್ರರು ಬಸವಣ್ಣಂಗೆ ನಮಸ್ಕರಿಸಿ ಹೋದರು.

ಕನ್ನದ ಚಾಮಯ್ಯನು ಬಿಜ್ಜಳನ ಮನೆಯ ಕನ್ನವಿಕ್ಕಿ ಬಸವೇಶ್ವರನು ಕನ್ನದ ಮಣ್ಣ ಚಿನ್ನವ ಮಾಡಿ ಕೊಟ್ಟನು.

ಬಿಜ್ಜಳನು ಪೆಟ್ಟಿಗೆಯ ಧನವ ಬಂಗಾರವ ಮಾಡೆಂದು ಚಿನ್ನಗಾಯಕದ ಬೊಮ್ಮಣ್ಣಂಗೆ ಕೊಡೆ ಜಂಗಮಕ್ಕೀಯಲು ಬಿಜ್ಜಳ ಕೋಪಿಸೆ ಬಸವೇಶ್ವರನಿಂದ ವಾಕ್ಪರುಷವ ಪಡೆದು ಮುನ್ನಿನಂತೆ ಕೊಟ್ಟರು.

ಶ್ರವದೊಡನೆ ಕಿಚ್ಚ ಹಾಯ್ವಳು ಬಸವೇಶ್ವರಗೆ ವಂದಿಸಿ ಮುತ್ತೈದೆಯಾಗೆನೆ ಪ್ರಾಣವ ಕೊಟ್ಟರು.

ಒಬ್ಬ ಜಂಗಮ ಕಂಡುಗ ಮುತ್ತಿನ ರಂಗ ಓಲೆಯ ನೇಮವನೆ ಜೋಳದ ರಾಶಿಯ ನೋಡಿ ಬಸವೇಶ್ವರನು ಮುತ್ತ ಮಾಡಿಕೊಟ್ಟರು.

ಒಬ್ಬ ಜಂಗಮಕ್ಕೆ ಬಿತ್ತಿಯ ಪಲಸಿನ ಫಲವ ಮಾಡಿ ಬಸವೇಶ್ವರನು ಕೊಟ್ಟರು.

ಬಸವೇಶ್ವರನು ಶಿವನಾಗಮಯ್ಯನ ಬೆರಳಲಿ ಅಮೃತವ ಕರೆದರು.

ಬಸವಣ್ಣನ ಬಳಿಗೆ ಬಂದು ಸರ್ವೇಶನು ಹಾಲನೇಮ ನಮಗೆನೆ ಗೊಡ್ಡ ಹಸುವ ಕರೆದು ಕೊಟ್ಟರು.

ಕಲ್ಯಾಣದಲ್ಲಿ ಕಪಿಲ ಮುನಿಯು ಕಪಿಲೇಶ್ವರ ಲಿಂಗಕ್ಕೆ ಸಾವಿರ ದಾರು ನೂರು ಖಂಡುಗ ಹಾಲಿನಲ್ಲಿ ಅಭಿಷೇಕವ ಮಾಡಲು ಹರಿದು ಬೀದಿಯಲ್ಲಿ ಕೆಸರಾಗಿರಲು ಆಗ ಕಾರಿಕೆ ಎಂಬ ಗೊಲ್ಲಿತಿ ಮಜ್ಜಿಗೆಯ ಕೊಡನ ಹೊತ್ತುಕೊಂಡು ಹೋಗುತ್ತ ಆ ಕೆಸರಲ್ಲಿ ಜಾರಿ ಬೀಳುವಾಗ



ಬಸವಣ್ಣಾ ಎನಲು ಇತ್ತ ಬಿಜ್ಜಳನ ಸಭೆಯಲ್ಲಿ ಬಸವೇಶ್ವರನು ಕೆಯ್ಯ ನೀಡಲು ಆಗ ಬಿಜ್ಜಳ ನಗುತ ಬಸವಣ್ಣಾ ಕೆಯ್ಯ ನೀಡಿ ಏನು ಹಿಡಿದೆ ಎನೆಲು ಗೊಲ್ಲಿತಿಯ ಹಿಡಿದೆನೆನಲು ಅದಕ್ಕೆ ಬಿಜ್ಜಳ ಈ ದೃಷ್ಟವ ನೋಡಬೇಕೆಂದು ಸಾವಿರ ನೀರ ಹೆಣ್ಣುಮಕ್ಕಳ ಮೇಲೆ ಹೊರಿಸಿ ನೀವು ಬಸವಣ್ಣಾ ಎಂದು ಕೊಡಗಳ ಬಿಸಾಡಿ ಎನಲು ಹಾಗೆ ಅವರು ಬಸವಣ್ಣಾ ಎಂದು ಕೊಡಗಳ ಬಿಸುಟರು. ಅಷ್ಟು ಕೊಡಗಳನು ಅಂತರದಲ್ಲಿ ನಿಲಿಸಲು ಆ ಮಹಿಮೆಯ ಕಂಡು ಪಾದಗಾಣಿಕೆಯ ಮಾಡಿ ಶರಣೆಂದನು.

ಬಸವಣ್ಣನು ಬೇವಿನ ಕುಸುಮವ ಭಾವಲಿಂಗಕ್ಕರ್ಪಿಸಿದೆವೆನೆ, ಇಲ್ಲ ಎಂದು ಅರಸು ನುಡಿಯೆ, ಎಲ್ಲ ಲಿಂಗದಲ್ಲಿಯೂ ತೋರಿದರು.

ಬಿಜ್ಜಳನು ಬಸವೇಶ್ವರಂಗೆ ಕೇತಕೀ ಪುಷ್ಪವ ಕೊಡೆ ಲಿಂಗಕ್ಕೆ ಅರ್ಪಿಸಿ ಹಾಸ್ಯವ ಮಾಡೆ, ಎಲ್ಲ ಲಿಂಗದ ಮಸ್ತಕದ ಮೇಲೆ ತೋರಿದರು.

## ೩ನೆಯ ವಚನದ ಕಥೆ. (೨-೪)

### ಕಕ್ಕಯ್ಯ.

ಕಕ್ಕಯ್ಯಗಳ ಪುಣ್ಯ ಸ್ತ್ರೀಯಳು ಹೊರಬಾಗಿಲಲ್ಲಿ ನಿಂದಿರಲು ಅಕ್ಕರಿಂದೆ ಮಿಗೆ ಮೀರಿ ಬಸವೇಶ್ವರನ ಕಾಣುತ್ತ ಇಕ್ಕಿದಳು ಮುಡಿಯ ಶರಣಾರ್ಥಿ ಎಂದು ಎರಡು ಕರಂಗಳಂ ಮುಗಿದು ಕಿಂಕುರ್ವಾಣ ಭಯಭಕ್ತಿಯಿಂದ ಮಕ್ಕಳಲ್ಲಿ ಪ್ರಸಾದವನು ಕೈಕೊಳ್ಳಿ ಬನ್ನಿ ಎಂದು ಬಿನ್ನೈಸಿದಳು ಬಸವೇಶ್ವರ ದೇವರಿಗೆ. ಆ ಬಸವೇಶ್ವರ ದೇವರು ಲೆಕ್ಕಿಸದೆ ಅಡಿ ಇಟ್ಟು ಮುಂದಕ್ಕೆ ಒಲ್ಲದೆ ಹೋದರೆಂದು ತಮ್ಮ ಮನವು ಲಿಂಗದಲ್ಲಿ ಕಂದಿ ಕುಂದಿ ಕುದಿದು ಕೋಟಲೆಗೊಂಡು, ಪ್ರಸಾದ ವಾಕ್ಯವು ಬೇಸರವಾಯಿತ್ತೆಂದು ಕಕ್ಕಯ್ಯಗಳಿಗೆ ನಿರೂಪಿಸಿದಳು. ಪಾವನ ಸ್ವರೂಪಿಯ ಆ ಪ್ರಸಾದ ವಾಕ್ಯಮಂ ಕೇಳಿ ವಿಸ್ಮಯಂ ಬಟ್ಟು ಹರ ಹರಾ ಶಿವಶಿವಾ ನಾವು ಬಸವರಾಜದೇವರ ಪಾದ ಚರಣಕ್ಕೆ ಸರಿಯಪ್ಪೆವೆ ಎಂದು ಕೋಪಿಸಿ, ಝುಂಕಿಸಿ ನುಡಿದರು ತಮ್ಮ ಸ್ತ್ರೀಯಳಿಗೆ. ಆ ಬಿಜ್ಜಳನ ಓಲಗದಿಂದ ಬಸವೇಶ್ವರದೇವರು ತಮ್ಮ ಮಂದಿರಕ್ಕೆ ಬಂದು ತಮ್ಮ ಮನೋಮೂರ್ತಿ ಲಿಂಗದಲ್ಲಿ ತಿಳಿದು ನೋಡಿ ಮರ

ಹೆಂಬ ಮರುಳು ಮಾಯೆಯ ಕಡೆಗೆ ನೂಂಕಿಸಿ ಆರುಹು ಹೀನ ಕುರುಹಿನ ತ್ರಿವಿಧ ಸುಧಾಕರನ ಶೇಖರನ ಬೆಳಗಿನೊಳು ಕಂಡನು ಪ್ರಸಾದದ ಘನ ಮಹಾತ್ಮೆಯ. ಆ ಕಕ್ಕಯ್ಯಗಳ ತೊತ್ತಿನ ತೊತ್ತಿನ ಪಡಿದೊತ್ತಿನ ಮಗ ನಾನೆಂದು ಹನ್ನೆರಡು ವರುಷ ಬಾಗಿಲ ಕಾಯ್ದು ಕಕ್ಕಯ್ಯಗಳಲ್ಲಿ ಆ ಬಸವೇಶ್ವರ ದೇವರು ತಮ್ಮ ಕುಲವೆಂದು ಪಿಪೀಲಿಕವ ಮಾಡಿ ಆ ಕಕ್ಕಯ್ಯಗಳ ಮನೆಯಲ್ಲಿ ಬೀಸರವಾದ ಪ್ರಸಾದವನು ಕಟ್ಟಿಕೊಂಡು ಬರಲಿಕ್ಕೆ ಸಕ್ಕರೆಯ ನೀಡಿಕೊಂಡು ಬಂದು ತಮ್ಮ ಬಸವೇಶ್ವರ ದೇವರು ಆ ಪ್ರಸಾದವನು ಮಿಕ್ಕು ಮೀರಿ ಅಕ್ಕ ನಾಗಮ್ಮ ಸಲಿಸಿ ಚಿಕ್ಕದಣ್ಣಾಯಕರ ಪಡೆದಳು. ಮಿಕ್ಕಿನ ಚುಕ್ಕಿನ ಹುಳು ಮಾನವರ ಕುಲವೆತ್ತ, ಪ್ರಸಾದದ ಕಲೆ ಎತ್ತ? ಇದ ನೀವೆ ಬಲ್ಲಿರಿ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಬಸವ ಪ್ರಿಯ ಕೂಡಲ ಚನ್ನಸಂಗಮದೇವಾ.

## ೨೫ನೆಯ ವಚನದ ಕಥೆ. (೫-೧೯)

### ಚಂದ್ರ

ದಕ್ಷನು ತನ್ನ ೨೭ ಹೆಣ್ಣುಮಕ್ಕಳ ಚಂದ್ರನಿಗೆ ಮದುವೆಯ ಮಾಡಿ ಚಂದ್ರನು ಎಲ್ಲರನು ಬಿಟ್ಟು ರೋಹಿಣಿಯಲ್ಲಿಯೇ ನೇಹ ಬಲಿದಿರೆ ಎಲ್ಲ ಸ್ತ್ರೀಯರು ದುಃಖವ ಮಾಡಿ ದಕ್ಷನು ಕೇಳಿ ಕಲಾಹೀನನಾಗೆಂದು ಶಪಿಸಿ ಶಿವನ ಸ್ತುತಿಸೆ ಕಲೆಗಳು ಪೆರ್ಚಿದವು. ಆ ಕಲೆಯನೊಂದ ಶಿವನು ಧರಿಸಿದನು. ಚಂದ್ರಂಗೆ ವರವಿತ್ತನು. ಕಲೆಯ ಧರಿಸಿದ ದಿನ ಅಮಾವಾಸ್ಯೆ ತಿಥಿಯಾಯಿತ್ತು. ಆ ಚಂದ್ರನು ಸಮುದ್ರಕ್ಕೆ ಮಗನಾದ ಕಾರಣ ಆ ಚಂದ್ರನ ಕಲೆ ಕೃಷ್ಣಪಕ್ಷಗಳಲ್ಲಿ ಹೆಚ್ಚಿದೊಡೆ ಹೆಚ್ಚುವುದು, ಕುಂದಿದೊಡೆ ಕುಂದುವುದು.

### ರಾಹು ಕೇತು.

ಪೌಲಸ್ತ್ಯ ಬ್ರಹ್ಮನ ಸತಿಯರುಂ ದಿತಿ ಅದಿತಿ ಅವರಿಗೆ ಹುಟ್ಟಿದ ದೇವ ದಾನವರಿಗೆ ನಾರದ ದಾಯಾದಿ ವಿಷಯವ ಹುಟ್ಟಿಸಲು ಆ ಕದನದಿಂ ಇತ್ತಂಡಕ್ಕು ಮಥನವಾಗಲು, ಆ ಸಮಯದಲ್ಲಿ ನಾರಾಯಣನು ಈರ್ವರಿಗು ಮಧ್ಯಸ್ತನಾಗಿ ಐವತ್ತು ಕೋಟಿ ಯೋಜನದೊಂದು ನಡುವೆ ಹೊರೆಯುಳ್ಳ ಜಾಳಗಿಂಡಿಯ ನಿರ್ಮಿಸಿ ಒಂದು ಭಾಗದಲ್ಲಿ ಅಮೃತವ ತುಂಬಿ



ಒಂದು ಭಾಗದಲ್ಲಿ ಸುರೆಯ ತುಂಬಿ ಒಂದು ಭಾಗದಿ ದೇವತೆಗಳ ತಂಡ ಮತ್ತೊಂದು ಭಾಗದಿ ರಕ್ಕಸರ ತಂಡವ ಕುಳ್ಳಿರಿಸಿ ಒಂದೇ ಗಿಂಡಿಯಿಂದಿತ್ತಂಡಕ್ಕೂ ಆಹಾರವ ಕೊಡುವ ಸಮಯದಲ್ಲಿ ಓರ್ವ ಸರ್ಪಾಕಾರದ ಮುರನೆಂಬ ರಕ್ಕಸನು ಕಳಂಕಿನಿಂದೆ ದೇವತೆಗಳ ಮಧ್ಯದಲ್ಲಿ ಕುಳಿತು ಅಮೃತವ ಸೇವಿಸಲು ಆ ಸಮಯದಲ್ಲಿ ದೇವತೆಗಳ ಸಂಬಂಧವಾದ ಚಂದ್ರ ಸೂರ್ಯರು ವಿಷ್ಣುವಿಗೆ ದೂರಲು ಆ ವಿಷ್ಣು ಚಕ್ರದಿಂದಡಲು ಶಿರವರಿಯೆ ಆ ಅಮೃತದ ಸಾಮರ್ಥ್ಯದಿಂದ ಅವರು ನಿತ್ಯತ್ವವ ತಾಳಿ ತಮ್ಮ ಆಹಾರ ಗಂಟಕರಾದ ಚಂದ್ರಸೂರ್ಯಗಳನೆ ಆಹಾರವ ಕಾಂಬೆವೆಂದು ಈಶ್ವರ ನಿಂದೆ ವರವಂ ಪಡೆಯಲು ಸರ್ವೇಶ್ವರನು ಅವರಿಗೆ ವರುಷಕ್ಕೆ ಒಂದು ವೇಳೆ ನಿಮ್ಮ ಹಗೆಯ ತೀರಿಸಿಕೊಳ್ಳೆಂದು ಆಜ್ಞಾಪಿಸಲು ಅದೇ ಮರೆಯಾದಿಯಲ್ಲಿ ಸೂರ್ಯಂಗೆ ಶರೀರ ಸಂಬಂಧವಾದ ಕೇತು ಚಂದ್ರಂಗೆ ಶರೀರ ಸಂಬಂಧವಾದ ರಾಹು ಗ್ರಹಿಸುವದು. ಅದು ಕಾರಣದಿಂ "ಚಂದ್ರಂಗೆ ರಾಹು ಅಡ್ಡ ಬಂದರೆ ಅಂಬುಧಿ ಬೊಬ್ಬಿಟ್ಟಿತ್ತೆ".

### ಆಗಸ್ತ್ಯ.

ಅಗಸ್ತ್ಯನ ಶಿಷ್ಯರು ಕಮಂಡಲವ ತೊಳೆಯುತ್ತಿರೆ ನದಿ ನುಂಗಲು ಒಕ್ಕುಡಿತೆ ಮಾಡೆ ಸುರರು ನುತಿಸೆ ಉಗುಳಿದನು. ಭಸ್ಮದ ಮಹಾತ್ಮೆಯಿಂ ಶರಧಿಯ ನಿರ್ಮಿಸಿದನು. ಅಗಸ್ತ್ಯನ ಶಿಷ್ಯರು ನಿಂದಡೆ ಸೇತುವಾಯಿತ್ತು. ಸಗರನ ಮಗ ಅಜಗರ ಅವನಿಂದ ಅಂಶುಮಾನ್. ಅವನಿಂ ಕಲ್ಪಧರನು ಅವನಿಂದಿಳಿಂಪ ಅವನಿಂ ಭಗೀರಥ ಅವರ ವಂಶದವರ ಕಪಿಲಮುನಿ ಸುಟ್ಟು. ಚಿತ್ರವರ್ಮ ಕುದುರೆಯ ತಂದು ಭಗೀರಥ ದೇವರ ಕುರಿತು ತಪಸ್ಸು ಮಾಡಿ ಗಂಗೆಯ ತರಲು ಜಾಹ್ನು ಮುನಿಯಿಂ ಹಾಗೆ ಅವರಿಂದ ಪಡೆದ.

## ೫೭ ನೇಯ ವಚನದ ಕಥೆ. (೯-೫೧)

### ಗುಪ್ತ ಮಂಚಣ್ಣ

ಸಮುದ್ರದೊಳಗಣ ಸಿಂಪಿನಂತೆಂಬ ವಚನ. ನೀ ಹುಟ್ಟಿಸಿದಲ್ಲಿ ಹುಟ್ಟಿ ಎಂಬ ವಚನ ೫೭ ನೆಯ ವಚನಕ್ಕೆ ಗುಪ್ತ ಮಂಚಣ್ಣಗಳಕಥೆ. ಗುಪ್ತ ಮಂಚಣ್ಣನೆಂಬ ಶರಣನು ಮಣ್ಣಿನಲ್ಲಿ ಚಿನ್ನ, ಕಾಷ್ಠದಲ್ಲಿ ಅಗ್ನಿ ಹುಟ್ಟು

ವಂತೆ ದಾಮೋದರನೆಂಬ ವೈಷ್ಣವಂಗೆ ಹುಟ್ಟಿ ಅರಗಿನ ಮುದ್ರೆಯನೊತ್ತು
ವಂತೆ ಹಣೆಯಲ್ಲಿ ವೈಷ್ಣವ ಮುದ್ರೆಯನೊತ್ತಿಕೊಂಡು ಆ ಕುಲದ ಹೆಣ್ಣ ಮದು
ವೆಯಾಗಿ ಬಳಿಕ ಬಿಜ್ಜಳನ ಮಂತ್ರಿಯಾಗಿ ಸತಿ ಪತಿಗಳು ವೀರಶೈವ
ರಾಗಿ ಗುಪ್ತದಲ್ಲಿ ಜಂಗಮವ ಪೂಜಿಸುತ್ತ ಸಭೆಗೆ ಬರುವಾಗ ಲಿಂಗವ
ಅಮಳೋಕ್ಯವ ಮಾಡಿ ಮುಟ್ಟಿಯನಿಟ್ಟುಕೊಂಡು ಕಿವಿಯಲ್ಲಿ ತೊಳಚಿ
ಕೊರಳಲ್ಲಿ ತಾವರೆಯ ಮಣಿಗಳ ಧರಿಸಿ ಕೊಂಡೆಯವ ಹೇಳುತೆ ಇರುತೆ
ಒಂದು ದಿನ ಲಿಂಗಪೂಜೆಯ ಮಾಡುವಾಗ ಕುಮಂಜನ ಹಾಲು
ಮಡ್ಡಿಗುಗ್ಗುಳ ಮಹಿಸಾಕ್ಷಿ ಮೊದಲಾದ ದಶಾಂಗ ಧೂಪವ ಲಿಂಗಕ್ಕೆ
ಅರ್ಪಿಸಲು ಧೂಪದ ಪರಿಮಳ ಬರಲು ಆ ನೆರಮನೆಯ ವಿಪ್ರ ಗವಾಕ್ಷಿಯ
ಲ್ಲಿ ಕಂಡು ಬಸವಣ್ಣ ಈ ಮಂಚಣ್ಣ ವೈಷ್ಣವನಲ್ಲ, ಶಿವಭಕ್ತನೆನಲು,
ಅದ ಕೇಳಿ ಬಸವಣ್ಣ ಚನ್ನಬಸವಣ್ಣ ಸೊಡ್ಡಳ ಬಾಚರಸಯ್ಯ ಮೊದ
ಲಾದವರು ಮನೆಗೆ ಬಂದು ಶರಣಾರ್ಥಿ ಮಂಚಣ್ಣಾ ಎಂದು ಕದವ
ತಗೆಯಿಸಿಕೊಂಡು ಒಳಯಿಂಕೆ ಹೋಗಲು ಅವರ ಬಂಧುಗಳು ಕಂಡು ಬಸ
ವಣ್ಣನು ಮಂಚಣ್ಣನ ಕೊಲ್ಲುವದಕ್ಕೆ ಬಂದರೆಂದ ಬಿಜ್ಜಳಗೆ ಹೇಳಲು
ಆ ವೈಷ್ಣವರ ಮಗನ ಗೊಡವೆ ನಿಮಗೇನೆನಲು ಬಸವಣ್ಣನೆಂದನು, ಕೆಸ
ರಲ್ಲಿ ತಾವರೆ ಹುಟ್ಟಿದರೆ ಅದರ ಮಗನೆ? ಮುತ್ತು ಚಿಪ್ಪಿನಲ್ಲಿ ಹುಟ್ಟಿದರೆ ಅದರ
ಮಗನೆ? ಇವರು ವೈಷ್ಣವರಲ್ಲ, ನಮ್ಮ ಶಿವಭಕ್ತರೆಂದು ಬಂದೆವೆಂದು
ನುಡಿಯಲು ಆಗ ತಮ್ಮ ವೇಷ ಪ್ರಕಟವಾಯಿತ್ತೆಂದು ಸತಿಪತಿಗಳೈಕ್ಯ
ವಾಗಲು ಬಿಜ್ಜಳನೆಂದನು, ನೋಡಿದಿರೆ ಬಸವಣ್ಣನು ಮಂಚಣ್ಣನ ಕೊಂದ,
ಹೇಳಿಯಾಳೆಂದು ಸತಿಯನು ಕೊಂದರು, ಲಿಂಗವ ಕಟ್ಟಲೊಲ್ಲೆನೆಂದರೆ
ಕೊಲ್ಲಬಹುದೆ? ಅವರ ಕೆಯ್ಯ ಹೆಣನ ಹೊರಿಸಿ ಅವರುನುಂ ಕೊಲ್ಲೆನಲು
ಆಗ ಬಸವಣ್ಣನು ಇಬ್ಬರ ಪ್ರಾಣವ ಪಡೆಯಲು ಬಿಜ್ಜಳ ಆ ಮಹಿಮೆಯ
ಕಂಡು ಕೈಮುಗಿದನು

---

## ೭೫ನೆಯ ವಚನದ ಕಥೆ. (೧೦-೫೯)

### ಅರ್ಜುನ.

ಪಂಚಾದಶ ಕಿರಾತಸ್ಯ ಪದ್ಮ ಪುರಾಣದಲ್ಲಿ ವಿಷ್ಣು ಅರ್ಜುನಂಗೆ
ಹೇಳಿದ. ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಶಿವಧ್ಯಾನದಲ್ಲಿ ತಪವ
ಮಾಡುವಾಗ ಮೂರು ದಿನಕೊಮ್ಮೆ ಫಲಾಹಾರವ ಕೊಂಡು ತಿಂಗಳಿದ್ದನು.



ಆರು ದಿನಕೊಮ್ಮೆ ಫಲಾಹಾರವ ಕೊಂಡು ಎರಡು ತಿಂಗಳಿದ್ದನು. ತಿಂಗ
ಳಿಗೆ ಎರಡು ವೇಳೆ ಕಂದಮೂಲಾಹಾರವ ಕೊಂಡು ಮೂರು ತಿಂಗಳಿ
ದ್ದನು. ತರಗೆಲೆಯ ಮೆದ್ದು ನಾಲ್ಕು ತಿಂಗಳಿದ್ದ ಬಳಿಕ ಗಾಳಿಯ ಹಾರ
ದಲ್ಲಿ ತಪವ ಮಾಡುವಾಗ ತಪಜ್ವಾಲೆಗೆ ಮುನಿಗಳ ಜಡೆಗಳು ಕೆದರಿ
ಕೆಯ್ಯ ಜಪಸರ ಸಡಿಲಿ ಕಮಂಡಲವದಿರಿ ಅಂಗದ ವಿಭೂತಿ ಕದಡಿ
ಹೆದರಿ ಮುನಿಗಳೆಲ್ಲ ಕೈಲಾಸಕ್ಕೆ ಹೋಗಿ ಶಿವನ ಕಂಡು ನಮಸ್ಕರಿಸಲು
ನೀವು ಬಂದ ಕಾರ್ಯವ ಹೇಳಿಎನಲು ಆ ಮಾತಿಗೆ ಮುನಿಗಳು ಒಬ್ಬನ
ತಪದಿಂದ ನಮ್ಮ ವನದ ಭೂಮಿ ಕಾದುದು ತರು ಗುಲ್ಮ ಒಣಗಿ
ದವು. ನಮ್ಮ ತಪ ಕೆಟ್ಟವು. ಆತ ರಾಯನೋ ರಾವುತನೋ? ಅಂಬಿನ
ಬತ್ತಳಿಕೆ ಬಿಲ್ಲ ಆಯುಧ ಬೆರಳುದ್ದದ ಜಡೆ ಈ ಪ್ರಕಾರದ ತಪಸಿ
ಯೈದಾನೆ. ಅವನ ಎಬ್ಬಿಸಿ ನಮ್ಮಾಶ್ರಮವ ಕೊಡಿಸಿ ಎನಲು, ಒಳ್ಳಿ
ತೆಂದು ಮುನಿಗಳ ಕಳುಹಿ ಆ ಮೇಲೆ ಶಿವನು ಹಸರಂಗಿಯ ತೊಟ್ಟು
ಹಸುರ ಚಲ್ಲಣವನುಟ್ಟು ಟೊಂಕಕೆ ನವಿಲುಗರೆಯ ಕಟ್ಟಿ ತಲೆಗೆ ತಳಿರ
ಟೊಪ್ಪಿಗೆಯ ಧರಿಸಿ ಬಿಲ್ಲು ಬಾಣಂಗಳ ತೆಗೆದುಕೊಂಡು ನಡೆವಾಗ ಗುಹ
ಗಣಪ, ನಂದೀಶ, ವೀರಭದ್ರ ಮೊದಲಾದ ಗಣಂಗಳು ಕಿರಾತ
ವೇಷವ ಧರಿಸಿದರು. ಬಳಿಕ ಗಿರಿಜಾದೇವಿಯರ ಕೂಡೆ ಶಾಕಿನಿ ಡಾಕಿನಿ
ಮೊದಲಾದವರು ಕಿರಾತೆಯರಾದರು. ಆ ಮೇಲೆ ಬೇಂಟೆಯ ಮುಸ್ತೈದೆ
ಬಿಲ್ಲು ಬಡಿಕೋಲು ಸಂಕೊಲೆ ಇಕ್ಕಿದ ವೇಧ ಶ್ವಾನಗಳು ಕೋಲು
ಬಲೆ ದಡಿಬಲೆ ಸಿಡಿಬಲೆ ಕೋಲು ಕಣ್ಣಿಯ ಹೆಬ್ಬಲೆ ಹಕ್ಕಿಯ
ಹಿಡಿವ ಅಂಟಿನ ಗಣೆಗಳು ಮೊದಲಾದವ ತಕೊಂಡು ಶಬರರು ಶಿವ
ನೊಡನೆ ಬೇಂಟೆಯನಾಡುವಾಗ ಆನೆಗಳು ಕಾಡ ಹಂದಿಗಳು ಮೊದಲಾ
ದವು ಬಲೆಯಲ್ಲಿ ಬೀಳಲು, ಅಲ್ಲಿಂದ ಇಂದ್ರಕೀಲ ಪರ್ವತಕ್ಕೆ ಬರಲು
ಅಲ್ಲಿ ಮೂಕದಾನವ ಸೂಕರ ರೂಪ ಧರಿಸಿಕೊಂಡು ಬೇಂಟೆಗಾರರ
ಪಡೆಯು ಹೋಗಲು ಆಗ ಹಿಡಿ ಕೊಲ್ಲು ಎಂಬ ಧ್ವನಿಯಾಗಲು
ಇದೇ ಸಮಯವೆಂದು ಶಿವನು ಬಿಲ್ಲು ಹೂಡಿ ಸೂಕರನಾಗಿರ್ದ ಮೂಕ
ದಾನವನ ಎಸೆಯಲು ನಟ್ಟ ಬಾಣದಿಂದ ಸಹಿತವಾಗಿ ಓಡಿ ಹೋಗಿ ಮುನಿ
ಗಳ ನಡುವೆ ಗರ್ಜಿಸಲು ಆ ಮುನಿಗಳು ಶಿವಶಿವಾ ಎನಲು ಆ ಧ್ವನಿ
ಗೇಳಿ ಅರ್ಜುನ ಎದ್ದೆಸೆಯಲು, ಆ ಹಂದಿ ಸತ್ತು ಬೀಳಲು, ಆಗ ಶಿವನು
ಬಂದು ನಮ್ಮ ಬೇಂಟೆಯ ಹಂದೆ ನಮಗೆ ಕೊಡು ಎನಲು, ಆಗ ಅರ್ಜುನ

ನಮ್ಮ ಬಾಣದಿಂದ ಬಿದ್ದುದ ಕೊಡೆನೆನಲು, ಆಗ ಶಿವನು ನೀ ತಪಸಿ ನಿನಗೆ ಬಿಲ್ಲು ಬಾಣ ಖಡ್ಗವೇತಕೆನಲು, ಆ ಮಾತಿಗೆ ಬಿಲ್ಲು ಬಾಣ ಖಡ್ಗದಿಂದ ಶಿವನು ತಪವ ಮಾಡಲಿಲ್ಲವೆ ಅಂತಾತನ ಶಿಷ್ಯ ನಾನು ಇದಕೇನು, ತಪ್ಪು? ಶಿವನೇ ಅಡ್ಡ ಬಂದರೂ ನನ್ನ ಪಂಥವ ಬಿಡೆನೆಂದು ಎಸೆಯಲು ಆ ಬಾಣಗಳು ಶಿವನ ಬೆನ್ನ ಹಿಂದೆ ಬೀಳಲು ಮತ್ತೆ ಎಸೆಯಲು ಮಂಜು ಮುಸುಕಿದರೆ ಪರ್ವತವಂಜುವದೆ, ಕಾಳಕೂಟವ ನೊಣ ಸೇವಿಸುವದೆ, ವಡಬಾಗ್ನಿ ಮಂಜಿಗೆ ನೊಂದುವುದೇ, ತಾವರೆಯ ನೂಲಿಗೆ ಆನೆ ನಿಂತೀತೆ, ಹಾಗೆ ಅರ್ಜುನನ ಬಾಣಕೆ ಶಿವ ತೊಲಗಿಯಾನೆ ಎಂದು ಎಲ್ಲರು ಅಚ್ಚರಿವಡಲು ಬಳಿಕ ಶಿವನೆಚ್ಚ ಬಾಣಗಳ ಅರ್ಜುನ ತನ್ನ ಬಾಣಂಗಳಿಂದ ಕತ್ತರಿಸಲು ಆ ಮೇಲೆ ಬಾಣ ತೀರಲು ಬಿಲ್ಲಿನಲ್ಲಿ ಖಡ್ಗದಲ್ಲಿ ಹೊಯ್ದನು. ಆಗ ಸೆಳೆದುಕೊಳಲು ಮರಳಿಂದ ಕಲ್ಲುಗಳಂದಿಟ್ಟನು. ಆ ಶಿವನು ಅಂಬಿನಿಂದ ಕತ್ತರಿಸಿ ಮರಳು ತಪ್ಪಿಸಿ ಆಯುಧವಿದ್ದರೆ ತಕ್ಕೋ ಎನಲು ಅರ್ಜುನ ಮುಷ್ಟಿಯಿಂದ ಹೊಯ್ದಾಡಲು ಬಳಿಕ ಶಿವನು ಅರ್ಜುನನ ಪಾದದಲ್ಲಿ ಮೆಟ್ಟಲು ಮೂಗಿನಲ್ಲಿ ರಕ್ತ ಸುರಿಯಲು ಆಗ ಇವ ಬೇಡನಾದರೆ ನನಗಶಕ್ಯನಾದಾನೆ ಎಂದು ಮಳಲ ಲಿಂಗವ ಮಾಡಿ ಕಾಡಮಲ್ಲಿಗೆಯಿಂದರ್ಚಿಸಿ ತ್ರ್ಯಂಬಿಕ ಗಿರಿಜಾರಮಣ ಭಕ್ತಕುಟುಂಬಿ ಎಂದು ನುತಿಸಿ ಈ ಶಬರನ ಗೆಲುವುದಕ್ಕೆ ಶಕ್ತಿಯ ಕೊಡು ಎಂದು ಲಿಂಗವ ನೋಡಲು ಇಲ್ಲಿ ಪೂಜಿಸಿದ ಪುಷ್ಪ ಆ ಕಿರಾತನ ಮಂಡೆಯಲ್ಲಿರಲು ಕಂಡು ಶಿವನೆಂದಡ್ಡ ಬೀಳಲು ಶಿವನು ರೂಪು ದೋರಿ, ಮೆಚ್ಚಿದೆ ಬೇಡು ಎನಲು, ಎಲ್ಲರ ಜಯಿಸುವಂತಹ ಬಾಣವ ದಯಪಾಲಿಸು ಎನಲು ಪಾಶುಪತಾಸ್ತ್ರವ ಕೊಡಲು ಅದ ಅರ್ಜುನನು ತೆಗೆದುಕೊಂಡು ಕೌರವರ ಜಯಿಸಿದನು.

### ಕಾಮ.

ಪಂಪಾ ಕ್ಷೇತ್ರದಲ್ಲಿ ಶಿವನು ಯೋಗದಲ್ಲಿರುವಾಗ ದೇವತೆಗಳು ತಾರಕನ ಭಯಕ್ಕೆ ಅಂಜಿ ಮೇರುವಿನ ತಪ್ಪಲಲ್ಲಿದ್ದು ಶಿವನ ಯೋಗವ ಕೆಡಿಸಿ ದೇವಿಯರ ಮದುವೆಯಾಗುವಂತೆ ಮಾಡಿ ಬಾರೆಂದು ಕಾಮನ ಕಳುಹಲು ಆಗ ಹೋಗಿ ಪಂಚ ಬಾಣದಿಂದ ಎಸೆಯಲು ನೊಸಲಕಣ್ಣಿನಿಂದುರುಹಿ ಆ ಬೂದಿಯ ಮೇಲೆ ತಾಂಡವನಾಡಿದನು.



### ಶಿವರಾತ್ರಿಯ ಸಂಕಣ್ಣ.

ವೀರಕೊಂಕಣದ ಭದ್ರಾಪುರದಲ್ಲಿ ಶಂಕರನೆಂಬ ಕಿರಾತನಿಪ್ಪನು. ಅವ ಬೇಂಟೆಯನಾಡಿಕೊಂಡು ಬದುಕುತಿರಲು ಒಂದು ದಿನ ಸಂಜೆಯಲ್ಲಿ ಬೇಂಟೆಗೆ ಹೋಗುವಾಗ ಇದಿರಾಗಿ ಹುಲಿ ಬರಲು ಕಂಡು ಮರನ ಏರಿದನು. ಇಳಿದರೆ ಹಿಡಿದುಕೊಂದೀತೆಂದು ಮರನ ಮುಂಡದಲ್ಲಿ ಕುಳಿತಿರಲು ಆಗ ಹುಲಿ ಹೋಯಿತೋ ಇಲ್ಲವೋ ಎಂದು ನೋಡುವುದಕ್ಕೆ ಕಣ್ಣಿಗೆ ಮರೆಯಾದ ಸೊಪ್ಪ ಮುರಿದು ಹಾಕುತಿರಲು ಬೆಳಗಾಯಿತ್ತು. ಹುಲಿ ಹೋಯಿತ್ತು. ತಾನು ಬಿಲುಪತ್ರೆಯ ಮರದಿಂದಿಳಿದು ಮನೆಗೆ ಹೋಗುವೆನೆಂಬಷ್ಟರೊಳಗೆ ಅಲ್ಲಿದ್ದ ಲಿಂಗದೊಳಗಿಂದ ಶಿವನು ಬಂದು ಕೈಲಾಸಕ್ಕೆ ನಡೆ ಎನಲ ನಾ ಮಾಡಿದ ಪುಣ್ಯವೇನೆನಲು ಎಲೆ ಭಕ್ತ ನಿನ್ನ ಕಂಕುಳೊಳಗಣ ತಿತ್ತಿಯ ನೀರು ಎನಗೆ ರುದ್ರಾಭಿಷೇಕವಾಯಿತ್ತು. ನೀನು ಹಾಕಿದ ಸೊಪ್ಪು ಎನಗೆ ಪತ್ರೆಯ ಪೂಜೆಯಾಯಿತ್ತು. ನೀನು ಅಂಜಿ ನಿದ್ರೆಯ ಮಾಡಿದುದೆ ಜಾಗ್ರವಾಯಿತ್ತು. ನಿನಗೆ ಊಟವಿಲ್ಲದುದೆ ಉಪವಾಸವಾಯಿತ್ತು ಈ ರೀತಿಯಲ್ಲಿ ನಿನಗೆ ಶಿವರಾತ್ರಿಯ ಫಲ ಘಟಿಸಿತೆಂದು ಶಿವರಾತ್ರಿಯ ಸಂಕಣ್ಣಗಳೆಂಬ ಪೆಸರ ಕೊಟ್ಟು ಪುಷ್ಪಕದಲ್ಲಿ ಕುಳ್ಳಿರಿಸಿ ಕೈಲಾಸಕ್ಕೆ ಒಯ್ದರು.

## ೭೬ನೆಯ ವಚನದ ಕಥೆ. (೧೦-೭೦)

### ನೊರಟದ ಬಂಕಿದೇವ.

ನೊರಟದ ಬಂಕಿದೇವಗಳು ಶಿವಭಕ್ತಿಯಲ್ಲಿರುತಿರೆ ಒಂದು ದಿನ ಶಿವನು ಜಂಗಮರೂಪಿನಲ್ಲಿ ಅವರ ಮನವ ನೋಡುವುದಕ್ಕೆ ಅರ್ಧ ರಾತ್ರಿಯಲ್ಲಿ ಅವರ ಮನೆಯ ಮುಂದೆ ನಿಂದಿರಲು ಆಗ ಭಕ್ತಯ್ಯ ನಮಸ್ಕರಿಸಿ ಏನು ಕಾರಣ ಗಮನಿಸಿದಿರಿ ಎನಲು ಎಲೆ ಭಕ್ತಯ್ಯ ನಮಗೆ ಬರಡಾಕಳ ಹಾಲು ಕೊರಡಿನಲ್ಲಿ ಚಿಗುವ ಪತ್ರೆಯ ನೇಮವೆನಲು, ಹಾಗೆ ಆಗಲಿ, ಎಂದು ಗೊಡ್ಡಾಕಳ ತಂದು ಹಾಲ ಕರೆದು ಆ ಗೂಟದಲ್ಲಿ ಬಿಲ್ವಪತ್ರೆಯ ಚಿಗುರಿಸಿ ಕೊಯಿತಂದು ಆ ಚರಮೂರ್ತಿಗೆ ಕೊಡಲು ಶಿವಪೂಜೆಯ ನೇಮವ ಮಾಡಿ ಆಗ ಮೆಚ್ಚಿದೆವು ಬೇಡು ಎನಲು, ಇನ್ನು ಶಿವಭಕ್ತಿಯ ನಾಚರಿಸಿ ಆ ಮೇಲೆ ಕೈಲಾಸಕ್ಕೆ ಬಂದೆವೆಂದು ಹೇಳಿದರು.

### ಕಬ್ಬಿಲರು.

ಕಬ್ಬಿಲರು ಶಿವಪ್ರಸಾದವು ನಮಗೆ ಸಲ್ಲದೆ ಎಂದು ಬಸವೇಶ್ವರನ ಕೇಳೆ ಶಿವಪ್ರಸಾದದ ವಿಷವ ಕೊಡಲು ಕೊಳ್ಳದಿರಲು ವಿಷವ ತ್ರಿಪುರಾಂತಕಲಿಂಗಕ್ಕರ್ಪಿಸಿ ಅನ್ನೃತವ ಮಾಡಿ ಶಿವಭಕ್ತರೆಲ್ಲ ಅರ್ಪಿಸಿದರು.

### ಸಿದ್ಧಿಸೆಟ್ಟಿ.

ಸಂಗಯ್ಯನಿಂದ ಸರ್ಪನ ತರಿಸಿ ಕಂಕಣವಾಗೆ ಸಿದ್ಧಿಸೆಟ್ಟಿಗೆ ಕೊಟ್ಟ ಹೊನ್ನ ತಂದು ದಾಸೋಹವ ಮಾಡುತ್ತಿರೆ ಬಿಜ್ಜಳನು ಬಸವಣ್ಣನ ಕರಿಸಿ ಕಂಕಣವ ತರಿಸೆ ಮುದ್ರೆದೆಗೆಯೆ ಸರ್ಪ ಬರೆ ಹೆದರಿ ನುತಿಸೆ ಕಂಕಣವ ಮಾಡಿ ಸಿದ್ಧಿಸೆಟ್ಟಿಗೆ ಕೊಟ್ಟರು.

---

## ೭೩ ನೆಯ ವಚನದ ಕಥೆ. (೧೨·೧)

### ಚಂಡಗಣೇಶ್ವರ.

ದ್ರಾವಿಡ ದೇಶದಲ್ಲಿ ಒಬ್ಬ ವಿಪ್ರನು ದುರಾಚಾರದಲ್ಲಿರುತ್ತ ಒಂದು ದಿನ ವಿಪ್ರರ ಅಗ್ರಹಾರಕ್ಕೆ ಹೋಗಿ ಒಂದು ಮನೆಯಲ್ಲಿ ಕಳವಿಗೆ ಹೋಗಲು ಮನೆಯವರು ಕಂಡು ಗುದಿಗೆಯಲ್ಲಿ ಬಡಿಯಲು ಸತ್ತನು. ಅವನ ಕಾಲಿಗೆ ಬಳಿ ಕಟ್ಟಿ ಎಳಿಸಿ ಹಾಕಲು ಆಗ ಒಂದು ಶ್ವಾನ ಬೂದಿಯಲ್ಲಿ ಮಲಗಿದ್ದು ಬಂದು ಅವನ ಹಣೆಯಲ್ಲಿ ಒಂದು ಎದೆಯಲ್ಲಿ ಒಂದು ಕಾಲಿರಿಸಿ ಕಡಿವುತ್ತಿರಲು ಆಗ ಶಿವದೂತರು ಬಂದು ಪುಷ್ಪಕದಲ್ಲಿ ಕುಳ್ಳಿರಿಸಿ ಕೈಲಾಸಕ್ಕೆ ಒಯ್ಯಲು ಶಿವನು ಎದ್ದು ಕುಳ್ಳಿರಿಸಿಕೊಂಡು ಚಂಡಗಣೇಶ್ವರನೆಂದು ಹೆಸರು ಕರೆಯಲು ಸುಖದಲ್ಲಿದ್ದನು.

---

## ೭೫ನೆಯ ವಚನದ ಕಥೆ. (೧೨·೧)

### ಕಲಾವತಿ

ಕಾಶೀ ರಾಜನ ಮಗಳು ಕಲಾವತಿಯು ಮದುರೆಯ ದಾಸಾರ್ಹರಾಯ ಮದುವೆಯಾಗಿ ಕರಕೊಂಡು ಹೋಗಿ ಏಕಾಂತದಲ್ಲಿರಲು ಆಕೆ ಪರಿಮಳ ಮೊದಲಾದುಪಚಾರವ ಮಾಡಿ ಗಂಡನ ಬಿಟ್ಟು ಬೇರೆ ಮಲಗಲು ಆಗ



ಪುರುಷನು ಬೇರೆ ಮಲಗುವರೆ ಎನಲು ಆಕೆ ನಿನಗೆ ಪಂಚಾಕ್ಷರಿಯ ಉಪದೇಶವಿಲ್ಲವೆನಲು ಅವ ಬಲಾತ್ಕಾರದಿಂದ ಅಪ್ಪಿಕೊಳಲು ಆಕೆಯ ಮೆಯ್ಯು ಕಾದ ಕಬ್ಬಿನದಂತೆ ಅವನ ಸುಡಲು ನೀನು ವೃಢದೇಹಿ ನಿನ್ನ ಸೋಂಕಿನಿಂದ ಜ್ವಾಲೆ ಏಕಾಯಿತ್ತೆನಲು, ರತಿ ಇಲ್ಲದವಳ ರೋಗಿಯ ಗರ್ಭಿಣಿಯ ವ್ರತಸ್ಥೆಯ ಬಲಾತ್ಕಾರವ ಮಾಡಬಾರದು. ಬಳಿಕ ಆ ದೂರ್ವಾಸನನಗೆ ಮಾಡಿದುಪದೇಶ ಉಂಟು ಆ ಪಂಚಾಕ್ಷರಿ ನಿನ್ನ ಸುಟ್ಟಿತ್ತು. ಆ ಮಾತ ಕೇಳಿ ಗಾರ್ಗ್ಯ ಮುನಿಯ ಬಳಿಗೆ ಹೋಗಿ ಮಂತ್ರೋಪದೇಶವ ಪಡೆ ಎನಲು ಶರೀರದಲ್ಲಿದ್ದ ಪಾಪಗಳು ಕಾಗೆಯ ರೂಪಾಗಿ ಹೋಟು ಹೋದವು. ಬಳಿಕ ಸತಿಪತಿಗಳು ಸಂಭೋಗದಲ್ಲಿದ್ದು ಕೈಲಾಸಕ್ಕೆ ಹೋದರು.

---

## ೮೮ ನೆಯ ವಚನದ ಕಥೆ. (೧೪-೫)

### ಜಾತಿಕಾರರು.

ಜಾತಿಕಾರರು ಅಂಗದ ಮೇಲೆ ಶಿವಲಿಂಗಧಾರಣೆ ವಿಭೂತಿ ರುದ್ರಾಕ್ಷಿ ಕಾವಿ ಕಾಷಾಯಾಂಬರ ಕಂಥೆ ಖಟ್ವಾಂಗ ಕಮಂಡಲು ಗುಂಡಿಗಪ್ಪರ ಜಾಳಿಗೆ ಕಾಯಾಕ್ಷಿ ಕಿರೀಟಂಗಳಿಂ ಬರಲು ಬಸವೇಶ್ವರನು ಸಾಕ್ಷಾತ್ ಶಿವರೂಪೆಂದು ವಂದಿಸಿ ಹೊಂದಿ ನಿಜಜಂಗಮವಾದರು. ಸಾಕ್ಷಿ-ಭಾಳೆ ತ್ರಿಪುಂಡ್ರಕಕ್ಷೈವ ಗಳೆ ರುದ್ರಾಕ್ಷಮಾಲಾ ವಕ್ತ್ರೇ ಷಡಕ್ಷರಮಂತ್ರಂ ಸರುದ್ರೋನಾತ್ರಸಂಶಯಃ ಟೀಕುಃ— ಅವನಾನೊಬ್ಬನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಯ ಮಾಲೆ ಮುಖದಲ್ಲಿ ಷಡಕ್ಷರಿಯ ಮಂತ್ರವಿದ್ದುದು ಆತನು ರುದ್ರನು ಸಂಶಯವಿಲ್ಲ. ಲಿಂಗಾಂಗಸಂಬಂಧವಾಗಿಪ್ಪ ಭಕ್ತಿಕ್ರಿಯೆಯುಳ್ಳ ಶರಣರು ತಮ್ಮಂತೆ ಇಲ್ಲದಿರ್ದ ಭವಿಗಳು ನೊಸಲ ಕಣ್ಣು ಚತುರ್ಭುಜದವರಾದಡೆಯೂ ತಮ್ಮಾಚಾರದೊಳಗೆ ಕೂಡಿಕೊಳ್ಳರು.

---

## ೮೯ ನೆಯ ವಚನ. (೧೪-೧)

ಸ್ಕಂದ, ಶಿವಸಂಸ್ಕಾರ ಸಂಪನ್ನ ಸ್ವಯ ಶೂದ್ರಾಹ್ವಯಂ ದ್ವಿಜಃ ಲಿಂಗಭೇದೇವಿಕೃತಸ್ತೇನ ರೌರವಂ ನರಕಂ ವ್ರಜೇತ್ ಟೀಕುಃ—ಶಿವಸಂಸ್ಕಾರ ಸಂಪನ್ನನಾದ ಬಳಿಕ ಶೂದ್ರನೆಂಬುದು ಮತ್ತೆ ಇಲ್ಲ. ಬ್ರಹ್ಮನೆಂ

ಬುದು ಮತ್ತೆ ಇಲ್ಲ ಅವರು ಸದ್ಭಕ್ತರು. ಇಂತಲ್ಲದೆ ಅಲ್ಲಿ ಭೇದವ ಮಾಡಿ ಕಂಡರೆ ಮಹಾ ನರಕ ತಪ್ಪದು.

---

## ೯೦ ನೆಯ ವಚನದ ಕಥೆ. (೧೪-೨)

### ಅಕ್ಕನಾಗಮ್ಮ.

ಅಕ್ಕನಾಗಮ್ಮ ಗಂಡಸಿಲ್ಲದೆ ಬಸುರಾದಳೆಂದು ಜೈನರು ನಿಂದಿಸೆ ಬಸವೇಶ್ವರನು ಗರ್ಭದೊಳಗಣ ಶಿಶುವನು ಮಾತನಾಡಿಸೆ, ಸಮಸ್ತರು ಅಪರಾಧ ನಮ್ಮದು ತಪ್ಪು ತ್ರಾಹಿ ಎಂದು ವಂದಿಸಿದರು. ಅಕ್ಕನಾಗಲೆ ಕಕ್ಕಯ್ಯನ ಪ್ರಸಾದದಿಂದ ಚನ್ನಬಸವೇಶ್ವರನೊಗೆದನು.

---

## ೯೮ ನೆಯ ವಚನದ ಕಥೆ. (೧೫-೧೦)

### ಗುಪ್ತ ಮಂಚಣ್ಣ.

ಗುಪ್ತ ಮಂಚಣ್ಣಗಳು ಮಾಡುವ ಶಿವಭಕ್ತಿಯನು ನೆರೆಮನೆಯ ವಿಪ್ರನು ಕಂಡು ಬಸವೇಶ್ವರನಿಗೆ ಹೇಳಲಾಗಿ ಆ ಬಸವೇಶ್ವರನು ಶಿವಭಕ್ತರ ನೆಳಲು ಸೋಂಕಿದರುರಿದೇಳ್ವ ಶಿವಶಬ್ದವ ಕೇಳಿದರೆ ಕಿವಿಯಲ್ಲಿ ಬೆರಳಿಡುವಂಗೆ ಶಿವಭಕ್ತಿ ಅಳವಡುವದೇ ಎಂದು ಹಾಡಿದ ಪ್ರಸ್ಥಾವದ ವಚನ.

---

## ೧೦೭ ನೆಯ ವಚನದ ಕಥೆ. (೧೬-೧೯)

### ರಾಘವಾಂಕ

ಹಂಪೆಯ ಹರೀಶ್ವರನಗ್ರಜೆಯ ಮಗನು ರಾಘವಾಂಕನೊರೆದ ನರನಾದ ಹರಿಶ್ಚಂದ್ರನ ನುತಿಗೆ ಮುಳಿದುದಂತಗಳು ಹಾರಿಗಲ್ಲೆನಲು ಪಂಚಕಾವ್ಯವ ಪೇಳಿ ದಂತಂಗಳ ಪಡೆದನು.

---

## ೧೧೩ ನೆಯ ವಚನದ ಕಥೆ. (೧೭-೨೫)

ಮರೀಚನ ಗುರು ತಪದಲ್ಲಿರಲು ತಪಗೆಡಿಸಿ ತೊಟ್ಟಿಲ ಹೊರಿಸಿ ತಂದಳು. ಗಾಳಿಯ ಗಂಟೆಕ್ಕಿ ನೆಳಲನೆ ಗಲಿಸುವ ಸೂಳೆಯು



ತೋಳ ಗಂಟೆಕ್ಕಿ ಹೋಗುತ್ತಿರೆ ಬಂದು ಹೇಳಿದುದ ಹೇಳಬೇಡೆಂದು ಸ್ತ್ರೀ ನುಡಿಯೆ ಶ್ರೀಮತಿಯು ಕೇಳಲು ಹೇಳದಿರಲು ಒಳ ಬಿಟ್ಟನು.

---

## ೧೧೬ ನೆಯ ವಚನದ ಕಥೆ.

### ಸೌಂದರ ಗಣೇಶ್ವರ

ಚೋಳದೇಶದ ತಿರುವಾಲೂರಲ್ಲಿ ಜಡೆ ಸ್ಯೆನಾರೆಂಬ ಶಿವ ಬ್ರಾಹ್ಮಣನು ಶಿವಪುರಾಣವನೋದುವಾಗ ಪುತ್ರಸ್ಯ ಗತಿರ್ನಾಸ್ತಿ ಎಂಬ ನುಡಿಯ ಕೇಳಿ ಚಿಂತಿಸುತ್ತಿರಲು ಆತನ ರಾಣಿ ಯಸ್ಯಜ್ಞಾನಿ ದೇವಿಯು ಇದೇನು ಚಿಂತೆ ಎಂದು ಕೇಳಲು ಮಕ್ಕಳು ಇಲ್ಲದಿದ್ದರೆ ಮೋಕ್ಷವಿಲ್ಲೆಂದು ಪುರಾಣ ಹೇಳುತ್ತದೆ ಎನಲು ಅದಕ್ಕೆ ಆಕೆ ವಾಲ್ಮೀಕಿ ನಾಥನ ಬೇಡುನಡೆ ಎಂದು ಹೋಗಿ ಸತಿ ಸಹವಾಗಿ ಲಿಂಗಪೂಜೆಯ ಮಾಡಿ ಪುತ್ರನ ಬೇಡಲು ಆದಿತ್ತೆಂದು ಅವರಿಗೆ ಲಿಂಗ ನುಡಿಯಲು ಮನೆಗೆ ಬಂದು ಸುಖದಲ್ಲಿರಲು ಅತ್ತ ಕೈಲಾಸದಲ್ಲಿ ಶಿವನು ಸಮುದ್ರದ ಮಥನದಲ್ಲಿ ಪುಟ್ಟಿದ ವಿಷವ ಹಸ್ತದಲ್ಲಿ ತೆಗೆದುಕೊಂಡು ನೋಡುವಾಗ ಆ ವಿಷದೊಳಗೆ ಪ್ರತಿಬಿಂಬವ ಕಂಡು ನೀನಾರೆಂದು ಕೇಳಲು ಪುರುಷಾಕೃತಿಯಲ್ಲಿ ನಮಸ್ಕಾರವ ಮಾಡಲು ಆಗ ಸೌಂದರಗಣೇಶ್ವರನೆಂಬ ಹೆಸರಿಟ್ಟು ಮರ್ತ್ಯಕ್ಕೆ ಹೋಗು ಎನಲು ಮರ್ತ್ಯದಲ್ಲಿ ಮರೆಪೆಯುಂಟು, ಎಂತು ಹೋಗುವೆ ಸ್ವಾಮಿ ಎನಲು, ಆ ಮಾತಿಗೆ ಶಿವನು ನಾನಿದೇನೆ ನಂಬಿ ಹೋಗೆನಲು ಇತ್ತ ಯಸ್ಯಜ್ಞಾನಿದೇವಿಯರ ಗರ್ಭವೆಂಬ ಗುಹೆಗೆ ನಂಬೆಣ್ಣ ಬಂದು ಶಿವಯೋಗದಲ್ಲಿರ್ದರೂ ಭೂಮಿಯೊಳಗೆ ನಿಧಾನವಿಪ್ಪಂತೆ ಕಲ್ಪವೃಕ್ಷದ ಬೀಜದೊಳಗಂಕುರನಿರ್ಪಂತೆ ಗರ್ಭದಲ್ಲಿರ್ದರು. ಬಳಿಕ ಕ್ಷೀರ ಸಮುದ್ರದಿಂದ ಚಂದ್ರನುದಯಿಸುವಂತೆ ಚಂದ್ರನಿಂದ ಬೆಳದಿಂಗಳುದಯಿಸುವಂತೆ ಉದಯಿಸಿದನು. ಆ ಮೇಲೆ ಐದು ವರುಷವಾಗಲು ತಾನೆ ಅರಸಾಗಿ ಮಕ್ಕಳನೆಲ್ಲ ಪರಿವಾರವ ಮಾಡಿ ಭಂಡಿಯಾಡುವಾಗ ನರಸಿಂಗ ಮೊನೆಯಾರ ಆನೆ ಸಂಚಿತ ತಿಳಿಕಿತ ಅತಿವರ್ತಿತ ಅದಾನುಬಂದಿನಿ ಕ್ರೋಧಿನಿ ಗಂಧಚಾರಿಣಿ ಎಂಬ ಸಪ್ತಾವಸ್ಥೆಯ ಮದದಿಂದ ಸಂಕೊಲೆಯ ಹರಿದುಕೊಂಡು ಬರುವಾಗ ಭಂಡಿಯನೆಳೆವ

ಮಕ್ಕಳೆಲ್ಲ ಓಡಿಹೋಗಲು ಸಿಂಹದ ಮರಿಯಂತೆ ಆನೆಗಂಜದೆ ನಂಬಿ
ಯಣ್ಣ ಬಂಡಿಯ ಮೇಲಿರಲು ಆನೆ ಬಂದು ಮಂಡೆಯ ಹೂಡಿ ನಮ
ಸ್ಕರಿಸಿ ಹೋಗಲು ಈ ಸುದ್ದಿಯ ಪರಿಚಾರಕರು ಅರಸಿಗೆ ಪೇಳಲು ಆ
ನರಸಿಂಗ ಮೊನೆಯಾರು ಬಂದು ಶಿವಶಿವ ಇವನಾರ ಮಗ ಈತನಾವ
ಪುಣ್ಯದ ಪುಂಜವೋ ಆವ ನಿತ್ಯದ ನೆಲೆಯೋ ಆವ ಸತ್ಯದ ಸಾರವೋ
ನಾವರಿಯೆವೆನಲು ಆಗ ಜಡೆಯನೈನಾರು ಬಂದು ಮಗನನೆತ್ತಿಕೊಂಡು
ಆನೆಗೆ ತುತ್ತಾಗಿದ್ದೆಯಲ್ಲಾ ಎಂದು ಮುದ್ದಾಡಲು ಆ ಮೇಲೆ ತಾಯಿ
ಬಂದು ತಕ್ಕೈಸಿಕೊಂಡು ಸಿಡಲೆರಗಿದ ಮೊಲ್ಲೆಯ ಮುಗುಳೆ, ರಾಹು
ಮುಟ್ಟಿದ ಚಂದ್ರಮನೆ, ಆವ ಸುಕೃತದಿಂದುಳಿದೆ ಎಂದು ನುಡಿವಾಗ
ನರಸಿಂಗಮೊನೆಯಾರಿಂತೆಂದರು. ಎನಗೆ ಮಕ್ಕಳಿಲ್ಲ. ಈ ಶಿಶುವ ನಮಗೆ
ಕೊಡು ಎನಲು ಸತಿಪತಿಗಳು ಒಪ್ಪಿ ಪರೀಕ್ಷಕನ ಕೆಯ್ಯ ಅನರ್ಘ್ಯವಾದ
ರತ್ನವ ಕೊಡುವಂತೆ ವಸಂತನ ಕೆಯ್ಯಲ್ಲಿ ಕಲ್ಪವೃಕ್ಷದ ಸಸಿಯ ಕೊಡು
ವಂತೆ ಕೊಟ್ಟರು. ಆಗ ಅಂಜನಗಿರಿಯ ಮೇಲೆ ಬಾಲಸೂರ್ಯನೊ
ಪ್ಪುವಂತೆ ನಂಬೆಣ್ಣದೇವರ ಆನೆಯ ಮೇಲೆ ಕುಳ್ಳಿರಿಸಿ ಸಂಭ್ರಮದಿಂದ
ಅರಮನೆಗೆ ಕರಕೊಂಡು ಹೋಗಿ ಸಿಂಹಾಸನದ ಮೇಲೆ ಕುಳ್ಳಿರಿಸಿ ಪಟ್ಟವ
ಕಟ್ಟಿ ಸುಖದಲ್ಲಿರಲು ಆ ಮೇಲೆ ಹದಿನಾರು ವರುಷದ ಪ್ರಾಯವಾಗಲು
ನರಸಿಂಗ ಮೊನೆಯಾರು ತುಂಬುರ ಮಂತ್ರಿಯ ಕರೆದು ಮಗನಿಗೆ
ಮದುವೆಯ ಮಾಡಬೇಕು ಹೆಣ್ಣ ನೋಡೆನಲು ಆಗ ಮಂತ್ರಿಯು ಮಣಬಂದ
ಪುತ್ತೂರಿಗೆ ಹೋಗಿ ಅಲ್ಲಿ ಹೆಣ್ಣಿನ ತಾಯಿತಂದೆಗಳ ಕರೆದು ನರಸಿಂಗ
ಮೊನೆಯಾರ ಪುತ್ರ ಸೌಂದರ ಪೆರುಮಳಿಗೆ ನಿಮ್ಮ ಮಗಳ ಕೊಡಿ
ಎನಲು ಅವರು ಒಡಂಬಡಲು ಸಾಕ್ಷಿ ವೀಳೆಯವ ಕೊಟ್ಟು ಬರಲು
ಮದುವೆಯ ಮುಹೂರ್ತ ಆವುದೆಂದು ಮಂತ್ರಿಗಳ ಕೇಳಲು ಶುಕ್ಲ
ಪಕ್ಷದ ಚತುರ್ದಶಿಯು ಸೋಮವಾರದಲ್ಲಿ ವೃಷಭರಾಶಿ ಆರಿದ್ರಾ ನಕ್ಷತ್ರ
ಭದ್ರಕರಣ ಶಿವಯೋಗ ಉತ್ತಮವೆಂದು ಬಿನ್ನವಿಸಲು ಆಗ ನಂಬಿಯ
ಣ್ಣಂಗೆ ಶೃಂಗಾರವ ಮಾಡಿಸಿದನು. ಮುತ್ತಿನ ಸರಗಳು ಹಸ್ತಕಡಗಗಳು
ಭುಜಕೀರ್ತಿಗಳ ಧರಿಸಿ ಪಟ್ಟಾವಳಿಗೆಯ ಹೊದಿಸಿ ಪಟ್ಟದಾನೆಯನೇರಿಸಿ
ಹಿಂದೆ ತುಂಬುರ ಮಂತ್ರಿಯ ಕುಳ್ಳಿರಿಸಿ ಮಣಬಂದಪುತ್ತೂರಿಗೆ ಕಳು
ಹಲು ಅಲ್ಲಿ ಉದ್ಯಾನ ವನದಲ್ಲಿ ಕುಳಿತಿರಲು ಅತ್ತ ಕೈಲಾಸದಲ್ಲಿ ಶಿವನು
ಎಲೆ ಗಿರಿಜೆ ನಂಬಿ ಸಂಸಾರಕ್ಕೆ ಸಿಕ್ಕು ತಾನೆ ನಾವು ಅಲ್ಲಿಗೆ ಹೋಗು
ತ್ತೇವೆಂದು ಮುಪ್ಪಿನ ರೂಪ ಧರಿಸಿ ಸರ್ಪನನೆ ಪ್ರಮಾಣಪತ್ರವ ಮಾಡಿ



ಬ್ರಹ್ಮನ ತಲೆಯನೆ ಕಮಂಡಲವ ಮಾಡಿ ಹುಲಿಯ ಚರ್ಮವನೆ ಧೋತ್ರ
ವನುಟ್ಟು ಗಜಚರ್ಮವ ಹಚ್ಚಡವ ಹೊದ್ದು ಅಪಸ್ಮಾರವೆಂಬ ಸರ್ಪನ
ಪಾದರಕ್ಷೆಯಾಗಿ ಮೆಟ್ಟಿ ರುಂಡ ಮಾಲೆಯನೆ ಜಪಸರ ಚಂದ್ರನೇ ಕೊಡೆ
ತ್ರಿಶೂಲವೇ ಕಾವು ವಿಷ್ಣು ಕಂಕಾಳವನೆ ದಂಡವ ಮಾಡಿ ಕೈಲಾಸ
ದಿಂದ ಚೋಳದೇಶದ ಮಣಬಂದಪುತ್ತೂರ ಮದುವೆಯ ಚಪ್ಪರಕ್ಕೆ
ಬಂದು ಕೆಮ್ಮುತ್ತ ಕೇಕರಿಸುತ್ತ ತಲೆಯ ನಡಿಗಿಸುತ್ತ ಮೆಲ್ಲನೆ ನಮಃ
ಶಿವಾಯ ಎನುತೆ ಕಾಲನೂರಿಕೊಂಡು ಬಂದು ಎಡಹಿ ಬಿದ್ದು ತುಪ್ಪದ
ಕೊಡಗಳನೊಡೆಯಲು ಆ ಬಿದ್ದ ವೃದ್ಧನ ಎಬ್ಬಿಸಲು ಮತ್ತೆ ಬಿದ್ದು
ಗಳಿಗೆಬಟ್ಟಲ ಕಳಸವನೊಡೆದು ಬಿದ್ದೇಳಲಾರದೆ ಮೂರ್ಛೆಯಾಗಿರಲು
ಅಷ್ಟರೊಳಗೆ ಅಲ್ಲಿದ್ದವರೆಬ್ಬಿಸಿ ಇನ್ನು ಬಿಟ್ಟರೆ ತುಪ್ಪದ ಕೊಡಗಳ ಮೇಲೆ
ಬಿದ್ದೊಡೆದಲ್ಲದೆ ನಿಲ್ಲ ಈ ಮುಪ್ಪಿನ ಮರುಳ ಎಂದು ಹೊರಗೆಸೆದರು.
ಇದೇ ಮದುವಿಗಪಶಕುನವೆಂದು ಹೊರಗಿರಿಸಿ ಬಾಗಿಲವರೆಗೆ ಕಟ್ಟು
ಮಾಡಲು ಮತ್ತೆ ಯಾರೂ ಕಾಣದಂತೆ ಒಳಯಿಂಕೆ ಬಂದು ತೋರ
ಣವ ಹರಿದು ಹಸೆಯ ಜಗಲಿಯ ಮುರಿದು ಮಂಗಲವ ಅಮಂಗಲವ
ಮಾಡಲು ಅಲ್ಲಿರ್ದ ಹೆಣ್ಣಿನವರು ನೀವಾರೆಂದು ಕೇಳಲು ಆ ವೃದ್ಧನಿಂ
ತೆಂದನು, ಇವನೆನ್ನ ತೊತ್ತಿನಮಗ ಇದಕ್ಕೆ ಪತ್ರ ಉಂಟೆನಲು ಬಳಿಕ ಆ
ತಾಯಿತಂದೆಗಳು ಕುಲ ಹೊಲ್ಲವೆಂದ ಬಳಿಕ ಇನ್ನಾವ ಮೊಗ ಮುಂದಿಟ್ಟು
ಮದುವೆಯ ಮಾಡಿಪೆವೆನಲು ಇತ್ತ ವೃದ್ಧ ಮಾಹೇಶ್ವರನು ನಂಬಿಯ
ಣ್ಣನಿದ್ದ ವನಕೆ ಬರಲಂದು ಅಲ್ಲಿಯ ಓಲಗದ ಮುಕುಟವರ್ಧನರನೆಡ
ಹುತ್ತ ಉಗುಳು ಸಿಡಿವಂತೆ ಕೆಮ್ಮುತ್ತ ಬಂದು ನಂಬಿಯಣ್ಣನ ಸಿಂಹಾ
ಸನದ ಮುಂದೆ ನಿಲೆ, ಕುಮಾರ ಕಂಡು ಎಲೆ ಅಯ್ಯ ಏನು ಬಯಸಿ
ಬಂದಿರೆನಲು, ನೀನು ನಮಗೆ ಕೊಡುವವನೇ ನೀನೆನ್ನ ತೊತ್ತಿನ ಮಗ
ಈಗ ಕಮಂಡಲುಗಳ ಪಿಡಿ ಏಳೆನಲು, ನಂಬಿಯಣ್ಣ ಕೋಪದಿಂದ ಈ
ಹುಚ್ಚ ಬ್ರಾಹ್ಮಣನ ನೂಕೆನಲು, ಮುಟ್ಟದ ಮುನ್ನವೇ ಬಿದ್ದು, ಶಿವ
ಎನುತ್ತ ಇವನೆನ್ನ ತೊತ್ತಿನ ಮಗನೆಂದು ಪತ್ರವ ತೋರಿದಪೆವು ಎನಲು
ತುಂಬುರ ಮಂತ್ರಿ ಇಂತೆಂದ, ಎಲೆ ಅಯ್ಯ ನಿಮ್ಮ ಪತ್ರವ ತನ್ನಿ ಎಂದು
ಇಸಿಕೊಂಡು ಕರಣಿಕನ ಕೈಯ್ಯೊಳು ಕೊಡಲೋದಿದನು. ಈಶ್ವರ ಸಂವ
ತ್ಸರದ ಮಾಘ ಬಹುಳ ಚತುರ್ದಶಿಯು ಸೋಮವಾರದಲ್ಲು ಭಕ್ತರ
ಪುರದ ಸ್ಮಶಾನಶಯನಭಟ್ಟರಿಗೆ ಜಡೆಯನೈನಾರು ಯಸ್ಯಜ್ಞಾನಿದೇಹಿಯರು
ತಮ್ಮ ಪುತ್ರ ನಂಬಿಯನು ಬಳಿದೊತ್ತಾಗಿ ಕೊಟ್ಟರು. ಇದಕ್ಕೆ ಸಾಕ್ಷಿ

ತಿರುವೆನ್ನಲೂರು ರುದ್ರಭಟ್ಟರು ಮಾಹೇಶ್ವರಭಟ್ಟರು ರುದ್ರಸಭಾಪತಿಗಳು, ಈಶಾನ್ಯಭಟ್ಟರು ಸಹಸ್ರ ವೇದಿಗಳು ಹೀಗೆಂದು ಹೇಳಿ ಆಗ ತಿರುವೆಣ್ಣನಲ್ಲೂರಿಗೆ ಬಂದು ಮಂಟಪದಲ್ಲಿ ಕುಳಿತು ಅಲ್ಲಿರ್ದ ಸಾಕ್ಷಿಗಳ ಕರಿಸುವಾಗ ಮುಪ್ಪಿನ ರೂಪ ತಾಳಿದ ಶಿವ ಬಂದು ಸಾಕ್ಷಿ ಕರಕೊಂಡು, ಏನು ಶಂಕರಭಟ್ಟರೇ ಸುಖದೊಳಿದ್ದಿರೇ ಎಂದು ತಮ್ಮೊಳ್ತಾವು ಮಾತನಾಡಿ ಆ ವೃದ್ಧ ತನ್ನ ಪತ್ರಮಂ ನೋಡೆಂದು ಕೈಯ್ಯಲ್ಲಿ ಕೊಡಲು ಅದ ನೋಡಿ ನಂಬಿಯಣ್ಣ ಕೇಳಲು ಮೂಲಪತ್ರ ಶಿವಾಲಯದಲ್ಲಿದೆ ಎನಲು ತೋರೆನುತ ನಡೆ ಎನಲು ತಿರುವಾಲೂರು ವಾಲ್ಮೀಕನಾಥನ ಗುಡಿಗೆ ಬಂದು ಶಿವನು ಲಿಂಗದೊಳಡಗಿ ಆಗ ನಿಜರೂಪ ತೋರಲು ನಂಬಿಯಣ್ಣ ಕಂಡು ಕೈಲಾಸದಿಂ ಬಂದ ಪೂರ್ವಸ್ಮರಣೆಯಂ ತಿಳಿದು ನಮಸ್ಕರಿಸಿ ಸ್ತುತಿಸಿ ಇಂತು ಕಾಡುವರೆ ದೇವಾ ಎನಲು ಆಗ ತಕ್ಕೈಸಿ ಪೊನ್ನ ತಾಳವ ಕೊಟ್ಟು ಪಾಡೆನಲು ನಾ ಬಲ್ಲೆನೆ ಎನಲು ಅಂದು ಮನದೊಳಗೆಮ್ಮ ಪಿಚ್ಚನೆ ಎಂದು ಬೈದಂತೆ ಹಾಡೆನಲು ಹಾಗೆ ಎಂದನು ಪಿಚ್ಚನೆ ಪೆರೆಯ ಸೂಡಿದನೆ ಪರಮ ಪಶುಪತಿಯೆ ಅಚ್ಚಸವಿಯೆ ಸುಖನೆ ಸಖನೆ ನಂಬಿಯ ಪತಿಯೇ ಎಂದು ಹೊಗಳಿ ಪಡಿಹೊನ್ನ ಪಡೆದು ಸುಖದಲ್ಲಿರುತ ಕಮಲಲತೆ ಎಂಬ ರುದ್ರಕನ್ನಿಕೆ ಮಂಗಲೆನಾಚಿ ಎಂಬ ವೇಶ್ಯಾಸ್ತ್ರೀಯ ಬಸಿರಲ್ಲಿ ಪರವೆನಾಚಿ ಎಂಬ ಹೆಸರಿನಲ್ಲಿ ಹುಟ್ಟಿ ಯೌವನವಾಗೆ ಮೈನೆರೆದ ಹಾಸಿಗೆಯ ಮಾಡುವಾಗ ನಂಬಿಯಣ್ಣದೇವರು ಬಂದು ಆಕೆಯ ಬಲದ ಭಾಗದಲ್ಲಿ ಕುಳಿತು ಇಬ್ಬರು ಒಂದಾಗಿ ಏಕಾಂತದ ಮನೆಗೆ ಹೋಗಿ ಆಲಿಂಗಿಸಿಕೊಂಡು ಸುಖದಲ್ಲಿದ್ದರು.

## ೧೩೬ ನೆಯ ವಚನದ ಕಥೆ. (೨೧·೨೩)

### ಮಲ್ಲಿಕಾರ್ಜುನ ಪಂಡಿತ.

ಕೈಲಾಸದಿಂದ ಶಿವನಪ್ಪಣೆ ವಿಡಿದು ವರಲಾಪುರದಲ್ಲಿ ಭೀಮೇಶ ಪಂಡಿತನೆಂಬ ಶೈವ ಬ್ರಾಹ್ಮಣನಿರ್ಪನು. ಆತನ ಸತಿ ಗೌರಾಂಬಿಕೆಯ ಗರ್ಭದಲ್ಲಿ ಹಾಲಸಮುದ್ರದಲ್ಲಿ ಹಂಸೆಯ ಮರಿ ಇರ್ಪಂತೆ ಮೇರುವಿನ ಗುಹೆಯಲ್ಲಿ ಸಿಂಹದ ಶಿಶುವಿರ್ಪಂತೆ ಇದ್ದು ಉದಯವಾಗಲು ಮಲ್ಲಿಕಾರ್ಜುನ ಪಂಡಿತರೆಂಬ ಹೆಸರು ಕರೆದರು. ಬಳಿಕವರು ಪಲ್ಯಣಾಚಾರ್ಯರ



ಕೆಯ್ಯ ವೀರಶೈವ ದೀಕ್ಷೆಯ ಪಡೆದು ಚರ್ಯಾತಿರಾಯನ ಮಗಳ ಮದುವೆಯಾಗಿ ಬಳಿಕ ಶಿಷ್ಯರ ಮಾಡಿಕೊಂಡರು. ರೇವಯ್ಯ, ದೇವಯ್ಯ, ರೇಮಯ್ಯ, ರೇಚಯ್ಯ, ಪೆಲ್ಲಗೊಂಡದ ಮಹಾದೇವಯ್ಯ ಧವಳೇಶ ನಾಮಯ್ಯ ದೊನಮಯ್ಯ ಮೊದಲಾದ ಶಿಷ್ಯರು ವೇದಾಗಮ ಪುರಾಣವ ಬಲ್ಲವರಾಗಿ ಅನ್ಯವಾದಿಗಳ ಗೆಲುತ ಇರುತಿರಲು ಒಂದು ದಿನ ಪೆಲ್ನಾಡ ಚೋಳನೆಂಬ ಜೈನನ ಗುರುವೆನಿಸುವ ಬೌದ್ಧಾಚಾರ್ಯನು ಜಿನ್ನನೇ ದೈವವೆಂದು ಹೇಳುತ್ತಿರಲು ಅದಕ್ಕೆ ಪಂಡಿತಾರಾಧ್ಯರು ಶಿವನೇ ದೈವವೆಂದು ವೇದಾಗಮ ಪುರಾಣಂಗಳಿಂದ ಸಭೆಯಲ್ಲಿ ವಾದವ ಮಾಡಿ ಸೋಲಿಸಲು ಕರಬುತನದಿಂದ ಅಲ್ಲಿರ್ದ ಮಲ್ಲಿಕಾರ್ಜುನ ಲಿಂಗದ ದೀಪಮಾಲೆಯ ಕಲ್ಲಕಂಭವ ಕಿತ್ತುಕೊಂಡು ಹೋಗಿ ಬೌದ್ಧನ ಗುಡಿಯ ಮುಂದೆ ನಡಿಸಲು ಅರೆವೆಯ್ಯ ದೇವಯ್ಯಗಳು ಸಮುದ್ರದ ಗಡ್ಡೆಯಲ್ಲಿರ್ದ ಜಿನ್ನನ ಗುಡಿಯ ಮುಂದಿರ್ದ ದೀಪಮಾಲೆಯ ಕಂಭವ ಕಂಡು ಬೌದ್ಧನ ಕೊಂದು ಹೊಟ್ಟೆಯ ನಾಲಗೆಯ ಕೊಯ್ದು ಎದೆಯ ಮೇಲಿಟ್ಟು ಈತನ ನಾವು ಕೊಂದೆವೆಂದು ಓಲೆಯ ಬರೆದು ಹೆಣನ ಮೇಲಿಟ್ಟು ಕಂಭವ ಕಿತ್ತುಕೊಂಡು ಬಂದು ಮುನ್ನಿನಂತೆ ಶಿವಾಲಯದ ಮುಂದೆ ನಡಿಸಿದರು. ಆಗ ಬೌದ್ದನ ಶಿಷ್ಯರದ ಕಂಡು ಆ ಓಲೆಯ ನೋಡಿಕೊಂಡು ಪಂಡಿತಾರಾಧ್ಯರ ಶಿಷ್ಯರು ಕೊಂದರೆಂದು ವೇಲ್ನಾಡಚೋಳಗೆ ಹೇಳಲು ಆಗಲವರ ಕರಿಸಿ ನಮ್ಮ ಗುರುವ ಕೊಂದವರಾರೆಂದು ಕೇಳಲು ನಾವೇ ಕೊಂದೆವೆನಲು ಧರ್ಮಶಾಸ್ತ್ರವ ಬಲ್ಲವರ ಕರೆತರಿಸಿ ಏನಾಜ್ಞೆಯ ಮಾಡಬೇಕೆಂದು ಕೇಳಲು ಬ್ರಾಹ್ಮಣಾದಿ ಚಂಡಾಲಾಂತ್ಯವಾದವರಿಗೆ ತಕ್ಕ ಆಜ್ಞೆಯುಂಟು. ಶಿವಭಕ್ತರಿಗೆ ಆಜ್ಞೆಯ ಮಾಡಬಾರದೆಂದು ಶಾಸ್ತ್ರ ಸಮ್ಮತವು ಎಂದು ಹೇಳಲು ಅವರನುಲ್ಲಂಘಿಸಿ ಕಣ್ಣುಗಳ ತೆಗೆ ಎನಲು ಅದಕ್ಕೆ ನಖಚಾನವ ತರಲು ಕೈಯ್ಯಲ್ಲಿ ತೆಗೆದುಕೊಂಡು ವಿಭೂತಿಯ ತಳಿತು ಲಿಂಗಕ್ಕೆ ತೋರಿ ದ್ರೋಹಿಕೋ ಎಂದು ಕೊಡಲು ಅದ ತೆಗೆದುಕೊಂಡು ಕಣ್ಣುಗಳ ತೆಗೆಯಲು ಮತ್ತೆ ಮತ್ತೆ ಬರುತಿರಲು ಅದ ಕೇಳಿ ಚೋಳನು ಕಣ್ಣೊಳಗೆ ಎಕ್ಕೆಯ ಹಾಲ ಹೊಯ್ಯೆಂದು ಬೊಗಳಲು ಆಗ ಪ್ರತಿಜ್ಞೆಯ ಮಾಡಿದರು. ಎಲೆ ಶಿವನೆ ಇನ್ನು ನಮಗೆ ಕಣ್ಣು ಕೊಟ್ಟರೆ ನಿನಗೆ ಶಿವಗಣಂಗಳಾಣೆ ಎನಲು ಆಗ ಕಣ್ಣುಗಳು ಬರುವುದು ನಿಂದವು. ಇನ್ನಿವನ ನೋಡಲಾಗದೆಂದು ಅಲ್ಲಿಂದ ಬಿಟ್ಟು ದ್ರಾಕ್ಷಾರಾಮಕೆ ಹೋದರು.

ಇತ್ತ ವೇಲ್ನಾಡಚೋಳನ ಸ್ವಪ್ನದಲ್ಲಿ ಶಿವನು ತ್ರಿಶೂಲದಲ್ಲಿರಿಯಲು ಮೂರು ಹುಣ್ಣಾಗಿ ನೆಗ್ಗಳಿಸಲು ಆ ಮಹಿಮನ ಕರೆತಂದರೆ ಒಳ್ಳಿತ್ತಾದಿತೆನಲು ಆಗ ತನ್ನ ಪ್ರಧಾನಿಯ ಕಳುಹಲು ಅವರ ಬಳಿಗೆ ಹೋಗಿ ಕೈಮುಗಿದು ಹೋಗಿ ನಿಂದು ಎಲೆ ಪಂಡಿತಾರಾಧ್ಯರೆ ನಮ್ಮರಸು ನಿಮಗೆ ಅರ್ಧ ರಾಜ್ಯವ ಕೊಟ್ಟು ದೀಕ್ಷೆಯಾದೆನೆಂಬುತಾನೆ ಎನಲು ಆ ಮಾತ ಕೇಳಿ ಕಿವಿಗಳ ಮುಚ್ಚಿಕೊಂಡು ಅವನ ಮುಖವ ನೋಡಲೊಲ್ಲೆವು ಹೋಗೆನಲು ಆವ ಬಂದು ಹಾಗೆ ಹೇಳಲು ಬಳಿಕ ವೆಲ್ನಾಡಚೋಳ ಸಾಯಲು ಆ ಮೇಲೆ ಪಂಡಿತಾರಾಧ್ಯರು ಸಹಸ್ರ ಗಣಂಗಳ ನುತಿಸುವಾಗ ಶಿವನು ಪ್ರಸನ್ನವಾಗಿ ನಯನವ ಕೊಟ್ಟೆ ಎನಲು ನಾವು ಒಲ್ಲೆವೆನಲು ಆಗ ಶಿವನು ಊರ್ಧ್ವಲೋಚನವ ಕೊಟ್ಟರು. ಅಂದು ಮೊದಲಾಗಿ ಉರ್ಧ್ವಲೋಚನ ಪಂಡಿತಾರಾಧ್ಯರೆಂಬ ಪೆಸರಾಯಿತ್ತು. ಬಳಿಕ ಬಸವೇಶ್ವರನು ಕಪ್ಪಡಿಗೆ ಹೋದರೆಂಬುದ ಕೇಳಿ ಶೋಕವ ಮಾಡುತಿರಲು ಆಗ ಬಸವಣ್ಣ ಬಂದು ಸಂತೈಸಲು ಕೈಲಾಸಕ್ಕೆ ಹೋದರು.

### ಇಪ್ಪಿದೇವ

ಇಪ್ಪಿದೇವನು ಅಣ್ಣಾಮಲೇಶ್ವರಗೆ ಜೆರಕೆ ಸೊಪ್ಪ ನಡಿಸುತ್ತಿರೆ ೧೦ ವರುಷ ಮೀರೆ ಶಿವನು ತನ್ನೊಳೈಕ್ಯವ ಮಾಡಿಕೊಂಡನು.

---

## ೧೩೮ನೆಯು ವಚನದ ಕಥೆ (೨೧-೨೫)

ಭಕ್ತಕಾಯಂ ಚ ಮತ್ಕಾಯ ಮತ್ಕಾಯಂ ತಚ್ಛರೀರಕಂ ಮಹಂತ ಲಿಂಗರೂಪಾಣಿ ಮಹಂತೋ ಜಂಗಮಸ್ತಥಾ

---

## ೧೩೯ ನೆಯು ವಚನದ ಕಥೆ (೨೧-೨೬)

### ಪರವೆನಾಚಿ

ಮುನ್ನಿನ ಪರವೆನಾಚಿಯು ಅಂಗಣದ ಮಹತ್ವವ ಪಿರಿನಂಗೆಗೆ ಚರ ಲಿಂಗಮೂರ್ತಿಗಳು ಹೇಳುತ್ತಿದ್ದರು. ಉತ್ತುಂಗ ಚೋಳನ ಸ್ತ್ರೀಯು ಅಳಿಯಲು ಪಾರ್ವರ ಅಸ್ತಿಗಳು ಪಾರ್ವರ ಕೆಯ್ಯಲಿ ಗಯಕೆ ಕಳುಹುತ್ತಿರೆ



ಅವನ ಗುರು ಓರು ಮುಕ್ಕಾಳರು ಗಯೆಯ ಮಹಿಮೆಯ ಹೇಳಿದರು. ಗಯಾಸುರನು ಶಿವನ ಕುರಿತು ತಪವ ಮಾಡೆ ಶಿವನು ನಿಜವ ತೋರೆ ಎಲೆ ಶಿವನೆ ನನ್ನ ಬೆನ್ನ ಮೇಲೆ ನಿನ್ನ ಪಾದದ ಕುರುಹು ಮಾಡು. ಅದರಲ್ಲಿ ಪಿತೃಗಳ ಕುರಿತು ಪಿಂಡವಿಟ್ಟು ಸೇವಿಸೆ ಸ್ವರ್ಗಕ್ಕೈದುವ ವರವ ನೀಯೆನೆ, ಆ ವರವ ಕೊಟ್ಟನು. ಅದೇ ಪಾದದ ಕುರುಹು. ಪರವೆನಾಚಿಯ ಅಂಗಣದಲ್ಲಿ ೩೦ ವರುಷ ನಂಬಿಯ ಕುರಿತು ಎಡೆ ಮಾಡಿದನು. ಗಯೆಗಿಂದ ಅದೇ ಅಧಿಕವೆನೆ ಉತ್ತುಂಗ ಚೋಳನು ಪರವೆನಾಚಿಯ ಅಂಗಣದಲ್ಲಿ ಪಿಂಡದಾನಂಗೆಯ್ಯೆ ಪಿತೃಗಳು ಸೇವಿಸಿ ತುಷ್ಟಿ ವಡೆದು ರುದ್ರಲೋಕ ಪ್ರಾಪ್ತರಾದರು.

### ಅಸ್ಫೂತಿ.

ತಿರುವಣ್ಣೂರಲ್ಲಿ ವಾಗೀಶನ ಶಿಷ್ಯ ಅಸ್ಫೂತಿಯು ಸಂಕೇತವ ಮಾಡಿ ಜಂಗಮಾರ್ಚನೆಯ ಮಾಡೆ ಶಿವನು ಕೈಲಾಸಕ್ಕೆ ಕರೆಯೆ ವಾಗೀಶನೆ ಶಿವನೆಂದು ಬಾರದಿರೆ ವಾಗೀಶನಾಗಿ ಶಿವನು ಕೈಲಾಸಕ್ಕೆ ಕರೆದೊಯ್ದನು.

---

## ೧೪೦ ನೆಯು ವಚನದ ಕಥೆ. (೨೧-೨೭)

### ಕಪಿಲಯೋಗಿ.

ಕಾಶ್ಮೀರದೇಶದಲ್ಲಿಯ ಕನಕಸಾಗರಪುರದಲ್ಲಿ ಒಬ್ಬ ಕಳ್ಳ ಸಿಕ್ಕಲು ಹಿಡಿಗಯ್ಯ ಕಟ್ಟಿ ತಲೆಯ ಹೊಯ್ವುದಕ್ಕೆ ಕರೆದೊಯ್ವಾಗ ಬ್ರಹ್ಮನ ಮಗ ಸ್ವಯಂಭು ಸ್ವಯಂಭುವಿನ ಸತಿ ಸತ್ಯರೂಪಿಯ ಮಗಳು ದೇವಹೂತಿ ದೇವಹೂತಿಯ ಪತಿ ಶುನಕಮುನಿ ಅವನ ಮಗ ಕಪಿಲಯೋಗಿಯು ಆ ಪುರದೊಳಗೆ ಹೋಗುತಿರಲು ಆ ಕಳ್ಳ ಹೆಡಗಯ್ಯ ಬಿಗು ತಾಳಲಾರದೆ ತಲೆಯ ಬಗ್ಗಿಸಲು ಆ ಯೋಗಿ ತನಗೆ ತಲೆವಾಗಿದನೆಂದು ಸುಖಿಯಾಗೆಂದು ಹರಕೆಯ ಕೊಡಲು ಆ ಪುಣ್ಯದಿಂದ ಕಳ್ಳನ ತಲೆಯ ಹೊಯ್ದ ಮೇಲೆ ಕೈಲಾಸವಾಯಿತ್ತು.

---

## ೧೪೧ ನೆಯ ವಚನದ ಕಥೆ. (೨೧-೨೮)

### ನಾಟಕಶಾಲೆಯ ಸ್ತ್ರೀಯರು.

ಸ ಚಿಂತೇನ ಮಹಾದೇವತ್ವಮೇ ವಿಲೇನ ಸಂಶಯಃ ಭ್ರಾಂತಿ ಭ್ರಮರ ಚಿಂತಾನಾಂ ಕೀಟೋಪಿ ಭ್ರಮರಾಯತೆ. ಬಿಜ್ಜಳನು ಬಸವೇಶ್ವರನ ಕೂಡೆ ಕಪಟದಿಂದೆ ನಾಟಕಶಾಲೆಯ ಸ್ತ್ರೀಯರ ಜಂಗಮಾಕೃತಿಯ ಮಾಡಲು ಬಸವೇಶ್ವರನು ವಂದಿಸೆ ಬಿಜ್ಜಳ ಹಾಸ್ಯವ ಮಾಡಲು ನಿಜ ಜಂಗಮವ ಮಾಡಿ ಮೆರೆದ ಪ್ರಸ್ಥಾವದ ವಚನ.

---

## ೧೪೪ ನೆಯ ವಚನದ ಕಥೆ. (೨೧-೩೧

### ಗುರುವಕ್ಕ.

ಹಾದರದ ಬೊಮ್ಮಯ್ಯನ ಒಂದು ದಿನದಿರಳು ಬಿಜ್ಜಳನಿರಿಯಿಸೆ ಅವರ ಸತಿ ಗುರುವಕ್ಕ ಜಂಗಮದ ಪಾದೋದಕವ ತಳೆದು ಅಸುವ ಪಡೆದಳು.

---

## ೧೪೬ ನೆಯ ವಚನದ ಕಥೆ. (೨೧-೩೩)

### ದೇವರದಾಸ.

ದೇವರದಾಸಯ್ಯಗಳು ವಿರಕ್ತನಾಗಿ ಸಂಚರಿಸುವಾಗ ಹನ್ನೆರಡು ವರುಷ ಪರಿಯಂತರ ಹಸ್ತದಲ್ಲಿ ಮಳಲ ಪೊಟ್ಟಣವ ಪಿಡಿದುಕೊಂಡು ಇದು ನಮಗೆ ಪಾಯಸವ ಮಾಡಿಕ್ಕುವವರಿಲ್ಲವೇ ಎಂದು ಭಿಕ್ಷಕ್ಕೆ ಹೋದ ಮನೆಯಲ್ಲಿ ಕೇಳಲು, ಇದ ನಾವು ಮಾಡಿ ನೀಡಲಾರೆವೆನಲು ಬಳಿಕ ಮುದನೂರಲ್ಲಿದ್ದ ನೆಯಿಗೆಯ ಭಕ್ತರ ಮನೆಗೆ ಬಂದು ಕೇಳಲು ಆಗ ದೆಸಲು ಆ ಸಕೀಲವ ದುಗ್ಗಳೆಯಮ್ಮ ತಿಳಿದು ಆ ಮಳಲ ತೆಗೆದುಕೊಂಡು ತೊಂಡೆಯ ಬಳ್ಳಿಯ ಬುಡದ ಕೆಳಯಿಂಕೆ ಹಾಕಿ ನಿಜದ ಪಾಯಸವ ಮಾಡಿಕ್ಕಲು ಈಕೆ ನಮ್ಮ ಮನೋಧರ್ಮವ ತಿಳಿದಳೆಂದು ಆ ದುಗ್ಗಳ



ದೇವಿಯ ಮದುವೆಯಾಗಿ ಜಂಗಮಕ್ಕೆ ಭಕ್ತಿಯ ಮಾಡುವಾಗ ಒಂದು ಬೆಲೆ ಇಲ್ಲದ ಸಣ್ಣ ವಸ್ತ್ರವ ಹನ್ನೆರಡು ವರುಷ ನೆಯ್ದು ಬೆಳವಲ ದೇಶದ ಸಿದ್ಧಾಪುರದ ಸಂತೆಗೆ ಮಾರಬೇಕೆಂದು ಒಯ್ಯಲು ಅಲ್ಲಿಯ ವ್ಯವಹಾರಿಗಳು ಬೆಲೆಗಟ್ಟಲಾರದಿರಲು ಆ ವಸ್ತ್ರವ ತಿರುಗಿ ತರುವಾಗ ಶಿವನು ಜಂಗಮವಾಗಿ ಬಂದು ದಾರಿಯಲ್ಲಿ ದಾಸಿಮಯ್ಯ ಇದೇನೆಂದು ಕೇಳಲು ವಸ್ತ್ರವೆನಲು ಅದು ನಮಗೆ ಬೇಕೆನಲು ಸಲ್ಲಲಿ ಎಂದು ಕೊಡಲು ಅದ ಛಿದ್ರವಾಗಿ ಹರಿಯಲು ಅದಕೆಂದು ಚಿಂತಿಸದಿರಲು ಆಗ ಶಿವನು ಒಂದು ಹಿಡಿ ಧಾನ್ಯವ ಕೊಡಲು ಅದನೆ ಕೊಂಡು ಮನೆಗೆ ಬರಲು ಆಗ ದುಗ್ಗಳೆ ಇದೇ ಖಂಡುಗವೆಂದು ತೆಗೆದುಕೊಂಡು ಕಣಜದೊಳಗೆ ಹಾಕಲು ಅದು ತವನಿಧಿಯಾಯಿತ್ತು.

### ಶಿರಿಯಾಳಸೆಟ್ಟಿ.

ಕಾಂಚೀಪುರದಲ್ಲಿ ಧನಪಾಲಶಟ್ಟಿ ಎಂಬ ವ್ಯವಹಾರಿ ಇರ್ಪನು. ಆತನ ಗರ್ಭದಲ್ಲಿ ಓರ್ವ ಪುತ್ರನಾದ. ಭಕ್ತಿ ಎಂಬ ಸಮುದ್ರದಿಂದ ಜ್ಞಾನವೆಂಬ ಚಂದ್ರನುದಯಿಸುವಂತೆ, ಜ್ಞಾನದಿಂದ ವೈರಾಗ್ಯ ಪುಟ್ಟುವಂತೆ, ಸಿರಿಯಾಳಸೆಟ್ಟಿಯುದಯಿಸಿದನು. ಮತ್ತೆ ಆತ್ಯಣಸೆಟ್ಟಿಯ ಗರ್ಭದಲ್ಲಿ ಒಬ್ಬ ಮಗಳು ಹುಟ್ಟಿದಳು. ಅದೆಂತೆನೆ ಭೂಮಿಯಲ್ಲಿ ಮಲ್ಲಿಗೆಯ ಲತೆ ಹುಟ್ಟಿವಂತೆ ಮೇರುವಿನಲ್ಲಿ ಕಾಮಧೇನು ಹುಟ್ಟುವಂತೆ ಚೆಂಗಳೀದೇವಿ ಹುಟ್ಟಿದಳು. ಬಳಿಕ ಒಂದು ದಿನದಲ್ಲಿ ಅವರವರಿಗೆ ಮದುವೆಯಾಗಿ ಸುಖದಲ್ಲಿರುವಾಗ ಓರ್ವ ಮಗನಾದನು. ಮೇಘದಿಂದ ಮುತ್ತೊಗೆವಂತೆ ರೋಹಣಾದ್ರಿಯಲ್ಲಿ ರತ್ನ ಪುಟ್ಟುವಂತೆ ಚೆಂಗಳದೇವಿಯ ಗರ್ಭದಲ್ಲಿ ಚಿಲ್ಲಾಳದೇವರು ಹುಟ್ಟಿದರು. ಚಿಂತಾಮಣಿಯ ಕಾಂತಿಯಂತೆ ಬೆಳೆದು ಐದನೆಯ ವರುಷದಲ್ಲಿ ಅಕ್ಷರವ ಕಲಿವಾಗ ಈತನ ತಾಯಿತಂದೆಗಳು ದಿನದಿನ ತಪ್ಪದೆ ನಿಯಮವಾಗಿ ಸಾವಿರ ಜಂಗಮಕ್ಕೆ ಇಚ್ಛಾಭೋಜನವ ನೀಡುತ್ತ, ನೀಡುವವರುಂಟು ಉಂಬುವರಿಲ್ಲವೆಂದು ಬಿರಿದಿನ ಕಹಳೆಯ ಹಿಡಿಸಿದ್ದಾರೆ ಎಂದು ನಾರದಮುನಿ ಶಿವಂಗೆ ಬಿನ್ನೈಸಲು, ಅವರ ದೃಢವ ನೋಡುವೆನೆಂದು ಇಪ್ಪತ್ತೊಂದು ದಿನ ಮಳೆಯ ಕರಿಸಲು ಅದಕ್ಕೆ ಧೈರ್ಯಗುಂದದೆ ಸವುದೆಗಳೆಲ್ಲ ಸರಿಯಾಗಲು ಆಗ ಹುಲ್ಲು ಮನೆ ಮಾಳಿಗೆ ಮುಂತಾಗಿ ಮನೆಯಲ್ಲಿರ್ದ ಪಟ್ಟೆ ಸಕಲಾತಿ ಮೊದಲಾದವರಿಂದೆ ಅಡಿಗೆಯ ಮಾಡಿ ಜಂಗಮಕ್ಕೆ ನೀಡಲು ಇದಕ್ಕೆ ಅಂಜದಿರಲು

ಮತ್ತೊಂದು ಬಗೆಯಲ್ಲಿ ಒರೆದು ನೋಡುವೆನೆಂದು ಜಂಗಮದ ರೂಪ ಧರಿಸಿದರು. ಅದು ಹೇಗೆಂದೊಡೆ ಜಟಾಮುಕುಟ ಸ್ಫಟಿಕದ ಕರ್ಣಕುಂಡಲ ಪಣೆಯಲ್ಲಿ ಗಂಧವ ಧರಿಸಿ ನಡುವೆ ಸಿಂದೂರದ ತಿಲಕವಿಟ್ಟು ಕಯ್ಯಲ್ಲಿ ತ್ರಿಶೂಲವ ಪಿಡಿದು ಕಂಠದಲ್ಲಿ ಲಿಂಗವ ಧರಿಸಿಕೊಂಡು ಸಿರಿಯಾಳಸೆಟ್ಟಿಯರ ಅಂಗಡಿಯ ಮುಂದೆ ಸುಳಿಯಲು ಕಂಡು ನಮಸ್ಕರಿಸಿ ಸಲಿಸುವುದಕ್ಕೆ ಚಿತ್ತೈಸಿ ಎನಲು ಮಗನೇ ನಮ್ಮ ನೇಮ ಲೋಕವಿರುದ್ಧ ಅದೆ ಸೂರೆ ಮಾಡು ಎನಲು ನಿಮ್ಮ ನೇಮವ ನಿರೂಪಿಸೆನಲು ನಮಗೆ ನರಮಾಂಸವಾಗಬೇಕು, ಅದು ಜೀವಂತರದಾಗಬೇಕು ಎನಲು ಆಗ ಸಿರಿಯಾಳಸೆಟ್ಟಿ ಮನೆಗೆ ಹೋಗಿ ಚೆಂಗಳೆಗೆ ಹೇಳಿದನು. ಒಬ್ಬಯ್ಯನು ನರಮಾಂಸವನಿಕ್ಕೆಂದನು ಎನಲು ಆಕೆ ಹಾಗಾಗಲಿ ಎಂದು ಬಿಜೆಮಾಡಿಸಿಕೊಂಡು ಬಂದು ಬೇರೊಂದು ಕೋಣೆಯಲ್ಲಿ ಕುಳ್ಳಿರಿಸಿ ಬಳಿಕ ಪುತ್ರನ ಕರೆತಂದು ವಧಿಸಿ ಚಂದನಾವತಿಯು ಕಯ್ಯಲ್ಲಿ ಪಾಕವ ಮಾಡಿಸಿ ನೀಡಲು ಶಿವನು ಪ್ರತ್ಯಕ್ಷನಾಗಿ ಆ ಚಿಲ್ಲಾಳಯ್ಯಂಗೆ ಪ್ರಾಣವ ಕೊಟ್ಟು ಈ ಮೂವರನು ಚಂದನಾವತಿ ಸಹವಾಗಿ ಏಳುಕೋಟಿಯ ಕೈಲಾಸಕ್ಕೊಯ್ದನು.

## ಸಿಂಧು ಬಲ್ಲಾಳ.

ತಿರುಣಾಮಾಲೆಯಲ್ಲಿ ಸಿಂಧುಬಲ್ಲಾಳರಾಯನೆಂಬ ಭಕ್ತನು ವಂಚನೆ ಇಲ್ಲದೆ ಜಂಗಮಾರ್ಚನೆಯ ಮಾಡುತ್ತಿರಲು ಅದ ಕೇಳಿ ಶಿವನು ನಾವು ಅವನ ಭಕ್ತಿಯ ನೋಡುವೆವೆಂದು ಕಾಶಿ ದಟ್ಟಿಯನುಟ್ಟು ಸಣ್ಣಂಗಿಯ ತೊಟ್ಟು ಕೈಯಲ್ಲಿ ಎಲೆ ಚಂಚಿಯ ಕನ್ನಡಿಗಳ ಹಿಡಿದು ಅರಮನೆ ಭಿಕ್ಷಕ್ಕೆ ಬರಲು ಆಗ ಬಲ್ಲಾಳರಾಯ ಬಂದು ನಮಸ್ಕರಿಸಿ ಹಸ್ತಲಾಗಿನಿಂದ ಒಳಯಂಕೆ ಬಿಜಯ ಮಾಡಿಸಿ ರಸರಸಾಯನಗಳ ಎಡೆ ಮಾಡಿ ಆರೋಗಿಸು ಎನಲು ಸಲಿಸಿ ಹೋಗುತ್ತಿರಲು ಇಂದು ರಾತ್ರೆಯಲ್ಲಿ ಪವಡಿಸಿದ್ದು ಹೋಗಬೇಕೆನಲು, ಉಳಿದು ಸಲಿಸಿ ಪವಡಿಸುವಾಗ ಎಲೆ ರಾಯ ಸಮೀಪದಲ್ಲಿ ಹೆಣ್ಣಿಲ್ಲದೆ ನಿದ್ರೆ ಬಾರದೆನಲು ಆಗ ಚರನ ಕಳುಹಿ ವೇಶ್ಯಾಸ್ತ್ರೀಯ ಕರೆತಾರೆನಲು ಮನೆಮನೆಯಲ್ಲಿ ವಿಟಜಂಗಮರುಗಳಿರಲು ಅದ ಕಂಡು ರಾಯನ ಕೂಡೆ ಎಲ್ಲಿಯೂ ತೆರಹಿಲ್ಲವೆನಲು ತನ್ನ ಮನೆಯಲ್ಲಿದ್ದ ಸ್ತ್ರೀಯರ ತೋರಲು ಈ ಹೆಣ್ಣುಗಳು ನಮಗೆ ಸೊಗಯಿಸವು, ನಿನ್ನ ಪಟ್ಟದ ರಾಣಿ ಬೇಕೆನಲು ಆ ಮಾತಿಗಾಕೆಯ ಕಳುಹಲು ಆಕೆ ಬಂದು ವಿಟಮೂರ್ತಿಯ ಬಳಿಯಲ್ಲಿ ಪವಡಿಸಿದ್ದು ಮತ್ತೆ ನಿದ್ರೆ ತಿಳಿದು ನೋಡಲು



ಶಿಶುವಾಗಿ ಮೊಲೆಯನುಂಬುವುದ ಕಂಡು ತನ್ನ ಪತಿಯ ಕರೆದು ಅಯ್ಯನ ಕಾಣೆನು. ಒಂದು ಶಿಶುವು ಮೊಲೆಯನುಂಬುತಿದೆ ಎನಲು ಆಗ ರಾಯ ಬಂದು ನೋಡಲು ಆ ಶಿವರೂಪಿನೊಳಗೆ ಶಿವನು ಪ್ರತ್ಯಕ್ಷವಾಗಿ ಅವರೀರ್ವರನ್ನು ಕೈಲಾಸಕ್ಕೊಯ್ದನು.

## ಬಾಣಾಸುರ.

ಮಾಗದೇಶದ ಮಾಧವೀಪುರದಲ್ಲಿ ಚಕ್ರವಾಕನೆಂಬ ಶಿವದ್ವಿಜನಿರ್ಪನು. ಅವನಿಗೆ ಧೃತರಾಷ್ಟ್ರನೆಂಬ ಮಗನಿದ್ದನು. ಅವನು ಅನಾಚಾರಿಯಾಗಿ ಸೂಳೆಯರ ಕೊಂಡು ಹೋಗಿ ಅರಸಿನ ಪೂದೋಟದಲ್ಲಿ ಸಂಪಿಗೆಯ ಹೂವ ಕೊಯ್ದು ಅರ್ಘವ ಮುಡಿದುಕೊಂಡು ಅರ್ಘವ ನೀರಗಡಿಗೆಯಲ್ಲಿ ಹಾಕಿ ತಾವು ಹೋಗುವಾಗ ಆ ಗಡಿಗೆಯ ಹುವ್ವ ಸುರಿಯಲು ಅವು ಲಿಂಗದ ಮೇಲೆ ಬೀಳಲು ಬಳಕ ಅರಸು ತೋಟವ ನೋಡುತ ಬರುವಾಗ ಆ ಲಿಂಗದ ಮೇಲೆ ಸುರಿದಿದ್ದ ಹುವ್ವ ಕಂಡು ಈ ಹುವ್ವ ಇಲ್ಲಿ ಯಾರು ಸುರಿದರು ಹೇಳೆಂದು ತೋಟಗನ ಆರಸು ಆಜ್ಞೆಯ ಮಾಡಲು ಆಗ ಬುದ್ಧಿವಂತರು ಎಲೆ ಅರಸೆ ದೇವತೆಗಳು ಬಂದು ಈ ಲಿಂಗವ ಪೂಜಿಸಿದರೋ ಕಾಣಬಾರದೆನಲು ಆಗ ಅರಸನು ಸುಮ್ಮನಾದನು. ಬಳಿಕ ಮತ್ತೊಂದು ದಿನ ಸೂಳೆ ಮಿಂಡಗಾರ ತೋಟಿಗರು ಕಂಡು ಅರಸನಿಗೆ ಒಪ್ಪಿಸಲು ಅವನ ತಲೆಯ ಆಕೆಯ ಮೊಲೆಯ ಕತ್ತರಿಸಲು ಆ ಮಿಂಡನಾದ ಧೃತರಾಷ್ಟ್ರನು ಮರಣವಾಗಿ ಬಾಣಾಸುರನಾಗಿ ಹುಟ್ಟಿದನು. ಅವನ ವಂಶಾವಳಿ ಎಂತೆಂದೊಡೆ ಬ್ರಹ್ಮನ ಮಗ ಕಶ್ಯಪ, ಕಶ್ಯಪನ ಮಗ ಹಿರಣ್ಯಕಶ್ಯಪನ ಮಗ ಪ್ರಲ್ಹಾದನ ಮಗ ವಿರೋಚನನ ಮಗ ರಾಣಿ ಸ್ವರೂಚಿಯ ಮಗ ಬಲಿಯ ರಾಣಿಯ ಮಗ ವಿಂಧ್ಯಾವಳಿಯ ಮಗ ಬಾಣನು. ಇನ್ನು ಸೂಳೆ ಮರಣವಾಗಿ ಸುಪುತ್ರಿಕೆ ಎಂಬ ಹೆಸರಿನಿಂದ ರಾಜಕುಮಾರಿತಿಯಾಗಿ ಹುಟ್ಟಿ ಈ ಬಾಣಾಸುರಗೆ ಸತಿಯಾದಳು. ಈಕೆಯ ಮಕ್ಕಳ ಹೆಸರು ದುನು, ಭವರು, ಕಪಿಲ, ತಾರಕಶಂಕರ, ಸ್ವಭಾರ್ನು, ರುಷಪರ್ಣ ತಂಗಿ ಉಷೆ ಮನ್ಮಥನ ಮಗನಾದ ಅನಿರುದ್ಧನಿಗೆ ಸತಿಯಾದಳು. ಆ ಮೇಲೆ ಬಾಣಾಸುರನ ಶಿವಾರ್ಚನೆಯ ವೇಳೆಯಲ್ಲಿ ಭಕ್ತರು ಬಂದು ಮಾತನಾಡಿದರೆ ಜಪ ನಿಲುವಾಗಿ ಅರ್ಪಿತದ ವೇಳೆ ಹೋಗುತ್ತಿದೆ ಎಂದು ಶಿವನು ದೇವಿಯರು ಸಹವಾಗಿ ಬಂದು ಬಾಗಿಲ ಕಾಯ್ದುಕೊಂಡಿರಲು ಆಗ ಶಿವಪೂ

ಜೆಗೆ ಎರಡು ತೋಳು ಸಾಲವೆಂದು ಸಾವಿರ ತೋಳು ಪಡೆದು ಶಿವಾರ್ಚನೆಯ ಮಾಡುತಿರುತ್ತ ಒಂದು ದಿನ ಶಿವನೆ ನಿನ್ನ ಕೂಡೆ ಕಾದಬೇಕೆನಲು ಕೃಷ್ಣನ ಕೂಡೆ ಕಾದೆನಲು ಆವ ನನಗೆ ಮೂವತ್ತು ವೇಳೆ ಮುರಿದನೆನಲು ಮೊದಲ್ಲಂತಲ್ಲ ಈಗ ಉಪಮನ್ಯುವಿನ ಕೈಯ್ಯ ಲಿಂಗವ ಧರಿಸಿದ್ದಾನೆ, ಈಗ ಕಾದೆನಲು ಹಾಗಾಗಲೆಂದು ಕಾದುವಾಗ ಕೃಷ್ಣನೊಲ್ಲೆನೆನಲು ಶಿವನು ನಾನ್ಯೈದೆನೆ ಕಾದೆನಲು ಆಗ ಕಾದಿ ಒರಡು ತೋಳನುಳುಹಿ ಉಳಿದ ತೋಳ ಕತ್ತರಿಸಲು ಶಿವನು ನಿನ್ನ ಭುಜದ ತೀಟೆ ಹೋಯಿತ್ತೆಂದು ಮರಳಿ ಸಾವಿರ ತೋಳ ಕೊಟ್ಟು ಕೈಲಾಸಕ್ಕೊಯ್ದನು.

## ೧೪೮ ನೆಯ ವಚನದ ಕಥೆ. (೨೨-೩೫)

### ತಿರುನೀಲಕಂಠ

ಚೋಳ ಮಂಡಲದಲ್ಲಿ ಪೊನ್ನಾಂಬಲವೆಂಬ ಪುರವಿಪ್ಪುದು. ಅದೆಂತೆಂದೊಡೆ, ಅಲ್ಲಿ ಶಿವ ನೆಲಸಿರ್ಪನು. ಆದಕ್ಕೆ ಶಿವನಿಷ್ಠೆ ಎಂಬ ಕೋಟೆ ಸದಾಚಾರವೆ ಅಗಳು ಆಗಮವೆ ಆಳ್ವೇರಿ ಶಿವಪುರಾಣವೆ ಬಾಗಿಲು ಪಂಚಾಕ್ಷರಿಯೇ ಅರಮನೆ ಇಂತೊಪ್ಪುವ ಪುರದೊಳಗೆ ತಿರುನೀಲಕಂಠಯ್ಯಗಳೆಂಬ ಕುಂಬಾರ ಭಕ್ತರಿದ್ದರು. ಅವರ ಸತಿಯು ಹೆಸರು ಸತ್ಯವತಿ. ಒಂದು ದಿನ ತಿರುನೀಲಕಂಠಯ್ಯಗಳು ತಿರುನೀಲಕಂಠೇಶ್ವರನ ಗುಡಿಗೆ ಹೋಗಿ ಲಿಂಗ ಪೂಜೆಯ ಮಾಡಿ ಸ್ತುತಿಸಿ ಬರುವಾಗ ಲಿಂಗದ ವಸ್ತ್ರವ ಪಾತ್ರದ ನಾಯಕಿಯ ವಿಳಾಸಿನಿಯು ತಳಿಗೆಯ ತೊಳೆದು ಚೆಲ್ಲಲು ಅದು ಆ ಭಕ್ತನ ಮೇಲೆ ಸಿಡಿಯಲು ತಿರುನೀಲಕಂಠಾ ಎನಲು ಆಗ ನಾಯಕೆ ಕೇಳಿ ಹತ್ತಿರಕೆ ಬಂದು ನಮಸ್ಕರಿಸಿ ಮನೆಗೆ ಬಿಜಯಂಗೈಸಿ ಮಂಡೆಗೆ ಮಜ್ಜನವ ಮಾಡಿಸಿ ಪರಿಮಳವ ಧರಿಸಿ ಎನ್ನ ಅಪರಾಧವ ಸೈರಿಸಿಕೊಳ್ಳಿ ಎಂದು ಕಳುಹಿದಳು. ಇತ್ತ ಆವರು ತಮ್ಮ ಮನೆಗೆ ಬರಲು ಸತಿ ಕೋಪಿಸಿ ಈ ಪರಿಮಳವೆಲ್ಲಿಯದು, ಆವ ಹೆಣ್ಣಿನ ಸಂಭೋಗದಲ್ಲಿದ್ದರೋ ಎಂದು ಬೇರೆ ಹಾಸಿಗೆಯಲ್ಲಿ ಮಲಗಿಸಿದಳು. ಆಗ ತಿರುನೀಲಕಂಠಯ್ಯಗಳು ಬಾ ಎಂದು ಸೆರಗ ಹಿಡಿದೆಳೆಯಲು ಎನ್ನ ಮುಟ್ಟಿದರೆ ನಿಮಗೆ ಶಿವನಾಣೆ ಎನಲು ಆ ಮಾತಿಗೆ ತೊಂಬತ್ತು ವರುಷ



ಅಗಲಿದ್ದರು. ಆ ಮೇಲೆ ಮುಪ್ಪಾದರು. ಅದೆಂತೆಂದರೆ ಆಣೆ ಪಕ್ಷಕ್ಕೆ ಬಂದಂತೆ ಹಣ್ಣು ಮುದುಕರಾದರು. ಸುಕೃತವೆ ಬೆಳ್ಪಾದಂತೆ ಮಸ್ತಕವು ನರೆತವು. ಮುಕ್ತಿಗೈದುವ ಸೋಪಾನದಂತೆ ಪೈ ತೆರೆಗಟ್ಟಿದವು. ಭಕ್ತರಲ್ಲದೆ ಭವಿಗಳ ನೋಡೆನೆಂಬಂತೆ ಕಣ್ಣೆವೆಗಳು ಮುಚ್ಚಿದವು. ಶಿವನೆ ದೈವವಲ್ಲದೆ ಮತ್ತೊಂದು ದೈವವಿಲ್ಲವೆಂದು ತಲೆದೂಗುವಂತೆ ತಲೆ ನಡುಗುತಿರ್ದುದು. ಲಿಂಗ ಪ್ರದಕ್ಷಿಣವಲ್ಲದೆ ಅಡಿಇಡೆನೆಂಬಂತೆ ನಡೆಗೆಟ್ಟುದು. ಹೀಗೆ ಅವರಿರಲು ಆಗ ಶಿವನು ಭಿಕ್ಷಕ್ಕೆ ಬರಲು ಸತಿಪತಿಗಳು ನಮಸ್ಕರಿಸಿ ಮನೆಯೊಳಯಿ.ಂಕೆ ಬಿಜಯ ಮಾಡಿಸಿಕೊಂಡು ಹೋಗಿ ಏನು ಬಂದಿರಿ ಸ್ವಾಮಿ ಎನಲು ಮತ್ತೆತಕ್ಕೂ ಬಂದವರಲ್ಲ ನಮ್ಮ ಭಿಕ್ಷದ ಬಟ್ಟಲ ಮಡಗಿ ಕೊಂಡಿರಿ ಎಂದು ಇಂತೆಂದನು. ಇದು ಸರ್ವಸಿದ್ಧಿಯ ಕೊಡುವುದು ಇದ ಮಡಗೆನಲು ತಗೆದು ಕೊಂಡು ವಸ್ತ್ರವ ಸುತ್ತಿ ಪೆಟ್ಟಿಗೆಯಲಿ ಮಡಗಲು ಬಳಿಕ ತಾವು ಹೋಗಿ ಬೆಳಗಾಗಿ ಬಂದು ನಮ್ಮ ಬಟ್ಟಲ ಕೊಡಿ ಎನಲು ಪೆಟ್ಟಿಗೆಯ ತೆರೆದು ನೋಡಿ ಇಲ್ಲವೆನಲು ನೀವಿಬ್ಬರು ವಂಚಕರೆಂಬುದ ನಾವರಿಯೆವು. ಮತ್ತೊಬ್ಬರ ಸಾಕ್ಷಿಯ ಮಾಡಲಿಲ್ಲವಲ್ಲ ಎನಲು ಮತ್ತೆ ಪೆಟ್ಟಿಗೆಯ ನೋಡಿ ಇಲ್ಲದಿರೆ ನೆರೆಹೊರಗೆ ದೂರುತ್ತ, ನಡೆಯಿರೆ ಪೊನ್ನಂಬಲದಂತಲ್ಲೆ ಮೂವ್ವರ ಬಳಿಗೆ, ನಡುವೆ ತಿದ್ದವರಿಲ್ಲವೆಂದು ಅಲ್ಲಿಗೆ ಆ ಸತಿಪತಿಗಳ ಕರಕೊಂಡು ಬರಲು ಅಲ್ಲಿದ್ದ ಗಣಂಗಳಿಂತೆಂದರು. ಎಲೆ ಅಯ್ಯ ನಿಮ್ಮ ಬಟ್ಟಲು ಆಗ್ಗಕ್ಕೆ ನಾವು ಎಲ್ಲರೂ ಕೂಡಿ ಮೂರು ಸಾವಿರ ವರಹದ ಬಟ್ಟಲ ಮಾಡಿಸಿ ಕೊಟ್ಟೆವೆನಲು ಶಿವನೆಂದನು, ಅಕಟಾ ನೀವು ಪುಣ್ಯಪಾಪವನರಿಯಿರಲಾ ಅದು ನಮಗೆ ತವನಿಧಿ ಬೇಕೆಂದ ವಸ್ತುವ ಕೊಡುವುದು. ಹೊನ್ನಿಗಿನ್ನು ಪರುಷ ಗಿರುಷ ಚಿಂತಾಮಣಿ ಗಿಂತಾಮಣಿ ಮೇರು ಗಿರುಗಿರು ಸರಿಯೇ ಎನ್ನ ಬಟ್ಟಲಿಗೆ, ಶಿವ-ಶಿವಾ ಇಂತು ನುಡಿವರೆ ಎನಲು, ಆ ಸಭೆಯವರು ಎಲೆ ಅಯ್ಯಾ ನಿಮ್ಮ ಬಟ್ಟಲ ನ್ಯಾಯವ ನಾವು ತಿದ್ದಲಾರೆವೆನಲು ಶಿವನೆಂದನು. ತನ್ನ ಸತಿಯ ಕೈಯ್ಯ ಹಿಡಿದು ಕೊಂಡು ಹೊಂಡದೊಳಗೆ ಹೊಕ್ಕರೆ ಬಿಟ್ಟೆವೆನಲು, ಆ ಗಣಂಗಳು ತಿರುನೀಲಕಂಠಯ್ಯ ಅವರಂದಂತೆ ಮಾಡಿ ಎನಲು, ಅದಕ್ಕೆ ಏನಾದರೂ ಆಗಲಿ ಎನ್ನ ಸತಿಯ ಕೈಯ್ಯ ಮುಟ್ಟೆನೆನಲು, ಎನ್ನ ಪಾತ್ರೆ ಬಂದಿತು ನೀವಿನ್ನು ಸುಮ್ಮನಿರಿ ಎಂದು ಸಭೆಗೆ ಹೇಳಿ ಮುಟ್ಟದ ಬಳಿಕ ಇವರು ಕಳ್ಳರೇ ಸರಿ ಇವರ

ಬಗೆಯ ನಾವು ಬಲ್ಲೆವು, ಮತ್ತಾರೂ ಅರಿಯರು, ಗೋವಿನ ವೇಷ ಹುಲಿಯ ಗಮನವೆಂದು ಶಿವನು ಬಡಿಯಲು, ಅಯ್ಯ ಹಸಾದವೆಂಬರು. ಇವರ ನಿಷ್ಠೆಯ ಕಂಡು ಈ ಕೋಲತುದಿಗಳ ನೀವಿಬ್ಬರೂ ಹಿಡಿದುಕೊಂಡು ಮುಳುಗಿದರೆ ನಮಗೆ ಇದೇ ಭಾಷೆ ಎನಲು, ಅದಕ್ಕೆ ಒಡಂಬಟ್ಟು ಕೋಲ ತುದಿಯ ಹಿಡಿದು ಕೊಂಡು ಇವರು ಪಾತ್ರೆಯ ಇರಿಸಿದರುಂಟು ನಾವು ತೆಗೆದುಕೊಂಡುದಿಲ್ಲ, ಶಿವನೇ ಬಲ್ಲನೆಂದು ಹೊಂಡದೊಳಗೆ ಮುಳುಗಲು ಮೊದಲಂತೆ ಹದಿನಾರು ವರುಷದ ಹರೆಯವಾಗಿ ಆ ಸಮಯದಲ್ಲಿ ಶಿವನು ರೂಪು ದೋರಲು ಸತಿಪತಿಗಳು ಚರಣಕ್ಕೆರಗಿ ಆಗ ನುತಿಸಲು ಎಲೆ ಭಕ್ತರಿರಾ ಇನ್ನು ತೊಂಬತ್ತು ವರುಷ ಪರಿಯಂತರ ಸುಖದಲ್ಲಿದ್ದು ಕಡೆಯಲ್ಲಿ ಕೈಲಾಸಕ್ಕೆ ಬನ್ನಿ ಎಂದು ಶಿವನು ಬಯಲಾದನು.

## ೧೪೯ ನೆಯ ವಚನದ ಕಥೆ. (೨೨-೩೬)

### ಸಾಮವೇದಿ.

ಪೂರ್ವದಲ್ಲಿ ವೇದವಿದ ಮಹಾಕಾಯನೆಂಬ ಗಂಧರ್ವನು ಜಂಗಮ ಪ್ರಸಾದ ಲಿಂಗಕ್ಕೆ ಸಲುವುದೆ ಎಂದು ಕೇಳಲು, ಜಂಗಮ ಪ್ರಸಾದವ ಸಂದೇಹಿಸಬಹುದೆ ನೀನು ಶುನಿಯಾಗು ಎಂದು ಶಾಪವನೀಯಲು, ಆವ ಹೆದರಿ ನಿಶ್ಶಾಪವ ಆವ ಪರಿ ಎನಲು ಮರ್ತ್ಯದಲ್ಲಿ ಶ್ವಪಚಯ್ಯಗಳ ಭಾಂಡಶೇಷವು ದೊರಕೊಳಲು ಆಗ ನಿಶ್ಶಾಪವೆಂದರು. ಆ ನಿರೂಪದಿಂ ಅವರಾಶ್ರಯಲ್ಲಿರ್ದು ಅವರು ಭಾಂಡಶೇಷವ ತುಡುಕಲು ಅದ ವಧಿಸಿ ಆದರ ತಲೆಯಲಿ ಪಾಕವ ಮಾಡುತ್ತಿರಲು ಅತ್ತ ಖೇಚರದಲ್ಲಿ ಬಪ್ಪ ಸಾಮವೇದಿಯ ನೆಳಲು ಬೀಳುತ್ತಿರಲು ತಮ್ಮ ಪಾದರಕ್ಷೆಯ ಮುಚ್ಚುವದ ಕಂಡು ಕೋಪಿಸಿ ಇದೇಕೆಂದು ಕೇಳಲು ಭವಿ ದೃಷ್ಟಿ ಸೋಂಕಿದುದು, ಕಿಲ್ಬಿಷವೆಂದು ದೃಷ್ಟವ ತೋರಲು ಅವರಡಿಗೆರಗಿ ಉಪದೇಶವ ಪಡೆದು ಶಿವಭಕ್ತಿ ಮಾರ್ಗದಲ್ಲಿ ಆಚರಿಸುತ್ತಿರಲು ಇತ್ತ ಸಾಮವೇದಿಗಳು ತಮ್ಮ ಗುರುವಾದ ಶ್ವಪಚಯ್ಯಗಳಿಗೆ ನಮಸ್ಕಾರವ ಮಾಡಿ ನಾಳೆ ನಮ್ಮ ತಂದೆಯ ದಿನ ಅದಕ್ಕೆ ನೀವೆ ವಿಶ್ವೇದೇವರಾಗಿ ಬಂದು ಕರುಣಿಸುವುದೆಂದು ಬಿನ್ನೈಸಲು ಅದಕ್ಕೆ ಶ್ವಪಚಯ್ಯನೆಂದರು. ಪಿತೃಕಾರ್ಯ ನಾವು ಬಾರೆವು.



ಬಂದರೆ ವೀರಶೈವಕ್ಕೆ ವಿರೋಧವು. ನಿನಗೆ ಶಿವನೇ ವಿಶ್ವೇ ದೇವರಾಗಿ ಬಂದಾನೆನಲು ಶಿವನ ಕುರುಹು. ನನಗೆ ಹೇಗೆ ತಿಳಿದೀತೆನಲು ಶ್ವಪಚ ವೇಷದಿಂದ ಬಂದುದೇ ಕುರುಹೆನಲು ಆಗ ಸಾಮವೇದಿ ಭಸಿತ ರುದ್ರಾಕ್ಷಿಗಳ ಧರಿಸಿ ಶಿಷ್ಯರನು ಶಿವಭಕ್ತರನು ಕರಿಸಿ ಶಿವನ ಬರವ ನೋಡುತ್ತಿರಲು ಆಗ ಶಿವನು ಸತ್ತ ಕರುವ ಸಂಭೋಳಿಗೋಲ ಹಿಡಿದುಕೊಂಡು ಬಂದು ಸಮ್ಮಾರ್ಜನೆಯ ಮೇಲೆ ಪಾದವ ಮಡಗಲು ಕೊರಳಲ್ಲಿ ಲಿಂಗವ ಕಂಡು ಪಾದವ ಹಿಡಿಯಲು ಅಷ್ಟರೊಳಗೆ ಸತ್ತ ಕರುವೇ ತ್ರಿಶೂಲದಲ್ಲಿದ್ದ ಹೆಣವಾಗಿ ಪಂಚಮುಖ ದಶಭುಜ ಉಟ್ಟ ಹೊದ್ದ ಅರಿವೆಗಳೇ ಹುಲಿ ಗಜ ಚರ್ಮಗಳಾಗಿ ಕಿವಿಯಲ್ಲಿಟ್ಟ ಎಲುವೇ ನಾಗಕುಂಡಲಗಳಾಗಿ ಕ್ರಿಯಲ್ಲಿರ್ದ ಸಂಭೋಳಿಗೋಲೆ ಕಂಕಾಳವಾಗಿ ಶಿವನು ನಿಜರೂಪ ತೋರಿ ಸಾಮವೇದಿಯ ಕೈಲಾಸಕ್ಕೆ ನಡೆ ಎನಲು ಎನ್ನ ಗುರುವ ಬಿಟ್ಟು ಬಾರೆನೆನಲು ಆಗ ಶ್ವಪಚಯ್ಯನನು, ಛತ್ತೀಸ ಪುರಗಳನು, ಸಾಮವೇದಿಯನು ಶಿವನು ಕೈಲಾಸಕ್ಕೆ ಕರೆದೊಯ್ದರು. ಸಾಕ್ಷಿ— ವಾಯುವ್ಯ ಸಂಹಿತೆ, ಜನ್ಮಸ್ಸ ಪಾಕ-ಮಧ್ಯಸ್ತು ಹರಚರಣವಂದನ ರತಸ್ಯ ಮಾಚಾನೀಶ್ವರ ಭೋಕ್ತ್ರೋಭವಾಮಿ ಭವನೇಪಿ ಶಕ್ರಸ್ಯ.

## ೧೫೦ ನೆಯ ವಚನದ ಕಥೆ. (೨೩—೩೭)

### ಇಳೆಯಾಂಡ ಗುಡಿಮಾರ.

ಇಳೆಯಾಂಡಗುಡಿ ಎಂಬ ಪುರದಲ್ಲಿ ಇಳೆಯಾಂಡಗುಡಿಮಾರಯ್ಯಗಳಿರ್ದರು. ಅವರು ಚಿತ್ತವೆಂಬ ಭೂಮಿಯಲ್ಲಿ ಶಿವಸ್ನೇಹವೆಂಬ ನೇಗಿಲು ಅದಕ್ಕೆ ಅಹಂಕಾರವೆಂಬ ಈಸು ಷಡುವರ್ಗವೆ ಮನವೆಂಬ ಹಗ್ಗ ಇಷ್ಟನು ಮಾಡಿಕೊಂಡು ನಿಷ್ಠೆ ಎಂಬ ಬೀಜವ ಬಿತ್ತಿ ಜ್ಞಾನವೆಂಬ ಸಸಿಯ ಶಿವಾನಂದವೆಂಬ ಮಳೆಯಿಂದ ಸಾಕುತ್ತ ಇಂತು ಅಂತರಂಗ ಬಹಿರಂಗದ ಆರಂಭವ ಮಾಡುತ್ತ ಮತ್ತೆ ಮಾನ್ಯದ ಹೊಲನ ಜಂಗಮಕ್ಕೆ ಕೊಟ್ಟು ಸರಿಯಾಗಲು, ಉಳಿದ ಹೊಲ ಆಭರಣಂಗಳ ಮಾರಿ ಜಂಗಮಕ್ಕೆ ನೀಡುತ್ತ ಮತ್ತೆ ತಾವು ಹೊದ್ದುದ ಸತಿಯುಟ್ಟುದ ಜಂಗಮಕ್ಕೆ ಕೊಟ್ಟು, ಮತ್ತೆ ಮಗುದೊಂದು ತನಗೊಂದು ಕೈಪ ಸತಿಗೊಂದರಿವೆ ಇಂತಹ ಬಡತನದಲ್ಲಿದ್ದು ಜಂಗಮದ ಭಕ್ತಿಯ ಬಿಡಲಿಲ್ಲ. ಮತ್ತೆ ಧನಧಾನ್ಯವಿ

ಲ್ಲದಿರಲು ತನುವನರ್ಪಿಸುವೆನೆಂದು ಇಳೆಯಾಂಡಗುಡಿಮಾರಯ್ಯನು ತೊಂಭತ್ತು ವರುಷ ಪರಿಯಂತರ ಜಂಗಮಕ್ಕೆ ನೀಡುತ್ತಿರಲು ಇತ್ತ ಶಿವನು ಭಕ್ತನ ಕಾಡಿ ನೋಡುವೆನೆಂದು ನರೆ ತೆರೆ ಜೋಲುವ ಹುಬ್ಬು ಕೋಲ ಹಿಡಿದು ಶಿವನು ವೃದ್ಧನಾಗಿ ಮಳೆಯೊಳಗೆ ಮಾರಯ್ಯನ ಮನೆಗೆ ಬಂದು ಹಲ್ಲು ಗಿಟಿಗಿಟಿ ಎನಲು ಅವರು ಕೇಳಿ ಕರದೊಯ್ದು ಗುಡಿಸಲು ಹಿರಿದು ಬೆಂಕಿಯ ನೊಟ್ಟಿ ಕೊಡಲು ಕಾಸಿಕೊಂಡು ಹಸಿದು ಅಂಬಕಳ ಉಂಟೇ ಎನಲು ತಮಗೆ ಮೂರು ದಿನ ಉಪವಾಸವೆನ್ನದೆ ರಾತ್ರಿಯಲ್ಲಿ ಹೊಲಕೆ ಹೋಗಿ ಬಿತ್ತಿದ ಬತ್ತವ ಆಯ್ದು ತಂದು ಹುರಿದು ಅಂಬಳವ ಮಾಡಿ ಹರಿವೆಯ ಸೊಪ್ಪ ತರುವುದಕ್ಕೆ ಮಗನು ಅಲ್ಲಿ ಹಾವು ಕಚ್ಚಿ ಸಾಯಲು ಅವನ ಲೆಕ್ಕಿಸದೆ ತಾನೇ ತಂದು ತಾಳಿಸಿ ಬಾಳೆ ಎಲೆಯಲ್ಲಿ ಎಡೆಮಾಡಿ ಸಲಿಸಿ ಎನಲು ಆಗ ನಿನ್ನ ಮಗನು ನಮ್ಮ ಪಜ್ತಿಗೆ ಬನ್ನಿ ಎನಲು ಆಗ ಮಗನ ಎಬ್ಬಿಸಿಕೊಂಡು ಬರಲು ಆಗ ಶಿವನು ಮೂವರನು ಕೈಲಾಸಕ್ಕೆ ಕರಕೊಂಡು ಹೋದರು.

---

## ೧೭೯ ನೆಯ ವಚನದ ಕಥೆ. (೨೬—೫೬)

### ಸಗರ ಕರ್ತವೀರ್ಯ.

ಈರೇಳು ರತ್ನ ಹದಿನೆಂಟು ಲಕ್ಷ ಗಜ ನಾರಿಯರು ನಾಲ್ಕು ಲಕ್ಷವು ಮೂವತ್ತೆರಡು ಸಾವಿರ ಮಕ್ಕಳು ರಥಂಗಳು ಸೂರ್ಯನ ರಥಕ್ಕೆ ಸಲೆ ಮಿಗಿಲೆನಿಸುವ ರಥಂಗಳು ಸಾಲದೆ ಸಿರಿಗೆ ನೆಲೆವನೆ ಎನಿಸುವ ಸಾಜಿತಪುರ ಮೂರುವರೆ ಕೋಟಿ ಬಂಧುಗಳು ಮೂವತ್ತೆರಡು ಕೋಟಿ ಜಾತ್ಯಶ್ವ ಇಪ್ಪತ್ತೆರಡು ಕೋಟಿ ವೈಗಾವಲ ವೀರಭಟರು ಛಪ್ಪನ್ನದೇಶದ ರಾಯರುಗಳೆಲ್ಲರೂ ಕಪ್ಪಗಾಣಿಕೆಯಂ ತೆತ್ತು ಬಹರು. ಕೂಡಲಸಂಗಮದೇವ ನಿಮ್ಮ ಕೃಪೆ ತಪ್ಪಿದಲ್ಲಿ ಆ ಸಗರ ಕರ್ತವೀರ್ಯರು ಒಂದು ಕ್ಷಣಕೆ ಮಡಿದರು.

---



## ೧೮೦ ನೆಯ ವಚನದ ಕಥೆ. (೨೬---೫೮)

### ಕೋಲಿ ಶಾಂತಯ್ಯ

ಬಿಜ್ಜಳರಾಯನ ಚಾವಡಿಯ ಕಂಭ ಕುಸಿದಿರಲು ಬಿಚ್ಚಿ ಕಟ್ಟಿಸೆಂದು ಬಸವೇಶ್ವರಗೆ ಹೇಳಲು ಅವರು ಕೋಲ ಶಾಂತಯ್ಯಗೆ ಹೇಳಲು ಅವರು ಹರಿದಾಸನೆಂಬ ಉಪ್ಪಾರಗೆ ಹೇಳಲು ಅವರು ಚಿತ್ರದಲ್ಲಿದ್ದ ಜಂಗಮವ ಕಂಡು ಇವ ಕಂಡ ಕಂಡ ಭಕ್ತರಲ್ಲಿ ಉಂಡು ಡೊಳ್ಳು ಬೆಳಸಿಕೊಂಡವನೇ ಎಂದು ಹಾರೆಯಲ್ಲಿ ತಿವಿಯಲು, ಆಗ ಕೋಲಶಾಂತಯ್ಯ ಕಂಡು, ತಿವಿಯ ಬೇಡೆನಲು ಮೀರಿ ತಿವಿಯಲು ಹರಿದಾಸನ ತಲೆಯು ಹೊಯ್ಯಲು, ಅದ ಕೇಳಿ ಬಿಜ್ಜಳ, ಬಸವಣ್ಣ ಉಪ್ಪಾರನ ಕೊಲ್ಲಬಹುದೆ, ಅವ ಜಂಗಮವನರಿಯಬಹುದೇ ಎನಲು ಹಾಗಾದರೆ ಕರೆಯಿರಿ ಎನಲು ಚಿತ್ರದ ಸಂಗಮನಾಥ ಬನ್ನಿ ಎನಲು ಹಾಗೆ ಬಂದು ಎಲೆ ಬಸವಣ್ಣಾ ಹಾರೆ ತಾಗಿ ನೊಂದೆವೆನಲು ಅದು ನೀವು ನೊಂದುದಲ್ಲ ನಾ ನೊಂದೆನೆಂದು ಜಂಗಮದೇವನ ಸಂತೈಸಿ ತಮ್ಮ ಗೃಹಕ್ಕೆ ಕರಕೊಂಡು ಹೋದರು. ಇತ್ತ ಬಿಜ್ಜಳ ಇವನ ರಕ್ಷಿಸಿ ಎನಲು ಆಗ ಕೋಲ ಶಾಂತಯ್ಯನು ಹರಿದಾಸನ ಕೋಲ ಮುಟ್ಟಿಸಿ ಪ್ರಾಣವ ಪಡೆದರು.

---

### ಸುದೇವಿ ನರವರ್ಮ.

ಕಿಷ್ಕಿಂಧ ಪರ್ವತದಲ್ಲಿ ಕಲ್ಯನೆಂಬ ಮುನಿ ಪ್ರತಿಷ್ಠಿಸಿ ಕಲ್ಯಲಿಂಗಕ್ಕೆ ಕೆಂಪು ದಾಸಾಳದ ಹೂವ ಧರಿಸಿರಲು ಅದು ಮಾಂಸವೆಂದು ಹದ್ದು ಬಂದು ಲಿಂಗ ಸಮೀಪದಲ್ಲಿ ಕುಳಿತು ಮಾಂಸವಲ್ಲಸೆಂದು ಹಾರಿ ಹೋಗಿ ಸಾಯಲು ಅದರ ಜೀವವ ಯಮನ ಬಳಿಗೊಯ್ಯಲು ಅವ ಇದರ ಪುಣ್ಯವೇನೆಂದು ಚಿತ್ರಗುಪ್ತರ ಕೇಳಲು ಅವರು ಲಿಂಗದ ಬಳಿಯಿಂದ ಹಾರಿದಾಗ ದೂಳು ಹಾರಲು ರಜವ ಗುಡಿಸಿದ ಫಲವಹುದೆಂದು ಕಳುಹಲು ಅದು ವಸುವರ್ಮನೆಂಬ ಅರಸನ ಮಗಳಾದ ಸುದೇವಿ ಎಂಬ ನಾಮದಿಂದ ಪುಟ್ಟಿ ನರವರ್ಮರಾಜನ ಮದುವೆಯಾಗಿ ಅವನ ಸಾವಿರ ಸತಿಯರೊಳಗೆ ಪಟ್ಟದ ರಾಣಿಯಾಗಿರುವಾಗ ಒಂದು ಕಸಬರಿಗೆಗೆ ಚಿನ್ನದ

ತುಂಬು ಸೂರೆವುಟದ ಗವಸಣಿಗೆಯ ಹಾಕಿಸಿ ಅವ ತಕ್ಕೊಂಡು ಅಂದಣ ವನೇರಿ ಲಿಂಗದ ಗುಡಿಗೆ ಹೋಗಿ ಕಸವ ಗುಡಿಸುವಾಗ ಉದ್ದಾಲನೆಂಬ ಮುನಿ ಕಂಡು ನಿನ್ನಲ್ಲಿ ಗೌಡಿಯರಿದ್ದು ನೀನು ಗುಡಿಸುವ ಕಾರಣವೇ ನೆನಲು ಅವರು ಗುಡಿಸಿದ ಪುಣ್ಯ ಆವರಿಗೆ ಎನಲು ಆಗ ಮುನಿ ತಿಳಿದು ಪೂರ್ವದಲ್ಲಿ ರಕ್ಕೆಯಿಂವ ದೂಳು ಹಾರಿಸಿದ ಫಲದಿಂದ ಈ ಪದವಿಯಾ ಯಿತ್ತು ಗುಡಿಸಬಹುದೆಂದು ತನ್ನಾಶ್ರಮಕ್ಕೆ ಹೋಗಲು ಇತ್ತ ಈ ನರ ವರ್ಮರಾಜನು ಪೂರ್ವದಲ್ಲಿ ಮೊಲನಾಗಿರುವಾಗ ಲಿಂಗದ ಸುತ್ತಳ ಕರಿ ಕೆಯ ಮೇಯಲು ಆ ಲಿಂಗಕ್ಕೆ ಶುಚಿಯಾದಂತಾಗಲು ಆ ಫಲದಿಂದ ಆರಸನಾಗಿ ಹುಟ್ಟಿದನು. ಅದು ಕಾರಣದಿಂದ ಸತಿಪತಿಗಳು ಇಬ್ಬರೂ ಲಿಂಗದ ಗುಡಿಯಲ್ಲಿ ಹುಟ್ಟಿದ ಹುಲ್ಲು ರಜಗಳ ತೆಗೆದುಕೊಂಡು ಸುಖ ದಲ್ಲಿ ಕೈಲಾಸಕ್ಕೆ ಹೋದರು.

## ೧೭೬ ನೆಯ ವಚನದ ಕಥೆ. (೨೭---೬೩)

### ಬಾಲಚಂಡಯ್ಯ.

ಸ್ತೋತ್ರವನರಿಯೆ, ಮಂತ್ರವನರಿಯೆ. ಕೂಸ ಕೊಂದ ಭೂತನಂತೆ ಕೈಲಿ ದೇವರ ಹಿಡಿದುಕೊಂಡು ಸುಮ್ಮನೆ ಇರಲಾಗದು. ಅದೆಂತೆಂ ದೊಡೆ ಪೂಜಾಕೋಟಿ ಸಮಸ್ತೋತ್ರಂ ಎಂದುದಾಗಿ ಬಾಲಚಂಡಯ್ಯ ಗಳು ಮುಗ್ಧ ಭಾವದಿಂದ ಮಳಲ ಲಿಂಗವ ಮಾಡಿ ಆಕಳ ಹಾಲ ನೆರೆದು ಎಕ್ಕೆ ಕಕ್ಕೆ ಹೂವಿನಲ್ಲರ್ಚಿಸಿ ದಂದಣ ದತ್ತಣವೆಂದು ಕುಣಿದಾ ಡಲು ಅವರ ತಂದೆ ಇದೇನೆಂದು ಕೇಳಲು ಕಾಲಿಲೊದೆಯಲು ಅವನ ಕಾಲ ಕತ್ತರಿಸಿ ಆಲುತ್ತಿರಲು ಶಿವನೊಲಿದನು.

## ೧೭೭ ನೆಯ ವಚನದ ಕಥೆ. (೨೭---೬೪)

ಕಾಲನನುಲ್ಲಂಘಿಸಿದ ಭಕ್ತರ ಕಥೆಯ ಕೇಳಿ ಮಾರ್ಕಂಡೇಯನಿಂದ ಮಳೆಯ ರಾಜನಿಂದೆ ವಂದಿಸಿಕೊಳ್ಳನೇ? ಶ್ವೇತನಿಂದ

ಶ್ರೀ ಜಗದ್ಗುರು ತೋಂಟದಾರ್ಯ ಸಂಶೋಧನ ಕೇಂದ್ರ ಗ್ರಂಥಾಲಯ
ಅಂವೇ ಗುಕು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦
ನಾಗನೂರ ಶ್ರೀ ರುದ್ರಾಕ್ಷಿಮಠ
93.1
236.
236.



ಉರಿಸಿಕೊಳ್ಳನೆ? ಪುರುಷರ್ಗೆ ೧೦೦ ವರುಷವೆಂಬ ಮಾದಿರಾಜಯ್ಯನು ಒಂದು ವರುಷ ಮೀರವೆ? ಹೀಗೆ ಕಾಲಕರ್ಮಕ್ಕೆ ಶಿವನೇ ಅಧಿಕ ನೆಂದು ಕಾಲಕರ್ಮಂಗಳ ಖಂಡಿಸಿದರು.

## ೧೭೯ ನೆಯ ವಚನದ ಕಥೆ. (೨೭—೬೬)

### ಕಲಕೇತ ಬ್ರಹ್ಮಯ್ಯ.

ಕಲ್ಯಾಣದಲ್ಲಿ ಕಲಕೇತ ಬ್ರಹ್ಮಯ್ಯಗಳು ಮುಂಜುಟ್ಟಕಟ್ಟಿ ನೊಸ ಲಲ್ಲಿ ವಿಭೂತಿಯನಿಟ್ಟು ಕಿವಿಯಲ್ಲಿ ಕೆಂದಳಿರ ಧರಿಸಿ ಕಾವಿನ ಕಪ್ಪಡ ವನುಟ್ಟು ಎಡದ ಪಾದದಲ್ಲಿ ಅಂದುಗೆ ಬಲದ ಪಾದದಲ್ಲಿ ಗೆಜ್ಜೆ ದಕ್ಷನ ಕುರಿದಲೆಯ ಕೋಡಿನ ತೆರ ಬಲಿದ ಕೊಂಬಂ ತನ್ನ ಎಡದ ಕೈಯ್ಯಲ್ಲಿ ಪಿಡಿದು ಗಿಲಿಕೆ ಘಲಿಲೆನುತೆ ಬಲಿಯ ಕೊಂದ ವಿಷ್ಣುವಿನ ನಟ್ಟೆಲುವ ಹಿಡಿದಂತೆ ಬೆಳಗುಂದಂಗೆಯಂ ಬಲದ ಕೈಯ್ಯಲ್ಲಿ ಪಿಡಿದು ತಿರುಹುತ್ತ ಇಂತಪ್ಪ ವೇಷವನಳವಡಿಸಿಕೊಂಡು ಮುಗುಳ್ನಗೆಯ ನಗುತ್ತ ಶಿವಭಕ್ತರ ಗೃಹಕ್ಕೆ ಬಂದು ವೋರೆಯ ಮುರಿಕಿಸುತ್ತ ನಗಿಸುತ್ತಂ ಭೃಂಗೀಶ್ವರ ನಂತೆ ಕೋಡಂಗಿಯಾಟವನಾಡುತ್ತ ಪಾಡುತ್ತ ಶಿವಭಕ್ತರಲ್ಲಿ ಧಾನ್ಯವ ಬೇಡಿ ತಂದು ಜಂಗಮಾರ್ಚನೆಯ ಮಾಡುತ್ತಿರಲು ಶಿವನು ಕಾಲಕೇತ ಬ್ರಹ್ಮಯ್ಯಂಗೆ ಜೇಡಿದಷ್ಟು ದ್ರವ್ಯವ ಕೊಡಲು ಜೇಡಿದ ಬಡ ಭಕ್ತರಿಗೆ ಕೊಟ್ಟರು.

## ೧೮೦ ನೆಯ ವಚನದ ಕಥೆ. (೨೭---೬೭)

### ವಿದಳ.

ಶಿವನಾಮದ ಮಹತ್ವ. ಲಿಂಗಪುರಾಣದಲ್ಲಿ ಶಿವರಹಸ್ಯದಲ್ಲಿ ವಿದ ಳನೆಂಬರಸು ಬಾಲತ್ವದಿಂದಿರೆ ತಂದೆ ಮೃತವಾಗೆ ತನ್ನ ಪಟ್ಟವಾಗಲು ಸುರಾಪಾನವೆಂಬ ಮಂತ್ರಿ ವಿದಳನೆಂಬರಸನಿಗೆ ಬುದ್ಧಿಯ ಹೇಳುವಲ್ಲಿ ಅಹರ ಕಡ ಪ್ರಹರ ಕೊಲ್ಲು ಎಂದು ಹೇಳಲು ಅಹರ ಪ್ರಹರವೆಂದು ಮೃತ ವಾಗೆ ಶಿವನೊಲಿದನು.

## ೧೮೧ ನೆಯ ವಚನದ ಕಥೆ (೨೬—೩೮)

### ರಾವಣ.

ಪೂರ್ವದಲ್ಲಿ ಲಂಕೆಯಲ್ಲಿ ರಾವಣನ ತಾಯಿ ಕೈಕಸೆ ಎಂಬವಳು ಹಿಟ್ಟಿನಲ್ಲಿ ರಜತಾದ್ರಿಯ ಮಾಡಿ ಅದರ ಮೇಲೆ ಲಿಂಗವ ಮಾಡಿರಿಸಿ ಪೂಜಿಸುತ್ತಿರಲು ಅದ ಮಗ ಕಂಡು ಏನು ಮಾಡುತ್ತಿದ್ದೆ ಎನಲು ಶಿವನ ಪೂಜೆ ಮಾಡುವೆನೆನಲು ಹಿಟ್ಟಿನಲ್ಲಿ ಗಿರಿಯನೇಕೆ ಮಾಡಿದೆ, ಅದ ನಾವಿಲ್ಲಿಗೆ ತಂದೆವೆಂದು ಹೋಗಿ ರಜತಾದ್ರಿಯನೆತ್ತಲು ಶಿವನು ಉಂಗುಷ್ಟದಿಂದ ಒತ್ತಲು ಕೆಳಗೆ ಸಿಕ್ಕಿ ಸಾವಿರ ವರುಷ ಇರಲು ಪಾರ್ವತಿ ಪರಮೇಶ್ವರರು ಪುಷ್ಪಕದಲ್ಲಿ ಹೋಗುವಾಗ ಕಪಿ ಮರಿಯ ಹಾಕಿ ಮರದ ಮೇಲಕೆ ನೆಗೆವಾಗ ಅದರ ಮಾಂಸ ಸಿಕ್ಕಿ ಒಣಗಿ ಝೇಂಕರಿಸುತಿರಲು, ಅದ ಶಿವನು ಪ್ರೀತಿಯಲ್ಲಿ ಕೇಳುವದ ಕಂಡು, ತನ್ನ ಕೈಯ್ಯನು ತಲೆಯನು ಕಡಿದು ಅದಕ್ಕೆ ನರವ ಕಟ್ಟಿ ರಾವಣ ಹಸ್ತವ ಮಾಡಿ ನುಡಿಸುವಾಗ ಆ ನಾದಕ್ಕೆ ಶಿವ ಮೆಚ್ಚಿ ಆ ತಲೆಯನು ಕೈಯ್ಯನು ಕೊಟ್ಟು ಲಂಕೆಗೆ ಕಳುಹಿದರು.

---

### ಬ್ರಹ್ಮ.

ಬ್ರಹ್ಮನು ಅಹಂಕರಿಸೆ ಹರನು ಶಿರಚ್ಛೇದವ ಮಾಡಿ ಸೋಮಾಷ್ಟಕದಿ ನುತಿಸೆ ಕರದಲ್ಲಿ ಪಿಡಿದನು.

---

## ೧೮೭ ನೆಯ ವಚನದ ಕಥೆ. (೩೮—೭೪)

### ಸೂರಸಾನಾಂಬೆ.

ಪೋರಾಂಡವೆಂಬ ಅಗ್ರಹಾರದಿ ಸೂರಸಾನಾಂಬೆಯು ಜಂಗಮಾರಾಧನೆಯ ಮಾಡುತ್ತಿರೆ ವಿಪ್ರರ್ನೆರೆದು ಆ ಊರ ರಾಜನಿಗೆ ಹೇಳಿ ಹೊರಡಿಸೆನೆ ಅವರು ಸೂರಸಾನಾಂಬೆಯ ಗೃಹವ ಆಗ್ಯೈವ ಸಮಯದಿ ಶಿವನು ಅಂತ್ಯಜ ವೇಷದಿಂ ಬರೆ ಸೂರಸಾನಾಂಬೆಯು ಮಂದಿರಕ್ಕೆ ಬಿಜಯಂಗೈಸಿ ನೈವೇದ್ಯವ ನೀಡಿ ಆರೋಗಣೆಯ ಮಾಡುವಲ್ಲಿ ಭೂಸುರರ್ನೆರೆದು ಮನೆಯ ಕೆಡಹಿ ಕದವನೊಡೆದು ಅಂತ್ಯಜನ ಹೊಡೆಯಲು ಸೂರಸಾನಾಂಬೆಯು ವಿಪ್ರರಿಗೆ ಮನೆಯಲ್ಲಿ ಲಿಂಗವ ತೋರೆ ವಿಪ್ರರು ಸೂರಸಾನಾಂಬೆಗೆ ವಂದಿಸಿ ಹೋದರು. ಸುರಸಾನಾಂಬೆಯು ಸುಖದಿಂದಿರ್ದಳು.



---

## ೨೧೫ ನೆಯ ವಚನದ ಕಥೆ. (೩೨--೧೦೨)

ಗ್ರಂಥಃ— ಈಶ್ವರೋವಾಚ, ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗ ಮುಚ್ಯತೆ। ಜಂಗಮಂಚಾವಮಾನಂಚ ಸ್ಥಾವರಂ ನಿಃಫಲಂ ಭವೇತ್॥ ಟೀಕುಃ— ಸ್ಥಾವರ ಜಂಗಮವೆಂದು ಈ ಎರಡು ಒಂದೇ ಲಿಂಗವೆಂದು ಹೇಳಲ್ಪಟ್ಟಿತ್ತು. ಜಂಗಮವನು ಉದಾಸೀನವ ಮಾಡಿದರೆ ಸ್ಥಾವರ ಲಿಂಗದಲ್ಲಿ ಮಾಡಿದ ಪೂಜೆ ನಿಃಫಲವಹುದು.

---

## ೨೨೩ ನೆಯ ವಚನದ ಕಥೆ. (೪೩--೧೧೦)

### ಬಲಿ.

ಬಲೀಂದ್ರ ತನ್ನ ದೇಶಕ್ಕೆ ಸುಖವ ಶಿವನಿಂ ಪಡೆದು ಯಜ್ಞವ ಮಾಡಲು ವಿಷ್ಣು ತನ್ನ ಭೋಗ ಹೋದೀತೆಂದು ವಾಮನಾವತಾರದಿಂ ದಾನವನ ಕೇಳಿ ತ್ರಿವಿಕ್ರಮಾವತಾರದಿಂ ಮೆಟ್ಟಿದನು.

---

### ಕರ್ಣ.

ಕೌರವರಾಯನು ಕರ್ಣಗೆ ದಳವಾಯಿ ಪಟ್ಟವ ಕಟ್ಟಿ ದಂಡು ಕಳುಹಲು ಇದ ಕೇಳಿ ಪಾಂಡವರು ಕರ್ಣನ ಮೇಲೆ ನಾಲ್ಕು ಸಾವಿರ ರಥ ಹದಿನಾರು ಸಾವಿರ ಕುದುರೆ ನೂರು ಘಟ ಆನೆ ಲಕ್ಷ ಕಾಲಾಳು

ಗಳಿಂದ ತಾಗಲು ಕರ್ಣನ ಬಲದೊಳಗೆ ಹತ್ತು ಸಾವಿರ ಕುದುರೆ ಸಾವಿರ ಆನೆ ಕಾಲಾಳುಗಳ ಭೀಮ ಕೆಡಹಿದ. ಆ ಮೇಲೆ ಅರ್ಜುನ ಕೃಷ್ಣನ ಸಾರಥಿಯ ಮಾಡಿಕೊಂಡು ರಣಕ್ಕೆ ಬಂದು ಈತನ ಆಯುಧದ ಗಣನೆ ಎಷ್ಟೆಂದರೆ ಮೂಗುಳಂಬುಗಳು ಸಾವಿರದೇಳು ನೂರು, ಒಂಬತ್ತು ಸಾವಿರ ಮಿಟ್ಟೆಯಂಬುಗಳು, ಕವಲಂಬುಗಳು ಹನ್ನೆರಡು ಸಾವಿರ, ಮನೆಯ ಬೋಳಂಬು ನಾಲ್ಕು ಸಾವಿರ, ನಾಳಿಯಂಬುಗಳು ಹತ್ತು ಸಾವಿರ, ಇಷ್ಟನು ಆರು ಬಂಡಿಗಳ ಮೇಲೆ ತುಂಬಿ ಮತ್ತೆ ಪರಶು ಮುಸಲ ಮುಸುಂಡಿ ಸೆಲೆಹ ಪರಿಘ ತೋಮರ ಚಕ್ರ ಅಸಿ ಮುದ್ಗರ ತ್ರಿಶೂಲ ಕಠಾರಿ ಬೆಟಕ ಪಿಂಡಿವಾಳ ಸುರಿಗೆ ಮೊದಲಾದಾಯುಧಂಗಳ ಒಂದು ಬಂಡಿಯಲ್ಲಿ ತುಂಬಿಕೊಂಡು ಬರಲು ಇತ್ತ ಕರ್ಣನು ಶಲ್ಯನ ಸಾರಥಿಯ ಮಾಡಿಕೊಂಡು ಎಂಟುನೂರು ಬಂಡಿಗಳಲ್ಲಿ ಅಂಬುಗಳ ತುಂಬಿಕೊಂಡು ರಣಕ್ಕೆ ಬಂದು ಇನ್ನೂರ ಬಿಲ್ಲ ರಥದ ಮೇಲೆ ಎಡಗಡೆಯ ಮಡಗಿಕೊಂಡು ಅರ್ಜುನನ ಕೂಡೆ ಕಾಳಗವ ಮಾಡುವಾಗ ಆನೆಗಾನೆ ಕಾದುವಂತೆ ರಾಮರಾವಣರು ಕಾದುವಂತೆ ಕಾದುತ್ತಿರಲು ಆಗ ಅರ್ಜುನನ ಕಡೆಗೆ ಹರಿವಿರಿಂಚಿ ಇಂದ್ರಾದಿ ದಿಕ್ಪಾಲಕರಾದರು. ಇನ್ನು ಕರ್ಣನ ಸಾಹಿಗಳು ಹನ್ನೆರಡು ರಾಶಿ ನಕ್ಷತ್ರ ಆಕಾಶ ವಾಯು ಅಗ್ನಿ ಸಮುದ್ರಂಗಳು. ಆ ಮೇಲೆ ಕರ್ಣನೆಚ್ಚಂಬುಗಳ ಅರ್ಜುನ ಕತ್ತರಿಸಿ ತನ್ನಂಬುಗಳಿಂದವನ ಧ್ವಜವ ಕತ್ತರಿಸಿದ. ಮತ್ತೆ ಹತ್ತಂಬಿನಲ್ಲಿ ಬಿಲ್ಲ ಕತ್ತರಿಸಿದ. ಆ ಮೇಲೆ ಕರ್ಣ ಶಸ್ತ್ರವ ಬಿಡಲು ಕಿಡಿಗಳನು ಹೊಗೆಯನು ಉಗುಳುತ್ತ ಆಕಾಶದ ನಕ್ಷತ್ರಗಳನೆಲ್ಲ ಉರುಹುತ್ತ ಬಾಯಲ್ಲಿ ವಿಷದ ನೊರೆಯ ಕಾರುತ್ತ ಛಠ ಛಠಾ ಎಂದು ಕಿಡಿಗಳನುದುರಿಸುತ್ತ ಆಕಾಶವೆಲ್ಲ ಹೊಗೆಯಿಂದಂಧಕಾರವಾಗಲು ಆಗ ಇಂದ್ರನು ಭಯದಿಂದ ಅರ್ಜುನಂಗೆ ನಿರ್ವಿಘ್ನಮಸ್ತು ಎಂದು ಹರಿಸಿದನು. ಬಳಿಕ ಅರ್ಜುನ ಧರ್ಮ ಕೃಷ್ಣರು ಶಿವನ ಜಪಿಸುತ್ತಿರಲು ಆಗ ಶಾಪಾಸ್ತ್ರ ತಪ್ಪಿಹೋಗಲು ಆಗ ಶಲ್ಯನು ಮತ್ತೆ ಸರ್ಪಾಸ್ತ್ರದಿಂದೆಸೆಯಲು ಕರ್ಣ ಮತ್ತೆ ಎಸೆಯಲು ಕುದುರೆಗಳು ಕಂಗೆಟ್ಟು ಭರದಿಂದೆ ಆನೆಗಳು ಒದರಿದವು. ರಥಗಳುರಿದವು ವಿಷದ ಜ್ವಾಲೆಯಿಂದೆ. ಭೀಮ ಅರ್ಜುನಾದಿಗಳು ಮಂತ್ರವ ಜಪಿಸುತ್ತ ತಮ್ಮ ಬಾಣಂಗಳ ಇದಿರಾಗಿ ಬಿಡಲು ಅವನೆಲ್ಲ ಸರ್ಪಾಸ್ತ್ರ ನುಂಗುತ್ತ ಬರುವುದ ಅರ್ಜುನ ಕಂಡು ರಥವ ಐದಂಗುಲವ ನೆಲದೊಳಗೆ ಇಳಯ ಮೆಟ್ಟಿದ. ಆಗಲಾ



ಸರ್ಪಾಸ್ತ್ರ ಬಂದು ಕಿರೀಟವ ಕತ್ತರಿಸಿಕೊಂಡು ಹೋಗಲು ಬಳಿಕ ಅರ್ಜುನ ಉರಿಯನುಗುಳುವ ಬಾಣದಲ್ಲಿ ಕರ್ಣನ ಎದೆಯನೆಸೆಯಲು ಅದರಲ್ಲಿ ಸಾಯನೆಂದು ಕೃಷ್ಣ ವಿಪ್ರ ವೇಷದಲ್ಲಿ ಕರ್ಣನ ಸಮೀಪಕ್ಕೆ ಬಂದು ನೀನು ತ್ಯಾಗಿ ಎಂಬುದ ಕೇಳಿ ಬೇಡುವದಕ್ಕೆ ಬಂದೆನೆನಲು, ಸಿಂಹಾಸನದಲ್ಲಿರುವಾಗ ಬೇಡಲಿಲ್ಲ, ರಣದಲ್ಲಿ ಬೇಡಿದರೆ ಏನಿದೆ, ಎನಲು ನಿನ್ನ ಕವಚವ ಕೊಡು ಎನಲು ಕೊಟ್ಟನು. ಆ ಮೇಲೆ ಅರ್ಜುನ ಶಿವನಲ್ಲಿ ಪಡೆದ ಪಾಶುಪತಾಸ್ತ್ರದಿಂದ ಕೂಡೆ ಗಿರಿಜಾದೇವಿಯರು ಕೊಟ್ಟ ಅಂಜನಾಸ್ತ್ರದಿಂದ ಕರ್ಣನ ಶಿರವ ಕತ್ತರಿಸಲು ಅವ ಮೃತನಾದನು.

## ಖಚರ.

ಖಚರನೆಂಬ ರಾಜ ಹೇಡಿಯಾಗಿರಲು ಅರಿರಾಯರು ದೇಶವ ಹಾಳುಮಾಡುತ್ತಿರಲು ಖಚರನು ಶಿವನ ಕುರಿತು ತಪವ ಮಾಡಿ ಪರಾಕ್ರಮದ ಸ್ತ್ರೀಯಂ ಪಡೆದು ಬಲದ ಭುಜದಲ್ಲಿ ಹುದುಗಿಕೊಂಡು ಅರಿರಾಯರ ಬಲವ ಸಂಹರಿಸಿ ತನ್ನೂರಿಗೆ ಬಂದು ಯಜ್ಞವನ್ನಿಕ್ಕುತ್ತಿರಲು ನಾರಾಯಣ ಕಪಟ ಭಿಕ್ಷಾರ್ಥಿಯಾಗಿ ಬಂದು ಅಸ್ಥಿಯ ದಾನವ ಬೇಡಿ ಕೊಟ್ಟ ರಣದಲ್ಲಿ.

## ಶಿಬಿ.

ಉತ್ತರದೇಶದಲ್ಲಿಯ ಮಂಜರಿ ಎಂಬ ನದಿಯ ತೀರದಲ್ಲಿದ್ದ ರಾಯ ರತ್ನಾಪುರವೆಂಬ ಪಟ್ಟದಲ್ಲಿ ಶಿಬಿಚಕ್ರವರ್ತಿ ಎಂಬ ರಾಯ ಯಜ್ಞಾದಿ ಕರ್ಮಂಗಳ ಮಾಡುವುದ ಕೇಳಿ ತಮ್ಮ ಪದಂಗಳು ಹೋದಾವೆಂದು ವಿಷ್ಣು ಬೇಂಟೆಕಾರನಾಗಿ ಬ್ರಹ್ಮ ಪಾರಿವಾಳವಾಗಿ ಇಂದ್ರ ಗಿಡಗನಾಗಿ ಪಾರಿವಾಳವನಟ್ಟಿಕೊಂಡು ಬರಲು ಆ ಕಪೋತ ಅವನ ಮರೆಯ ಹೊಗಲು ಆ ವಿಷ್ಣು ಹಕ್ಕಿಯ ಕೊಡು ಎನಲು ಇದ ಕೊಡೆನು ಮತ್ತೇನಾದರೂ ಕೊಟ್ಟೇನೆನಲು ಅದನೊಲ್ಲೆ ಆ ಪಕ್ಷಿಯ ತೂಕ ನಿನ್ನ ಮಾಂಸವ ಕೊಡು ಎನಲು ಒಳಿತೆಂದು ಆ ಹಕ್ಕಿಯನೂ ತನ್ನ ಮಾಂಸವನೂ ತಕ್ಕಡಿಯಲ್ಲಿಕ್ಕಿ ತೂಗಲು ಆ ಹಕ್ಕಿಗೆ ಸರಿ ಬಾರದಿರಲು ಮತ್ತೆ ತನ್ನ ದೇಹವನ್ನೆಲ್ಲ ಕೊಯ್ದು ಕೊಟ್ಟನು.

## ೨೩೫ ನೆಯ ವಚನದ ಕಥೆ (೩೫--೨೩೫)

### ದಸರಯ್ಯ

ರಾಮಕೊಂಡೆ ಎಂಬ ಪುರದಲ್ಲಿ ದಸರಯ್ಯನೆಂಬ ಶರಣನು ಹಿಂಸೆಯ ಮಾಡಬಾರದೆಂಬ ಭಾವದಿಂದ ಆಚರಿಸುತ್ತಿರಲು ಒಂದು ದಿನ ಪುಷ್ಪವನೆತ್ತುವಾಗ ಆ ಗಿಡ ನೊಂದೆನೆನಲು ಮತ್ತೆ ಚಿವುಟಲು ಅದಕ್ಕೆ ರಕ್ತ ಸುರಿಯಲು ಕಂಡು ಆ ಗಿಡದ ಕೆಳಗೆ ಸಮ್ಮಾರ್ಜನೆಯ ಮಾಡಿ ಉದು ರಿದ ಹೂವ ತಂದು ಶಿವಪೂಜೆಯ ಮಾಡುತ್ತಿರಲು ಒಂದು ದಿನ ತಲೆಯ ಮೇಲೆ ಗುದ್ದಿದ ಮೋಟಮಲ್ಲನ ನಿಜ ಜಂಗಮವ ಮಾಡಿ ಬಸವಣ್ಣನು ಶಿವನಾಗಮಯ್ಯಗಳ ಬೆರಳಲ್ಲಿ ಅಮೃತವ ಕರಿಸಿದಂತೆ ಬೆರಳುಗಳ ಚಿಗುರಿಸಿದರು. ಚೋರಚಿಕ್ಕರ ಕೊರಳ ಬದನೆಯಕಾಯಿಗಳ ಲಿಂಗವ ಮಾಡಿದಂತೆ ಈತನ ಬರಿಯ ಸೆಜ್ಜೆಯೊಳಗೆ ಲಿಂಗವನುಂಟುಮಾಡಿ ಆ ಚರಮೂರ್ತಿಯು ದಸರಯ್ಯನು ಶಿವನೊಳೇಕಾರ್ಥವಾದರು.

---

## ೨೪೫ ನೆಯ ವಚನದ ಕಥೆ (೩೭––೨೪೫)

### ಎಡೆಮಟದ ನಾಗಯ್ಯ.

ಚೋಳಮಂಡಲದ ಕಾಂಚೀಪುರ ಹೊರವಳೆಯದ ಅರ್ಧ ಕೋಶ ದಲ್ಲಿ ಎಡೆಯ ಮಟದ ನಾಗಯ್ಯಗಳು ಸೀಮಾಲಂಘನ ಶೀಲಸಂಪನ್ನರಾಗಿ ಗುರು ಲಿಂಗ ಜಂಗಮದ ಭಕ್ತಿಯ ಕೇಳಿ ಬಸವೇಶ್ವರನು ಅವರ ದರ್ಶನವ ಮಾಡಬೇಕೆಂದು ಆ ಚೋಳನು ಕಪ್ಪವ ಕೊಡನೆಂದು ಬಿಜ್ಜಳನ ಚತು ರಂಗಬಲ ಸಹವಾಗಿ ಆ ನಾಗಯ್ಯಗಳ ದರ್ಶನವ ಮಾಡಿ ಅಲ್ಲಿ ೭ ದಿನ ಭಕ್ತಿಯ ಮಾಡಿ ಬೀಳ್ಕೊಂಡು ಕಲ್ಯಾಣಕ್ಕೆ ಬಂದರು.

---

## ೨೪೯ ನೆಯ ವಚನದ ಕಥೆ (೩೭—೧)

### ಭೀಮ.

ಭೂತದಯವಿಲ್ಲದವರ ಮಾಟವೆಂಬುದಕ್ಕೆ ಕಥೆ— ಪಾಂಡುವಿನ ಮಗ ಧರ್ಮರಾಯ ಋಷಿಗಳಿಗೆ ನೀಡುವಾಗ ಭೀಮನು ಋಷಿಗಳ ಕರೆ



ವುದಕ್ಕೆ ಹೋಗಿ ಇವರು ಗಮ್ಮನೆ ಸ್ನಾನವ ಮಾಡರೆಂದು ಎರಡು ಕಯ್ಯಲ್ಲಿ ಅವರ ಜಡೆಯ ಹಿಡಿದು ನೀರೊಳಗೆದ್ದೆದ್ದು ತೆಗೆದು ಕರೆದುಕೊಂಡು ಹೋಗಿ ನೀಡಿಸುತ್ತಿರಲು ಒಂದು ದಿನ ಧರ್ಮನು ಎಲೆ ಋಷಿಗಳಿರಾ, ನೀವು ಉಂಬು ವುದು ಉಡುವುದು ವ್ಯಸಷ್ಟನ್ನ, ಬಡವಾದಿರೇಕೆನಲು ನಿನ್ನ ತಮ್ಮ ಬಂದು ನಮ್ಮ ಜಡೆಯ ಹಿಡಿದು ನೀರೊಳಗೆ ಮುಳುಗಿಸಿ ತೆಗೆವನು, ಬಡವಾ ದೆವೆನಲು ಅದಕ್ಕೆ ಧರ್ಮನು ತಮ್ಮನ ಮನಸ್ಸು ನೊಂದೀತೆಂದು ದೃಷ್ಟವ ತೋರಬೇಕಾಗಿ ಗಂಧಮಾದನ ಪರ್ವತದ ಮುಸಿಯ ಕರತಾರೆಂದು ಕಳು ಹಲು ಅಲ್ಲಿಗೆ ಹೋಗಿ ಎಲೇ ಕಿಂದಮ ಋಷಿಯೆ ನಿನ್ನ ಮೈ ಸುವರ್ಣ ವಾಗಿ ಇದೆ, ನಿನಗೆ ಸೂಕರನ ಮುಖವಾದ ಕಾರಣವೇನೆನಲು ಅನೇಕ ದಾನಗಳ ಮಾಡಿದೆನು, ಮೃದು ವಾಕ್ಯವ ನುಡಿಯದ ಕಾರಣ ಈ ಮುಖ ವಾಯಿತ್ತೆನಲು ಅದ ಕೇಳಿ ಅಂಜಿ ಭೀಮನು ಭಯಭಕ್ತಿಯಿಂದ ಕರೆ ದೊಯ್ದು ನೀಡಿದನು.

---

## ೨೫೮ ನೆಯ ವಚನದ ಕಥೆ. (೩೮--೬)

### ಸೇದಿರಾಜ.

ಚೋಳಮಂಡಲದ ತಿರುವಾಲೂರೊಳಗೆ ಸೇದಿರಾಜನೆಂಬ ಶರಣ ರಿರ್ಪರು. ಆಗವರಿಗಂತೆ ಜಂಗಮವೇ ಪ್ರಾಣ, ಅವರ ನುಡಿಯೇ ಶಿವನ ನುಡಿ, ಅವರ ಬೀಳುಡಿಗೆಯೇ ಹೊದಿಕೆ, ರಾಜ್ಯವೆಲ್ಲ ಜಂಗಮ ದೇವ ರದೆಂದು ಇರಲು, ಆಗ ಸೇದಿ ರಾಜರ ದಾಯಾದಿಗಳು ನಮಗೆ ರಾಜ್ಯವ ಪಾಲು ಮಾಡೆನಲು ನಿಮಗೇಕೆ ಪಾಲೆನಲು ಅವರು ಬಿಟ್ಟು ಹೋಗಿ ಜಂಗಮವೇಷವ ಧರಿಸಿ ಅತಿರಥ ಸಮರಥ ಮಹಾರಥ ಬಲವಂತ ರೆಂಬವರ ಕೂಡಿಕೊಂಡು ಸೇದಿರಾಜನ ವಧಿಸುವೆವೆಂದು ಮನೆಗೆ ಬರಲು ಆ ಸೇದಿರಾಜ ನಮಸ್ಕರಿಸಿ ಏನು ಕಾರಣ ಬಂದಿರೆನಲು ನಿನಗೆ ಆಗ ಮಂಗಳ ಕೇಳಿಸುವುದಕ್ಕೆ ಬಂದೆವೆನಲು ಬದುಕಿದೆನೆಂದು ಕುಳ್ಳಿರಿಸಿ ದೇವಾನ್ನವ ನೀಡಲು ಸಲಿಸಿದ ಬಳಿಕ ಇನ್ನು ಆಗಮಂಗಳ ಹೇಳಿಹೆವೆ ನಲು ಕೇಳುವಾಗ ಪುಸ್ತಕದ ಹಾಗೆ ಮಾಡಿಕೊಂಡು ಬಂದು ಆಯು ಧದಿಂದ ಸೇದಿರಾಜಯ್ಯನನಿರಿಯಲು ಆ ಕಪಟವೇಷವ ಧರಿಸಿ ವಿಭೂತಿ ರುದ್ರಾಕ್ಷಿಗಳು ಇಂತಪ್ಪ ಭಕ್ತರ ಕೊಲಬಹುದೆ ಎಂದು ಅರಸು ದೇವಾ

ಅಲಗು ಒತ್ತಿ ಕ್ಕೈ ಸೊಂದಿತ್ತು, ಎಂದು ತನ್ನ ಮಂತ್ರಿಯು ಕರೆದು ಇವರನಾರು ಕೊಲ್ಲದ ಹಾಗೆ ಕಳುಹಿಸಿ ಬಾ ಎಂದು ಹೇಳಿ ತನ್ನೆದೆ ಯಲ್ಲಿ ಮೂಡಿದಲಗ ಕೀಳಲು ಅದಕ್ಕೆ ಶಿವ ಮೆಚ್ಚಿ ಇಂತು ಜಂಗಮವ ನಂಬಿದವರುಂಟೆ ಎಂದು ತನ್ನೊಳಗೆ ಇಟ್ಟುಕೊಂಡನು.

---

### ಮೊನವಿಡುನೈನಾರ.

ತ್ರಿಣಕಾವೇರಿ ಎಂಬ ಪುರದಲ್ಲಿ ಮೊನೆವಿಡುನೈನಾರೆಂಬ ಶರಣರಿ ರ್ಪರು. ಅವರ ಪಟ್ಟದ ರಾಣಿಗೆ ಪ್ರಾಯ ಹೋಗಲು ಮತ್ತೊಂದು ಹೆಣ್ಣ ಮದುವೆಯಾಗಿ ಗುರುಲಿಂಗಜಂಗಮ ಭಕ್ತಿಯ ಮಾಡುತ್ತಿರಲು ಒಂದು ದಿನ ತನ್ನ ಪತಿಯ ಮಂಡೆಗೆ ಎಣ್ಣೆಯನೊತ್ತುವಾಗ ನರೆಯ ಕಂಡು ಮುಪ್ಪು ಬರಬಹುದೆ ಎಂದು ತನ್ನ ಹಣೆಯ ಮುಟ್ಟಿಕೊಳ್ಳಲು ಅದ ಪತಿ ಕಂಡು ಹೆಣ್ಣುಗಳಿಗೆ ಆರೋಚಿಕೆಯಾಯಿತ್ತಲ್ಲಾ ಎಂದು ಒಂದು ಏಕಾಂತಸ್ಥಳದಲ್ಲಿ ಕುಳಿತು ಶಿವಧ್ಯಾನವ ಮಾಡಲು ಶಿವನು ಪ್ರತ್ಯಕ್ಷನಾಗಿ ಇನ್ನೇನು ಬೇಕೆಂದು ಕೇಳಲು ಮುಪ್ಪುಬಾರದಂತೆ ಸಂಜೀವನ ರತ್ನವ ಪಾಲಿಸೆನಲು ಕಯ್ಯಲ್ಲಿ ರತ್ನವ ಕೊಟ್ಟು ಶಿವನು ಬಯಲಾದನು. ಬಳಿಕ ರತ್ನವ ಮಸ್ತಕದ ಪಶ್ಚಿಮ ಚಕ್ರದ ಬಳಿಯ ಸೀಳಿ ಮಡಗಿಕೊಳಲು ಆಮೇಲೆ ಹದಿನಾರು ವರುಷದ ಪ್ರಾಯದಲ್ಲಿ ಬಹುಕಾಲವಿರುತಿರಲು ಬಳಿಕ ಒಬ್ಬ ವಿಟಮೂರ್ತಿ ಭಿಕ್ಷಕ್ಕೆ ಬರಲು ಎಡೆಮಾಡಿ ಸ್ವಾಮಿ ಸಲಿಸಿ ಎನಲು ನಾವು ಸಲಿಸುವುದಕ್ಕೆ ಬರಲಿಲ್ಲವೆನಲು ಮತ್ತೇತಕ್ಕೆ ಬಂದಿರೆನಲು ನೀನಾವಾ ಗಲು ಪ್ರಾಯವಾಗಿ ಇರುತ್ತಿದ್ದೆ, ಇದೇನು ಕಾರಣವೆಂದು ಕೇಳಬಂದೆವೆನಲು ಆ ಮಾತಿಗೆ ನಾನು ಸಂಜೀವನ ರತ್ನವ ಪಡೆದೇವೆ ಎನಲು ಆ ರತ್ನವ ನಮಗೆ ಕೊಡು ಎನಲು ಆ ವಿಟಮೂರ್ತಿಯ ಕೆಯ್ಯಲ್ಲಿ ಕೊಡಲಿಯ ಕೊಟ್ಟು ನನ್ನ ತಲೆಯೊಳಗೆ ಒಡೆದು ಅದನು ತಕ್ಕೊಳ್ಳಿ ಎನಲು ಆಗ ತಲೆಯನೊ ಡೆಯಲು ಶಿವ ಪ್ರತ್ಯಕ್ಷನಾಗಿ ಮೊನೆಯಿಡುನೈನಾರ ಕೈಲಾಸಕ್ಕೆ ಒಯ್ದನು.

---

### ಸಿಂಧುಮರಾಳ.

ಸಿಂಧುಮರಾಳ ರಾಯನು ತನುಮನಧನವ ಅಭಿಮಾನಗಳನು ಜಂಗಮ ದೈವತವೆಂದು ತನ್ನ ಪುರದಲ್ಲಿ ಸಾರುತ್ತಿರಲು ಬಳಿಕ ಒಂದು



ದಿನ ಓರ್ವ ಚರಮೂರ್ತಿ ಮನೆಗೆ ಬಂದು ಅರ್ಥ, ಪ್ರಾಣ, ಅಭಿಮಾನ ನಮ್ಮದೆಂದ ಮೇಲೆ ನೀನಿಲ್ಲಿರಬೇಡ ಹೋಗೆನಲು ರಾಜ್ಯವ ಬಿಟ್ಟು ಹೋಗುವಾಗ ಶಿವನು ಜಂಗಮನಾಗಿ ಬಂದು ದಾರಿಯಲ್ಲಿ ಕಂಡು ಎಲೆ ಸಿಂಧುಮರಾಳ ಧನಮನವ ಕೊಟ್ಟೆ, ಅಭಿಮಾನವ ಕೊಟ್ಟೆ, ತನುವ ನಮಗೆ ಕೊಡು ಎನಲು, ಸ್ವಾಮಿ ತೆಗೆದುಕೊಳ್ಳಿ ಎನಲು, ಆಗ ನೆತ್ತಿಗೆ ಕರಗಸವ ಹಾಕಿ ಕೊರೆವಾಗ ಭಕ್ತನ ಎಡಗಣ್ಣಲಿ ನೀರು ಸುರಿಯಲು ನಾವು ಒಲ್ಲೆವೆನಲು ಆ ಮಾತಿಗೆ ರಾಯನೆಂದನು, ಬಲದ ಭಾಗ ನಿಮ ಗರ್ಪಿತವಾಯಿತ್ತು, ಎಡದ ಭಾಗ ವ್ಯರ್ಥವಾಯಿತ್ತಲ್ಲಾ ಎಂದು ನೀರು ಬಂದವೆಂದು ಬಿನ್ನವಿಸಲು ಶಿವ ಮೆಚ್ಚಿ ನಿರೂಪ ತೋರಿ ಕೈಲಾಸಕ್ಕೆ ಕರೆದೊಯ್ದರು

---

## ೨೭೧ ನೆಯ ವಚನದ ಕಥೆ. (೪೧---೨೩)

ಕೊಡುವ ಲಿಂಗವನು ಬೇಡಿಕೊಳಲರಿಯದೆ ಕೊಡದ ಮಾನವರ ನಾಸೆಗೈವ ಲಿಂಗವಂತರನೇನೆನ್ನಬಹುದು? ಕೊಟ್ಟನು ನೋಡಿರೆ ಲಿಂಗವು ಮಾರ್ಕಂಡೇಯ ಮಳೆಯ ರಾಜಂಗೆ ಆಯುಷ್ಯವ ಕೊಟ್ಟನು ನೋಡಿರೆ ಲಿಂಗವು ಜೋಳಂಗೆ ಹೊನ್ನ ಮಳೆಯನು ದಾಸಂಗೆ ತವನಿಧಿಯ ಭಾಗ್ಯವನು.

---

## ೨೭೯ ನೆಯ ವಚನದ ಕಥೆ. (೪೨---೩೧)

### ಭರ್ತೃಹರಿ.

ಉಜ್ಜಯಿನಿಯಲ್ಲಿ ಚಂದ್ರಗುಪ್ತನೆಂಬ ರಾಜನು ಗೋವಿಂದ ಭಗವಾನು ಎಂಬ ಮುನಿಗೆ ನಾಲ್ವರ ಮದುವೆಯ ಮಾಡಿದನು. ಅವರಾರೆಂದರೆ ಗೋದತ ವಿಪ್ರನ ಮಗಳು ಶರ್ವಾಣಿ, ಈಕೆಯ ಮಗ ಭಟ್ಟಿ, ಚಂದ್ರ ಗುಪ್ತರಾಜನ ಮಗಳು ಮಲ್ಲಿಕಾಮಾನಿನಿ, ಈಕೆಯ ಮಗ ವಿಕ್ರಮ, ನಳಗೋನೆಂಬ ಶೂದ್ರನ ಮಗಳು ರತ್ನಜೋಳಿ ಈಕೆಯ ಮಗ ಶಬರ ಮುನಿ, ಧನದತ್ತನೆಂಬ ಕೋಮಟಿಗನ ಮಗಳು ಹೇಮವರ್ಣಿನಿ, ಈಕೆಯ ಮಗು

ಭರ್ತೃಹರಿ. ಹೆಂಡತಿ ಅನಂಗ ಲೇಖೆಯು ಕೂಡೆ ರಾಜ್ಯವಾಳುತ್ತಿರಲು ಅಲ್ಲಿ ಶರಶರ್ಮನೆಂಬ ವಿಪ್ರನು ತಪವ ಮಾಡಿ ದೇವಿಯರ ಕೈಯ್ಯ ಮುಪ್ಪುಬಾರದ ಹಣ್ಣ ಪಡೆದು ತಂದು ಭರ್ತೃಹರಿಗೆ ಕೊಡಲು ಅವಗೆ ದ್ರವ್ಯವ ಕೊಟ್ಟು ಕಳುಹಿ ಅದ ಹೆಂಡತಿಯ ಕೈಯ್ಯ ಕೊಡಲು ಅವಳು ಕುದುರೆಯ ಗೋವಗೆ ಕೊಡಲು ಅದ ಭರ್ತೃಹರಿ ಕಂಡು ಹಣ್ಣೆಲ್ಲಿ ಎಂದು ಹೆಂಡತಿಯ ಕೇಳಲು ಅದು ಹೋಯಿತ್ತೆಂದಳು. ಆಗ ಇವಳು ಜಾರೆ ಎಂದು ತಿಳಿದು ವಿಕ್ರಮಗೆ ರಾಜ್ಯವ ಕೊಟ್ಟು ದೇಶಾಂತರವ ಹೋಗಲು ಅಲ್ಲಿ ಒಬ್ಬ ಕಳ್ಳ ಜೇಡರಲ್ಲಿ ಕಳವ ಮಾಡಿ ನೂಲ ಹರವಿಯ ಒಯ್ವಾಗ ಆ ನೂಲ ತುದಿ ಸಿಕ್ಕಿ ಬೆಚ್ಚುತ ಬಂದು ಭರ್ತೃಹರಿಯ ಬಳಿಯ ಬೀಳಲು ಬಳಿಕ ಹೆಜ್ಜೆವಿಡಿದು ಬಂದು ಇವನೇ ಕಳ್ಳನೆಂದು ಅರಸಿಗೊಪ್ಪಿಸಲು, ತಲೆಯ ಹೊಯ್ವಾಗ ದೇವರ ನೆನೆ ಎನಲು ಇಂತೆಂದನು, ತಾ ಜಾರೆಯಾಗಿ ಮೊಲೆಯನುಂಬ ಮಗ ಪರಪುರುಷನೆಂದು ಮುಖವ ಮುಚ್ಚುವಳು. ಒಬ್ಬ ವಿಪ್ರನು ಒಬ್ಬರ ಮನೆಯ ಕಟ್ಟೆಯ ಮುಟ್ಟುವನಲ್ಲವೆಂದು ನಂಬಿಸಿ ಓರ್ವ ಮುಸಿಯ ನನ್ನ ಲಾಕುಳ ಒಳಗಿರ್ದ ದ್ರವ್ಯವನೊಯ್ದನು. ಒಂದು ಬಕ ಸಣ್ಣ ಮೀನು ಬಂದಡೆ ಬಿಟ್ಟು ಧ್ಯಾನವ ಮಾಡುವಂತೆ ದೊಡ್ಡ ಮೀನು ಬಂದರೆ ತಿಂಬುದು. ಒಬ್ಬ ಚೋರನು ಹಗಲು ತಪಸ್ಸು ಮಾಡುತ ಇರುಳು ಕಳವ ಮಾಡುವ. ಈ ಚೋರನ ನೂಲ ಹೆಜ್ಜೆ ನಮಗೆ ಬಂದುದು ಎನಲು, ಆಗ ನೂಲಗೊಂಡು ಹೋಗಿ ಆ ಕಳ್ಳನ ಹಿಡಿದು ಈತನ ಬಿಟ್ಟರು.

---

## ೩೧೮ ನೆಯ ವಚನದ ಕಥೆ. (೪೮—೨೦)

### ಬಾಣ.

ಕಂಧಾರವೆಂಬ ಪಟ್ಟಣದಲ್ಲಿ ನಂದರಾಜನೆಂಬ ರಾಜನಿರ್ಪನು. ಅಲ್ಲಿ ಬಾಣ, ಮಯೂರಗಳೆಂಬ ಕವಿಗಳಿರ್ಪರು. ಬಳಿಕ ಒಂದು ದಿನ ಅರಸು ಜಲಕ್ರೀಡೆಗೆ ಹೋಗಬೇಕೆಂದು ಮಯೂರನ ಕರೆ ಎನಲು ಆಗ ಬಾಣನು ಅವ ಕುಷ್ಠನು ಜಲ ಕೇಳಿಗೆ ಬರುವುದು ಹೇಗೆನಲು ಆ ದಿನ ಉಳಿಯಲು ಇತ್ತ ಮಯೂರನು ಸೂರ್ಯನ ನುತಿಸಲು ಅವ ಬಂದು



ಏನು ಬೇಕೆನಲು ನನ್ನ ಕುಷ್ಠವ ತೊಲಗಿಸೆನಲು ನನ್ನ ಕೆಯ್ಯಲಾಗದು ನಿನ್ನ ಮೈ ಮಿಂಚುವ ಹಾಗೆ ಕಿರಣವ ಕೋ ಎಂದು ಕೊಡಲು ಮೈ ಮಿಂಚಾಗಿ ಬೆಳ್ಳಗಾಗಿ ಅರಸು ಜಲಕೇಳಿಗೆ ಹೋಗುವಾಗ ತಾನೂ ಹೋಗಲು ನಂದರಾಜ ಕಂಡು ಎಲೆ ಬಾಣ ಇವನ ಮೈ ಕುಷ್ಠವೆಂದೆ ತೋರಾ ಎನಲು ಸೂರ್ಯನ ಕಿರಣದಿಂದ ಮರೆಯಾಗಿ ಇದೆ ಎನಲು ಆ ಕಿರಣವ ಪಡೆವುದು ಸಾಮಾನ್ಯವೇ ಎನಲು ಆಗ ಬಾಣ ನನ್ನ ಕೆಯ್ಯ ಖಂಡಿಸಿ ಈಗಳೆ ಪಡೆಯುತ್ತೇನೆಂದು ತಾನೆ ತನ್ನ ಕೆಯ್ಯ ಖಂಡಿಸಿಕೊಂಡು ಶಿವನ ನುಡಿಸಿದನದೆಂತೆನೆ ದೇವ ಘುಳುಘುಳಿಪ ತ್ರಿಶೂಲಧರ ಕರುಣಿಪುದು ದೇವಗಂಗಾವೃತ ಜಟಾಭಾರ ಕರುಣಿಪುದು ದೇವ ತ್ರಿಲೋಚನ ಮಹಾಗುರುವೇ ಕರುಣಿಪುದು ಅಂಬಿಕಾ ನಿತಂಬ ಲಂಪಟಹಸ್ತವೇ ಎಂಬ ನುಡಿಗೇಳಿ ದೇವಿಯರು ಕೋಪಿಸಿ ಅವ ಭಂಡುಗೆಳೆವುತಿದ್ದಾನೆ ಎಂದು ಶಿವಂಗೆ ಹೇಳಲು ಶಿವ ಬಂದು ಎಲೆ ಬಾಣ ಹೀಗೇಕೆ ಭಂಡುಗೆಯ್ದೆ ಎನಲು ಮೋಟರಿಗೆ ಕೆಲೆವುದು ಸಹಜವೆನಲು ಆಗ ಮೆಚ್ಚಿ ಹಸ್ತಗಳ ಕೊಟ್ಟು ಇನ್ನೇನು ಬೇಕು ಎನಲು ಮೋಟ ಮೂಂಡರಿಗೆ ಕೈಕಾಲು ಕೊಡುವ ವರವ ಕೊಡು ಎನಲು ಕೊಟ್ಟು ಕೈಲಾಸಕ್ಕೆ ಕರೆದೊಯ್ದನು.

---

## ೩೨೧ ನೆಯ ವಚನದ ಕಥೆ. (೪೮—೨೩)

### ಕಿನ್ನರಯ್ಯ.

ಹೂದೂರಲ್ಲಿ ಕಲಿದೇವಿ ಎಂಬ ಭಕ್ತೆಯ ಪುತ್ರನಾದ ಕಿನ್ನರಯ್ಯಗಳು ಅಕ್ಕಸಾಲೆಯ ಕಾಯಕದಲ್ಲಿದ್ದು ಆಭರಣಂಗಳ ಮಾಡುವಾಗ ಜಂಗಮ ಬಂದು ಬೇಡಲು ಅದರೊಳಗೆ ಕತ್ತರಿಸಿಕೊಟ್ಟು ಮತ್ತೆ ಒಡೆಯುವರಿಗೆ ತೂಕಕ್ಕೆ ಸರಿ ಮಾಡಿ ಕೊಟ್ಟು ಇರುತ್ತಿರಲು ಮತ್ತೊಂದು ದಿನ ತಮ್ಮ ಗುರುಗಳು ಆಭರಣವ ಮಾಡೆಂದು ಹೊನ್ನವ ಕೊಡಲು ಅವ ಮಾಡಿ ತೂಗಲು ಕಡಿಮೆಯಾದುದ ಕಂಡು ಗುರುವು ಕೋಪಿಸಲು ಆ ಕಿನ್ನರಯ್ಯ ನಮ್ಮಲ್ಲಿ ವಂಚನೆ ಇಲ್ಲ ಈ ಕಾಯಕವ ಬಿಡಿಸಲೆಂದು ಶಿವನು ಹೀಗೆ ಮಾಡಿದನೆಂದು ಅಕ್ಕಸಾಲೆಯ ಉದ್ಯೋಗವ ಬಿಟ್ಟು ಕಲ್ಯಾಣಕ್ಕೆ ಬಂದು ತ್ರಿಪುರಾಂತಕೇಶ್ವರ ಮುಂದೆ ಕಿನ್ನರ ವೀಣೆಯ

ಕ್ರಮಾಂಕ
ಶಿವಬಸವ ನಗರ
ಬೆಳಗಾವಿ.೧೦

ನುಡಿಸಲು ಹನ್ನೊಂದು ಹಣವ ಪಡೆದು ಜಂಗಮಾರ್ಚನೆಯ ಮಾಡು ತ್ತಿರಲು ಒಂದು ದಿನ ಮೋಳಿಗೆಯ್ಯನ ಸಮಯಾಚಾರದ ದೇವರು ಮಜ್ಜನವ ನೀಡುವುದಕ್ಕೆ ಕೆರೆಗೆ ಬರಲು ಆಗ ಕಿನ್ನರಯ್ಯನ ಭಕ್ತಿಯ ದೇವರು ಆ ದೇವರಿಗೆ ಒಂದು ವಸ್ತ್ರವ ಕೊಡಲು ಸಜ್ಜೆಗೆ ಧರಿಸಿಕೊಂಡು ಮನೆಗೆ ಬರಲು ಆಗ ಮೋಳಿಗೆಯ್ಯನ ಸತಿ ವಸ್ತ್ರವೆಲ್ಲಿಯದೆನಲು ಕಿನ್ನರ ಯ್ಯನ ಮನೆಯ ದೇವರು ಕೊಟ್ಟರೆನಲು ಅವರು ಇಷ್ಟಲಿಂಗವ ಬಿಟ್ಟ ಸ್ಥಾವರಕ್ಕೆ ಹೋಗುವವರ ವಸ್ತ್ರ ನಿಮಗೇಕೆನಲು ಮತ್ತವರಿಗೆ ಕೊಡಲು ಆ ಕಿನ್ನರಯ್ಯಗಳ ದೇವರು ನಾವು ಕೊಟ್ಟ ವಸ್ತ್ರವ ತಿರಿಗಿ ಕೊಟ್ಟಿಹೆ ಎನಲು ನಿಮ್ಮ ಭಕ್ತರು ಸ್ಥಾವರವ ಭಜಿಸುತ್ತ ಇದ್ದಾರೆ, ನಮ್ಮ ಭಕ್ತರಿಗೆ ಆಗ ದೆಂದು ಕೊಟ್ಟಿವೆನಲು ಕಿನ್ನರಯ್ಯ ಆ ಮಾತ ಕೇಳಿ ನಮಗೆ ಹೀಗೆನ ಬಹುದೆ? ಐಕ್ಯವಾದೆವೆನಲು ಮೋಳಿಗಯ್ಯನು ನಾವು ಸ್ಥಾವರವ ಬಿಡು ಎಂದರೆ ಹೀಗೆ ಐಕ್ಯವಾದೆನೆಂಬುವರೇ ಎನಲು ಅದ ಕೇಳಿ ಶರಣರು ಅವರೆಂದಂತೆ ಇಷ್ಟಲಿಂಗದಲ್ಲಿ ಹಣವ ತೆಗೆದುಕೊಳ್ಳಿ ಎನಲು ಹಾಗಾ ಗಲೆಂದು ಕರಸ್ಥಲದ ಲಿಂಗದ ಮುಂದೆ ಕಿನ್ನರಯ್ಯ ನುಡಿಸಿ ಹನ್ನೊಂದು ಹಣ ಹಾಗವ ಪಡೆದು ಸುಖದಲ್ಲಿದ್ದರು.

---

## ೩೨೩ ನೆಯ ವಚನದ ಕಥೆ. (೪೮--೭೩)

### ಮೋಳಿಗೆ ಮಾರಯ್ಯ.

ಕಲ್ಯಾಣದಲ್ಲಿ ಮೋಳಿಗೆ ಮಾರಯ್ಯ ಕಟ್ಟಿಗೆಯ ಮಾರಿ ಜಂಗಮಾ ರ್ಚನೆಯ ಮಾಡುತ್ತಿರಲು ಇವರ ಭಕ್ತಿವಿಶೇಷವಂ ಚರಮೂರ್ತಿಗಳು ಕೊಂಡಾಡುತ್ತಿರಲು ಅದಂ ಬಸವಣ್ಣ ಕೇಳಿ ಮೋಳಿಗಯ್ಯನ ಮನೆಗೆ ಭಕ್ತಿವೇಷದಿಂದ ಬಂದು ಲಿಂಗಾರ್ಚನೆಯ ಮಾಡಿ ಪ್ರಸಾದವನನುಭವಿಸಿ ಹೋದಾಗ ಇವರು ಬಡವರೆಂದು ಹೊನ್ನ ಜಾಳಿಗೆಯನಿಟ್ಟು ಹೋಗಲು ಅದಂ ಮೋಳಿಗೆಯ್ಯಂ ಕಂಡು ಭಕ್ತರು ನಿರ್ಧನಿಕರು ತಾನು ಧನಿಕನೇ ಎಂನು ಕೋಪಿಸಿ ಹೊನ್ನಂ ಬಿಟ್ಟು ಜಂಗಮದ ಪಾದೋದಕವ ಕಟ್ಟಿ ಗೆಯ ಮೇಲೆ ತಳಿದು ಹೊನ್ನ ದಂಡಂಗಳಂ ಮಾಡಿ ಜಂಗಮಾಳಿಗೆ ಕೊಟ್ಟರು. ಬಸವಣ್ಣ ಮರಳಿ ಭಯಗೊಂಡು ಎನ್ನ ತಪ್ಪ ಸೈರಿಸೆಂದು ಮೋಳಿಗೆಯ್ಯನ ಚರಣಕ್ಕೆರಗಿದನು.

---



## ೩೨೪ ನೆಯ ವಚನದ ಕಥೆ. (೪೮--೭೬)

### ಆಯದಕ್ಕಿ ಮಾರಯ್ಯ.

ಆಯ್ದಕ್ಕಿ ಮಾರಯ್ಯನು ಆಯ್ದಕ್ಕಿಯಿಂದ ನಿಚ್ಚ ೧೦೦೦ ಜಂಗ ಮಕ್ಕೆ ನೀಡಿ ಶಿವನೊಲಿದನು.

---

## ೩೨೬ ನೆಯ ವಚನದ ಕಥೆ. (೪೯--೭೮)

### ಚಂಡ ಸೋಮವ್ವೆ.

ಮುನ್ನ ಭೋಜರಾಜನ ಸಭೆಯಲ್ಲಿ ಈರ್ವರು ಪಂತಿ ಊಟದ ಭಟರು ಇದ್ದರು. ಚಂಡ ಸೋಮವ್ವೆ ಅಸ್ತಮಯದಿ ಜಂಗಮದ ಮಂಡೆಯೂರುವುದಕ್ಕೆ ಸೂರ್ಯನ ನಿಲಿಸಿದಳು.

---

## ೩೩೭ ನೆಯ ವಚನದ ಕಥೆ. (೫೦--೮೮)

### ಮಾದಾರ ಚನ್ನಯ್ಯ.

ಕರಿಕಾಲ ಚೋಳನ ಕುದುರೆಗೆ ಹುಲ್ಲ ಹೇರುವ ಕಬಾಡಿಗರಿಗೆ ಒಡೆಯನಾಗಿ ಮಾದಾರ ಚನ್ನಯ್ಯ ಗುರು ಕಾರುಣ್ಯವ ಪಡೆದು ಜಂಗ ಮಾರ್ಚನೆಯ ಮಾಡುತ್ತ ಮುಗಿಲ ಮರೆಯ ಚಂದ್ರನಂತೆ ಎಳ್ಳಿನೊಳ ಗಿರ್ದ ಎಣ್ಣೆಯಂತೆ ಕಾಷ್ಠದೊಳಗಿರ್ದಗ್ನಿಯಂತೆ ಭೂಮಿಯ ಮರೆಯಲ್ಲಿ ನಿಧಾನವಿಪ್ಪಂತೆ ಲೋಕದ ಕಣ್ಣಿಂಗೆ ಮರೆಯಾಗಿರುತ ಆಮೇಲೆ ಕಬಾಡಿ ಗರ ಕೂಡಿಕೊಂಡು ಅಡವಿಗೆ ಹೋಗಿ ಹುಲ್ಲ ಕೊಯ್ದು ಕಟ್ಟಿ ಎಂದು ಅವರ ಕಳುಹಿ ತಾವು ನಿರ್ಮಲೋದಕದಿಂದೆ ಮಜ್ಜನಕ್ಕೆ ನೀಡಿ ಭಸಿ ತವ ಧರಿಸಿ ಕಾಡಮೊಲ್ಲೆ ಮಲ್ಲಿಗೆಯರಳ ಧರಿಸಿ ಶಿವಪೂಜೆಯ ಮುಗಿದು ಕೊಂಡು ಕಬಾಡವ ಹೇರಿಕೊಂಡು ಬಂದು ಲಾಯದಲ್ಲಿ ಕೆಡಿವಿಸಿ ಮನೆಗೆ ಹೋಗಲು ಸತಿ ಉದಕವ ತಂದು ಪಾದಾರ್ಚನೆಯ ಮಾಡಿ ಒಳಗೆ ಮುಹೂರ್ತವ ಮಾಡಿಸಿ ಎಡೆ ಮಾಡಲು ಲಿಂಗಕ್ಕರ್ಪಿಸಿ ಸಲಿಸು ವಾಗ ಅಮೃತದಿಂದ ನೂರ್ಮಡಿ ಸವಿಯಾಗಲು ಆಗ ಶಿವ ಬಂದು ಚನ್ನಯ್ಯನೊಡನೆ ಸಲಿಸುತ್ತಿದ್ದನು. ಒಂದು ಸುರಿಕಿಗೆ ನನ್ನ ಪದವ

ಕೊಟ್ಟೆನು, ಮುಂದೆ ಸವಿದರ್ಶಿಸುವುದಕ್ಕೆ ಪದಗಳಿಲ್ಲವೆಂದು ಶಿವನು ಚನ್ನಯ್ಯನೊಡನೆ ಅಂಜುತ ಉಂಡು ಹೋಗಲು ಆಮೇಲೆ ಜೋಳರಾಯ ಚನ್ನಯ್ಯನ ನೋಡುವದಕ್ಕೆ ಕಾಲನಡೆಯಲ್ಲಿ ಎಡಬಲದಲ್ಲಿ ಮುಕುಟ ವರ್ಧನರೊಳಗೆ ಬರುವಾಗ ಎನ್ನ ಗತಿಯೋ ಎನ್ನ ಮತಿಯೋ ಎನ್ನ ಸಿಧಿಯೋ ಎನ್ನ ಸುಧೆಯಾದ ಚನ್ನಯ್ಯನ ಕಂಡಿರೇ ಎಂದು ಜೋಳರಾಯ ಬಂದು ಪಾದದ ಮೇಲೆ ಬೀಳಲು, ಎನ್ನಯ್ಯ ಜೋಳರಾಯ ನೀವಿಲ್ಲಿಗೆ ಬರಬಹುದೆ, ನೀನು ಭಾನು ಕುಲ, ನಾನು ಕ್ಷೀಣ ಕುಲವೆಂದು ಪಾದವ ಬಿಡು ಎನಲು ನಿಮ್ಮ ಪಾದವ ಬಿಟ್ಟು ನಾ ಬಾಳೆನೆಂದು ಆನೆಯ ಮೇಲೆ ಕುಳ್ಳಿರಿಸಿಕೊಂಡು ಲಿಂಗದ ಗುಡಿಗೆ ಬಂದು ಆನೆಯನಿಳಿಸಿ ಲಿಂಗದ ಮುಂದೆ ಚನ್ನಯ್ಯನ ನಿಲಿಸಲು ಆಗ ಕೋಪದಿಂದ ಶಿವನಿಗೆ ನುಡಿದರು. ಜೋಳರಾಯ ಹಿಡಿತರಿಸುವುದಕ್ಕೆ ನಾನೇನ ಮಾಡವೆ ಹೇಳಯ್ಯ, ನಿಮ್ಮ ನಾನು ಪದವಿಯ ಬೇಡಿದೆನೆ ಅರಿಯದೆ ಅಂಬಲಿಯನರ್ಪಿಸಿದರೆ ಹೀಗೆ ಲೋಕದಲ್ಲಿ ಪ್ರಕಟ ಮಾಡುವರೆ ಎನಲು ಆಗ ಶಿವನಿಂತೆಂದನು, ಅರಿಯದೆ ಜೋಳನ ಹೇಳಿದೆವು, ಸೈರಿಸು ಕೋಪವೇಕೆಂದು, ಭಾಪುರೆ ಮಾದಾರ ಚನ್ನಯ್ಯ ಎಂದು ಕೊಂಡಾಡಿ ಹೂವಿನ ಮಳೆಯ ಕರಿಸಿ ಚನ್ನಯ್ಯನ ಪುಷ್ಪಕದೊಳಗೆ ಮಡಗಿ ಕೈಲಾಸಕ್ಕೆ ಕೊಂಡೊಯ್ದರು.

---

### ಚೇರಮರಾಯ.

ಕೇರಳ ದೇಶದಲ್ಲಿ ಚೇರಮರಾಯನೆಂಬ ಶರಣನು ವೈರಾಗ್ಯದಿಂದ ರಾಜ್ಯವ ಬಿಟ್ಟು ಹೋಗುವಾಗ ಜೋಳರಾಯನು ಬಂದು ತಿರುವಂಜಿ ಕಾಳನಾಥನೆಂಬ ಲಿಂಗಕ್ಕೆ ಬಿನ್ನೈಸಿದನು, ಎಲೆ ಲಿಂಗವೆ ನಿಮ್ಮ ಪಾದದ ಬಳಿಯಿಂದ ಚೇರಮರಾಯನೇಕೆ ಬಿಟ್ಟರೆನಲು ಆಗ ಲಿಂಗದೊಳಗಿಂದ ನುಡಿದ ಶಿವನು, ಎಲೆ ಚೇರಮ ನಿನ್ನನೇನು ಬೇಸರಿಸಿದೆವು ರಾಜ್ಯವ ಬಿಟ್ಟು ಹೋಗುವದೇಕೆನಲು, ಆ ಮಾತಿಗಿಂತೆಂದನು, ನಿಮ್ಮ ನಾಂಟ್ಯವ ತೋರಿದರೆ ಹೋಗೆನೆನಲು ಆಗ ಶಿವನು ತಾಂಡವನಾಡಲು ನೋಡಿ ಸಂತುಷ್ಟನಾಗಿ ದಿನ ಹೀಗೆ ತೋರಿ ಎನಲು, ನಿಚ್ಚ ಹೀಗೆ ತೋರುವರುಂಟೆ ಎಂದು ಹಾಗಾದರೆ ದಿನ ನಮ್ಮ ಪಾದದ ಅಂದುಗೆಯ



ಧ್ವನಿಯ ತೋರೆವು ಎನಲು, ಹಾಗಾಗಲಿ ಸ್ವಾಮಿ ಎಂದು ಚೇರಮರಾಯ ಲಿಂಗಪೂಜೆಯ ಮಾಡುತ್ತ ಜಂಗಮಂಗೆ ನೀಡುತ್ತ ಸುಖದಲ್ಲಿದ್ದರು.

---

## ೩೪೭ ನೆಯ ವಚನದ ಕಥೆ. (೫೨--೯೮)

### ಚೋರ ಚಿಕ್ಕಯ್ಯ. ನಿಜಲಿಂಗ ಚಿಕ್ಕಯ್ಯ.

ಮಾಂಡವ್ಯದಲ್ಲಿ ಮಹಾದೇವ ರಾಣಿಯರು ಮನೆಯಲ್ಲಿ ಇದ್ದ ಮೂರು ಸಾವಿರ ಚರಮೂರ್ತಿಗಳ ಬಸವೇಶ್ವರನು ಗುಪ್ತದಲ್ಲಿ ಒಯ್ದ ಸುದ್ದಿಯನು ಮಹಾದೇವ ರಾಣಿಯರು ಕೇಳಿ ನಮ್ಮ ಭಕ್ತಿಯ ಕೆಡಿಸಿದವನ ಇರಿದು ಬನ್ನಿ ಎಂದು ಈರ್ವರ ಬಂಟರ ಕಳುಹಲು ಅವರು ಕಲ್ಯಾಣಕ್ಕೆ ಬಂದು ಸರ್ವಾಂಗೋದ್ಧೂಳನವ ಮಾಡಿ ರುದ್ರಾಕ್ಷಿಯ ಧರಿಸಿಕೊಂಡು ಕರಿಯ ಬದನೆಯಕಾಯ ಲಿಂಗ ಮಾಡಿ ಕೊರಳಲ್ಲಿ ಧರಿಸಿಕೊಂಡು ಚರಮೂರ್ತಿಗಳ ಕೂಡೆ ಬಸವೇಶ್ವರನ ಅರಮನೆಗೆ ಹೋದರದೆಂತೆಂದೊಡೆ ವಿಟವೇಷನು ಲಿಂಗದ ಗುಡಿಯ ಹೊಕ್ಕಂತೆ ಹೆರೂರ ಹೆಣ್ಣು ಲಿಂಗದ ಮರೆಯ ಹೊಕ್ಕಂತೆ ಕತ್ತಲೆ ಸೂರ್ಯನ ಬಳಿಗೆ ಹೋಗುವಂತೆ ಪರುಷದ ಪುತ್ಥಳಿಯ ಇರಿವ ಸುರಿಗಿಯಂತೆ ಆಯುಧವ ಮುಚ್ಚಿಕೊಂಡು ಚರಮೂರ್ತಿಗಳ ನಡುವೆ ಕುಳಿತು ಲಿಂಗಪೂಜೆಯ ಮಾಡುವುದಕ್ಕೆ ಹೋಗುತ್ತಿರಲು ಅದ ಬಸವೇಶ್ವರನು ತಿಳಿದು ಸಂಗಮೇಶ್ವರನ ಪಾದವ ತೋರಿಸ ಬಂದಿರೋ, ಅಯ್ಯ, ನೀವು ಬಂದ ಕಾರ್ಯವ ತಿಳಿದೆವು, ಲಿಂಗಪೂಜೆಯ ಮಾಡಿ, ಎಂದು ನೋಟಪರುಷದಿಂದೆ ನೋಡಲು, ಅವರು ಹಿಂದೆ ಮಾಡಿದ ಪಾಪವೆಲ್ಲ ಹೋಗಿ ಕೊರಳೊಳಗಿರ್ದ ಬದನೆಯಕಾಯಿಗಳಿ ಇಷ್ಟಲಿಂಗಗಳಾಗಿ ಒಪ್ಪುತ್ತಿರಲು ಚಂದ್ರ ಸಾರಿದ ಬೆಳುದಿಂಗಳಂತೆ ಚಂದನವ ಸಾರಿದ ವೃಕ್ಷದಂತೆ ಬಸವೇಶ್ವರನ ಸಾರಿ ಭವಿಜನ್ಮವಳಿದು ಭಕ್ತರಾಗಿರಲು ಅವರಿಗೆ ಚೋರಚಿಕ್ಕಯ್ಯ ನಿಜಲಿಂಗ ಚಿಕ್ಕಯ್ಯನೆಂದು ಹೆಸರಿಟ್ಟರು. ಆ ನಿಜಲಿಂಗ ಚಿಕ್ಕಯ್ಯನ ತಳವಾರ ಗಂಗಯ್ಯ ತನ್ನ ಮನೆಗೆ ಬಿನ್ನಹವ ಮಾಡಿಕೊಂಡು ಹೋಗಿ ಪಾದಾರ್ಚನೆಯ ಮಾಡಿ ಹೋಳಿಗೆ ಮುಹೂರ್ತವ ಮಾಡಿಸಿ ಶಿವಾರ್ಚನೆಯ ಮಾಡಿಸಿ ಪಾದೋದಕ ಪ್ರಸಾದವ ಸಲಿಸುತ್ತಿರಲು ಆ ಮೇಲೆ ಅರಸಿನ ಮನೆಯ ಕನ್ನವ ಕೊರೆದು ಕೊಳ್ಳಲು ಗಂಗಯ್ಯನ ಕರಿಸಲು ನೀವು ಪವಡಿಸಿರಿ ಎಂದು ಚಿಕ್ಕಯ್ಯನವರಿಗೆ ಹೇಳಿ ಹೋಗಲು ಇತ್ತ ಗಂಗಯ್ಯನ ಹೆಂಡತಿ ಚಿಕ್ಕಯ್ಯನ

ಸಂಭೋಗಕ್ಕೆ ಕರೆಯಲು ಎಲೆ ತಾಯೆ ನಾ ನಿನ್ನ ಮಗನೆನಲು ಮತ್ಸರದಿಂದ ತನ್ನ ಲಿಂಗವ ಆತನ ಹಡಪದೊಳಗೆ ಹಾಕಲು ಅದನರಿಯದೆ ಐನಾಳಿ ಎಂಬ ಹಳ್ಳಿಯಿಂದ ಉದಯದಲ್ಲಿ ಎದ್ದು ಹೋಗಿ ಕಲ್ಯಾಣದ ಪುಷ್ಪದ ತೋಟದೊತ್ತಿನಲ್ಲಿ ಶಿವಪೂಜೆಯ ಮಾಡುತ್ತಿರಲು ಇತ್ತ ಗಂಗಯ್ಯ ಮನೆಗೆ ಬಂದು ನಿಜಲಿಂಗ ಚಿಕ್ಕಯ್ಯನೆಲ್ಲಿ ಎಂದು ಹೆಂಡತಿಯ ಕೇಳಲು ನನ್ನ ಸಂಭೋಗಕ್ಕೆ ಕರೆಯಲು ಒಲ್ಲೆನೆನಲು ನನ್ನ ಲಿಂಗವ ತೆಗೆದುಕೊಂಡು ಹೋದನೆನಲು ಮೂಡಲಲ್ಲಿ ಉದಯಿಸುವ ಸೂರ್ಯ ಪಡುವಣದಿಕ್ಕಿನೊಳು ಉದಯವಾದರೂ ನಮ್ಮ ಚಿಕ್ಕಣ್ಣಗಳು ಮೀರೆದಪ್ಪುವರಲ್ಲವೆನಲು ಈತನು ಆತನ ಕಡೆಯಾದನೆಂದು ಅರಸಿಗೆದೂರ ಹೇಳಿದಳು. ಆಗ ಅರಸಿನಾಳುಗಳು ಬಂದು ಚಿಕ್ಕಯ್ಯನ ಹಡಪದ ಮೇಲೆ ಮಡಗಿದ ಲಿಂಗವ ಕಂಡು ಆಕೆ ಹೇಳಿದ ಮಾತು ಸಹಜವೆಂದು ಚಿಕ್ಕಯ್ಯಗಳ ಶಿರವ ನಿಳುಹಲು ಆ ಶಿರಸ್ಸು ಆಕಾಶಕ್ಕೆ ನೆಗೆದು ಪಂಚಾಕ್ಷರಿಯ ಜಪಿಸುತ್ತ ಮುಂಡ ಬೆರಳಿನಲ್ಲಿ ಅಂಗುರಮಾಲೆಯ ತಿರುಹುತ್ತಿರಲು ಈ ವಾರ್ತೆಯ ಬಸವೇಶ್ವರನು ಕೇಳಿ ಬಿಜ್ಜಳನ ಮೇಲೆ ಕೋಪಿಸಲು ಅವ ನುಡಿದನು. ತಪ್ಪಿದವರಿಗೆ ಆಜ್ಞೆಯ ಮಾಡದೆ ಬಿಟ್ಟೆವೆನಲು ಆ ಶರಣ ಸತ್ತುಬಿದ್ದರೆ ತಪ್ಪಹುದೆನಲು ನೋಡು ನಡೆ ಎನಲು ಆಗ ಅಲ್ಲಿಗೆ ಹೋಗಿ ಶಿರ ಪಂಚಾಕ್ಷರಿಯ ಜಪಿಸುವದ ಕಂಡು ಬಿಜ್ಜಳನು ಪ್ರಾಣವ ಪಡೆಯಿರಿ ಎನಲು ಆಗ ಬಸವೇಶ್ವರನು ಶಿವಗಣಂಗಳ ನೆನೆದು ನಿಜಲಿಂಗ ಚಿಕ್ಕಯ್ಯನ ಮಸ್ತಕವ ಮುಂಡದ ಮೇಲೆ ಮಡಗಿ ಎಬ್ಬಿಸಲು ಹೀಗೆ ಶಿವ ಮಹಿಮೆಯ ಮೆರೆದು ಶಾಂಭವಲೋಕಕ್ಕೆ ಹೋದರು

## ೩೫೩ ನೆಯ ವಚನದ ಕಥೆ. (೫೨—೧೦೪)

### ನಿಂಬಿಯಕ್ಕ.

ಚೋಳದೇಶದಲ್ಲಿ ಪಡಳೂರಲ್ಲಿ ಕೊಟ್ಟಣದ ನಿಂಬಿಯಕ್ಕನೆಂಬ ಶರಣಿ ಇದ್ದಳು. ಸಿರಿಯಾಳ ಸೆಟ್ಟಿ ಶಿವಗೆ ಮಗನ ಕೊಟ್ಟೆನೆಂದು ಅಹಂಕರಿಸಲು ನಿಂಬಿಯಕ್ಕನ ಮನೆಗೆ ಆ ಸೆಟ್ಟಿಯನು ಕರಕೊಂಡು ಬರಲು ನಿಂಬಿಯಕ್ಕ ಕಂಡು ನಮಸ್ಕರಿಸಿ ಕುಳ್ಳಿರಿಸಿ ಆ ಮೇಲೆ ಅಡಿಗೆಯ ಮಾಡಿರಿಸಿರಲು ಅದ ಮಗನೆಂಜಲ ಮಾಡಿದವನ ಕೊಂದುಹಾಕಲು ಅದಕ್ಕೆ



ಶಿವ ಮೆಚ್ಚಿ ಕೈಲಾಸಕ್ಕೆ ನಡೆ ಎನಲು ನಿಮ್ಮ ಕೂಡೆ ಬರುವುದೇನೆನಲು ನಮ್ಮ ಲಿಂಗದ ಕೂಡೆ ಬಂದೆನೆನಲು ಆ ಶಿವನಚ್ಚರಿವಟ್ಟು ಮಗನ ಪ್ರಾಣವ ಪಡೆದು ಕೈಲಾಸಕ್ಕೆ ಕಳುಹಿದನು.

## ೩೫೪ ನೆಯ ವಚನದ ಕಥೆ. (೫೩—೧೦೫)

ಮಕುಟಾಗಮದಲ್ಲಿ ಶಿವಪಾದ ಚರಾಗಾರಾ ದಾಸಿಭಕ್ತೊಚ್ಚಿತಾಶನಃ। ಶುನಶಾಃ ಸೂಕರಾ ಯಾಂತಿ ಯುಯಜೂಕಗತಿಮಿಮಾಂ। ಶಿವಪಾದ ಚರಾಗಾರ ದಾಸಿಭಕ್ತೊಂದೆತಾಶನಾಃ। ಶಿವಪಾದಚರಾಗಾರ ಶಿವಭಕ್ತರ ಮನೆಯಲ್ಲಿಯ ದಾಸಿ, ಭಕ್ತೊತಾಶನಾಃ ದಾಸಿಯುಂಡು ಚೆಲ್ಲಿದನ್ನವೆ ಆಹಾರವಾಗುಳ್ಳಂತಹ, ಶುನಕಾಃ ಜನಂಗಳು, ಸೂಕರಾಃ ವರಾಹಂಗಳು, ಈ ಯಾಯಜೂಕಗ ತಿಮಿಮಾಂ ಬಹಳ ಯಜ್ಞವ ಮಾಡಿದಾತನ ಗತಿಯನ್ನು ಯಾಂತಿ ಎಯ್ದುತಿರ್ದಪವು

## ೩೬೧ ನೆಯ ವಚನದ ಕಥೆ (೫೪—೧೧೨)

### ಹೆರೂರ ನಾಚಯ್ಯ

ಹೆರೂರ ನಾಚಯ್ಯ ಜಂಗಮಕ್ಕೆ ತನುವನಿರಿದಿತ್ತು ಶಿವನೊಲಿದನು.

### ಅನುಮಿಷಯ್ಯ

ಅನುಮಿಷಯ್ಯಗಳು ಶಿವನಿಗೆ ಮನಕೊಟ್ಟು ಒಲಿಸಿದರು.

### ಮೊನೆಧರ ಗಣನಾಥ

ಚೋಳಮಂಡಲದ ಕರಊರಲ್ಲಿ ಮೊನೆಧರ ಗಣನಾಥನೆಂಬ ಶಿವಶರಣನಿರ್ಪನು. ಆತನು ಗುರುಲಿಂಗ ಜಂಗಮದ ಭಕ್ತಿಯ ಮಾಡುತ್ತ ಅನ್ಯದೈವಂಗಳ ಜರಿವುತ್ತಿರಲು ಒಂದು ದಿನ ಶಿವನು ಜಂಗಮರೂಪತಾಳಿ ಮನೆಗೆ ಬರಲು ದಿವ್ಯಾನ್ನಗಳ ನೀಡಲು ಸಲಿಸಿ ಹೋಗುವಾಗ ಸಾವಿರ ವರಹದ ಗಂಟಿದೆ ನಿನ್ನ ಕೈಯ್ಯಲ್ಲಿರಲಿ ನಾವು ಬಂದು ತೆಗೆದುಕೊಂಡು ಹೋದೆವೆಂದು ಕೊಟ್ಟು ಹೋಗಿ ಅರುವತ್ತು ವರುಷದ ಮೇಲೆ ಬಂದು, ಎಲೆ ಭಕ್ತ ನಮ್ಮ ಹೊನ್ನ ಗಂಟು ತಾರೆಂದು ಕೇಳಲು ತಕ್ಕೊಳ್ಳಿ

ಎಂದು ಹಸ್ತದಲ್ಲಿ ಕೊಡಲು ಅದಕ್ಕೆ ವರುಷ ಒಂದಕ್ಕೆ ಬಡ್ಡಿ ಹಣ ಎರಡು ಸಾವಿರವಾಗುತ್ತದೆ, ಹೀಗೆ ಆರುವತ್ತು ವರುಷಕ್ಕೆ ಲಕ್ಷವು ಇಪ್ಪತ್ತುಸಾವಿರ ವರಹವ ಕೊಡು ಎನಲು ಅಷ್ಟನು ಕೊಡಲು ಆಗ ಶಿವನು ತನ್ನೊಳೇಕಾರ್ಥವ ಮಾಡಿಕೊಂಡನು.

ತನುವನಿತ್ತೊಲಿಸುವಡೆ ನಾನು ವಹಿಲಯ್ಯನೆ ಮನವನಿತ್ತೊಲಿಸುವಡೆ ನಾನು ಅನುಮಿಷಯ್ಯನೆ ಧನವನಿತ್ತೊಲಿಸುವಡೆ ನಾ ಸೇದಿರಾಜನೆ?

## ೪೦೮ ನೆಯ ವಚನದ ಕಥೆ. (೬೧—೧೫೯)

### ಮೋದಾರ ಕೇತಯ್ಯ.

ಮೋದಾರ ಕೇತಯ್ಯಗಳು ಬಿದಿರುಕಾಯಕದಿಂದ ಜಂಗಮಾರ್ಚನೆಯ ಮಾಡುತ್ತಿರಲು ಬಳಿಕ ಒಂದು ದಿನ ಶಿವನು ಇವರ ಮನವ ನೋಡಬೇಕೆಂದು ಬಿದಿರ ಕಡಿವಾಗ ಹೊನ್ನುಗಳು ಸುರಿಯಲು ಕೇತಯ್ಯಗಳು ಕಂಡು ಈ ಮರಕೆ ಹುಳು ಸುರಿವುತ ಐದಾವೆಂದು ಬಿಟ್ಟು ಮೆಳೆಯ ಹತ್ತಿ ಕಡಿವಾಗ ಶಿವನು ಬಸವೇಶ್ವರನ ಜಂಗಮ ಪ್ರಾಣತ್ವವ ನೋಡಬೇಕೆಂದು ಮೆಳೆಯಿಂದ ಈತನ ಕೆಡಹಲು ಆತ ಬಿದ್ದು ಐಕ್ಯವಾದುದ ಬಸವಣ್ಣ ಕಂಡು ತಾವು ಐಕ್ಯವಾದರು. ಅದ ಮಡಿವಾಳಯ್ಯ ಕಂಡು ಭಕ್ತನ ಒಯ್ದಿರೆ ಎಂದು ಶಿವನ ಮೇಲೆ ಕೋಪಿಸಿ ಇಬ್ಬರ ಪ್ರಾಣವನು ಪಡೆದರು.

### ಬಾಲಸಂಗಯ್ಯ

ಬಸವೇಶ್ವರಗೆ ಬಾಲಸಂಗಯ್ಯಗಳು ಮೊದಲಾದ ಗಣಂಗಳು ದ್ರವ್ಯವ ಕೊಟ್ಟರು.

## ೪೦೯ ನೆಯ ವಚನದ ಕಥೆ. (೬೧—೧೬೦)

### ಸೋಮಣ್ಣ

ಮಂಗಲೂರಲ್ಲಿ ಸೋಮಣ್ಣನು ಲಿಂಗದ ಮಸ್ತಕದಲ್ಲಿ ನೈವೇದ್ಯವ ನಿರಿಸಿ ಜಂಗಮವೇ ಮುಖವೆನಲು ಜಂಗಮಕ್ಕರ್ಪಿಸಿ ಶಿವನೊಲಿದನು.



## ೪೨೩ ನೆಯ ವಚನದ ಕಥೆ. (೬೩—೧೨೩)

ಗ್ರಂಥಃ—ಪಿತಗುರುಃ ಪತಿರ್ಲಿಂಗಂ ಸ್ವದೈವಂ ಜಂಗಮಃ ಪ್ರಭುಃ ತತ್ಸರ್ವ ಪ್ರಯತ್ನೇನ ತಸ್ಯ ಆರಾಧನಂ ಕುರು ॥ಟೀಕು॥ ಗುರು ಶ್ರೀಗುರುವು ಪಿತ ತಂದೆಯು ಲಿಂಗವು ಪತಿಃ ಪುರುಷನು ಜಂಗಮಃ ಜಂಗಮವು ಸ್ವದೈವಂ ತನ್ನ ದೈವವು ತಸ್ಮಾತ್ ಅದು ಕಾರಣದಿಂದೆ ಪ್ರಭುಃ ಜಂಗಮವೇ ಒಡೆಯನೆಂದು ಸರ್ವ ಪ್ರಯತ್ನೇನ ಸಮಸ್ತ ಪ್ರಯತ್ನದಿಂದೆ ತಸ್ಯ ಆ ಜಂಗಮದ ಆರಾಧನಂ ಪೂಜೆಯನು ಕುರು ಮಾಡು

## ೪೨೯ ನೆಯ ವಚನದ ಕಥೆ. (೬೪—೧)

### ಬಸವ

ಬಸವೇಶ್ವರನ ಶಿವನು ವಿಶ್ವತೋಮುಖವಾಗಿ ಬಂದು ಕಾಡಿ ನೋಡಿ ಬೇಡಿದರೆ ತೊಲಗದೆ ಕೊಡುವೆನೆಂದು ಭಾಷೆಪ್ರತಿಜ್ಞೆಯ ಪ್ರಸ್ಥಾವದ ವಚನ

## ೪೩೦ ನೆಯ ವಚನದ ಕಥೆ. (೬೪—೨)

ಬಸವಣ್ಣನು ಬೇಡುವರಿಲ್ಲದೆ ಬಡವಾದೆನೆಂದು ವಚನವ ಹಾಡಲು ಮಡಿವಾಳಯ್ಯಗಳು ಅದ ಕೇಳಿ ಪಾದದಲ್ಲಿ ಬಿದ್ದು ಹನಿಗಳ ಹಾಕಿಸಲು ನವರತ್ನಗಳಾಗಲು ಅವ ವಿಟ ಜಂಗಮ ದೇವರುಗಳು ಕೊಂಡು ಹೋಗಿ ವೇಶ್ಯಾಂಗನೆಯರಿಗೆ ಕೊಡಲು ಅವರು ರತ್ನ ಖಚಿತದ ಉಪ್ಪರಿಗೆಗಳ ಮಾಡಿಸಿ ಸುಖದಲ್ಲಿದ್ದರು.

## ೪೪೫ ನೆಯ ವಚನದ ಕಥೆ. (೬೬—೧೭)

ಅರಸಿನ ಐಶ್ವರ್ಯವ ಎಣಿಸುವಡೆ ಸೀತೆಗೆ ಸರಿ ಮಿಗಿಲೆನಿಸುವ ಸತಿಯರೆಂಟು ಕೋಟಿ. ಮತಿವಂತ ಶಿರಃ ಪ್ರಧಾನರೆಂಟು ಕೋಟಿ. ಲೆಕ್ಕವಿಲ್ಲದ ಪಾಯದಳವು ಲಕ್ಷ. ಕುಮಾರರು ದಿಕ್ಪಾಲಕರು ಅವನ ಮನೆಯಲ್ಲಿ ಬಂಧನದಲ್ಲಿಪ್ಪರು. ಸುರಸತಿಯರೆಲ್ಲರ ತಾ ಸೆರೆ ಮಾಡಿ ಆಳಿದ. ಶಿವನೇ ನೀ ಕರುಣಿಸಿದಂತಿರದೆ ಪರವಧುವಿನ ಬೇಟ ವಚನ ಪ್ರಾಣವ

ಕೊಂಡಿತ್ತು. ಇವನರಿದು ಪರವಧುವಿಗೆ ಎಳಿಸುವರ ಕಂಡು ಗರುಡನ ಕಂಡ ಸರ್ಪ ಧರೆಗಿಳಿವಂತೆ ಅಡಗಿಪ್ಪನಯ್ಯ ಕೂಡಲಸಂಗಮದೇವಾ.

---

## ೪೫೭ ನೆಯ ವಚನದ ಕಥೆ. (೬೮—೧)

### ಮನುಜೇಂದ್ರ ಚೋಳ.

ಸುಸ್ಥಿರವೆಂಬ ಪುರದಲ್ಲಿ ಮನುಜೇಂದ್ರ ಚೋಳರಾಯನು ನವರತ್ನದಿಂದ ಗುಡಿಯ ಕಟ್ಟಿಸಿ ಲಿಂಗವ ನಿಲ್ಲಿಸಿ ಪೂಜಿಸುತ್ತಿರಲು ಒಂದು ದಿನ ಲಿಂಗಮಜ್ಜನಕ್ಕೆ ತ್ರೈಲಬೇಕೆಂದು ಎಳ್ಳ ಒಣಗಿಸುತ್ತಿರಲು ಆಗ ಮುನೀಂದ್ರನೆಂಬರಸು ಎಳ್ಳ ಕದ್ದು ಮೆಲುವಾಗ ಮನುಜೇಂದ್ರ ಚೋಳನ ಬಳಿಗೆ ಹಿಡಿತರಲು ನೀನು ಕಳ್ಳನಲ್ಲ, ಎಳ್ಳನೇಕೆ ಕದ್ದೆ ಎನಲು ಆ ಮುನೀಂದ್ರನೆಂದನು ನಾನು ತಪಸ್ಸಿಗೆ ಹೋಗುವಾಗ ಒಂದು ಹೊಲದಲ್ಲಿ ಎಳ್ಳ ಮೊಟ್ಟೆಯ ಕಳ್ಳರು ಕಟ್ಟುವಾಗ ಆ ಹೊಲದ ಬೆಚ್ಚು ನಗಲು ಅವರು ನೀನೇಕೆ ನಕ್ಕೆ ಎನಲು ನಾನು ಮೊದಲ ಜನ್ಮದಲ್ಲಿ ವಿಪ್ರನು, ನನ್ನ ಆಕಳು ಹೊಲಕ್ಕೆ ತುಡುಗ ತಿಂಬುವದಕ್ಕೆ ಹೋಗಲು ಅರಸು ಕೇಳಿದರೆ ದಂಡವ ಕೊಂಡಾನೆಂದು ಮನೆಗೆ ಹೊಡಕೊಂಡು ಬರುವಾಗ ಒಂದು ಎಳ್ಳು ಅದರ ಕಾಲಿನಲ್ಲಿ ಸಿಡಿದು ಬಂದು ಬಾಯೊಳಗೆ ಬೀಳಲು ನಾನು ಕೆಲವು ದಿನಕೆ ಮರಣವಾಗಲು ಯಮದೂತರು ಕರೆದೊಯ್ದು ಇವಗೆ ಎಳ್ಳು ಋಣವಿಹುದು, ಒಕ್ಕಲಿಗನಿಗೆ ಎತ್ತಾಗಲಿ ಎಂದು ಕಳುಹಿದರು. ನಾನು ಒಂದು ಎಳ್ಳಿನಲ್ಲಿ ಹೀಗೆ ಎತ್ತಾಗಿ ಸತ್ತು ಬೆಚ್ಚಾದೆನು. ಈಗ ಇಷ್ಟು ಎಳ್ಳ ಕದ್ದರೆ ಏನಾಗದೆಂದು ನಕ್ಕೆನೆನಲು ಅದ ಕೇಳಿ ಲಿಂಗದ ಋಣಕ್ಕೆ ಹೋದೆನೆಂದು ಮುನೀಂದ್ರನು ಮನುಜೇಂದ್ರರಾಯನ ಕೂಡೆ ಹೇಳಲು ಆ ಮನುಜೇಂದ್ರನು ನಿನ್ನ ಋಣಸ್ಥನಾದೆನೆಂದು ಬಾಯೊಳಗಣ ಎಳ್ಳ ತೆಗೆದುಕೊಂಡು ಮೆಲುವಾಗ ಶಿವನು ನಿಮ್ಮಿಬ್ಬರ ಋಣಸ್ಥನಾದೆನೆಂದು ಅವರ ಎಳ್ಳ ಮೆದ್ದು ಕೈಲಾಸಕ್ಕೆ ಅವರಿಬ್ಬರನು ಕರಕೊಂಡು ಹೋದರು

---



## ೪೭೯ ನೆಯ ವಚನದ ಕಥೆ. (೭೧—೬)

### ಶಿವನಾಗಮಯ್ಯ.

ಬಸವೇಶ್ವರನು ಶಿವನಾಗಮಯ್ಯಗಳ ಬೆರಳಿನಲ್ಲಿ ಅಮೃತವ ಕರೆದ ಪ್ರಸ್ತಾವದ ವಚನ.

---

## ೫೦೦ ನೆಯ ವಚನದ ಕಥೆ. (೭೪—೧೮)

### ಗಿರಿಜಾ ವಿವಾಹ.

ದಕ್ಷಿಣಂ ಮೂರ್ತಿರೂಪಂತು ಚತುರ್ವಿಂಶತ್ರ್ಪಕೀರ್ತಿತಃ. ಸ್ಕಂದ ಪುರಾಣದೊಳು ಕಾಳಿಕಾ ಖಂಡದಲ್ಲಿ ಗುಹನು ಕುಂಭಜಂಗೆ ನಿರೂಪ. ದಾರುವನಕ್ಕೆ ದೇವರು ಭಿಕ್ಷಾಟಣಕ್ಕೆ ಬರಲು ಕೃತಕಯಜ್ಞವ ಮಾಡೆ ಮೊಲೆನಾಗರು ಮುಖ್ಯವಾದ ದೇವರು ಆಯಾಯ ಲಕ್ಷಣವ ಧರಿಸಿದರು. ಔಷಧಿ ಪ್ರಸ್ತಪುರದಲ್ಲಿ ಗಿರಿಜಾವಿವಾಹವಾಗಲು ಗಿರಿರಾಜನ ಹೊರಬಾಗಿಲಲ್ಲಿ ರತ್ನಖಚಿತವಾದ ಚಿನ್ನದ ಹಾವುಗೆಯ ವಿಷ್ಣು ತಂದು ಮಡಗಿದ. ಶಿವನು ಮೆಟ್ಟಿಕೊಂಡು ಅರಮನೆಯೊಳಯಿಂಕೆ ಹೋದರು.

### ಅರ್ಧನಾರೀಶ್ವರ.

ಮದನಾರಿ ಚತುರ್ದಶಂ. ಲೈಂಗ್ಯಪುರಾಣದಲ್ಲಿ ನಂದೀಶ್ವರನು ಸನತ್ಕುಮಾರಂಗೆ ಹರಿಕ್ಷೀರಶಮನನಾಗಿರಲು ಬ್ರಹ್ಮ ಬಂದರೆ ಸುಮ್ಮನಿರಲು ಇಬ್ಬರಿಗೆ ವಿರುದ್ಧವಾಗಿ ಇಬ್ಬರ ಬಾಣದ ಕಿಡಿಗಳಿಂ ಲೋಕ ಉರಿಯೆ ಇಬ್ಬರು ಹೆದರಿ ಶಿವಸ್ತೋತ್ರವ ಮಾಡೆ ಇಬ್ಬರ ನಡುವೆ ಅರ್ಧನಾರೀ ರೂಪ ತೋರಿದರು.

ಶಿವನು ಕಾರಿಕಾಲ ಚೋಳರಾಯನ ಭಕ್ತಿಗೆ ಮೆಚ್ಚಿದೆ ಬೇಡೆನಲಾತನಿಂತೆಂದನು. ನಮ್ಮ ಹೆತ್ತ ವೈಷ್ಣವ ಚೋಳನು ಲಿಂಗದ ಮೇಲಿದ್ದ ಪುಷ್ಪವನು ಮೂಸಿ ನೋಡಲು ತಿರುವರುಷನೆಂಬ ಪೂಜಾರಿ ಭಕ್ತನು ನಿನ್ನ ಮೇಲೆ ಮಣ್ಣು ಮಳೆಯು ಕರೆದು ಸಾಯಿ ಎನಲು ಅದರ ಕಾರಣದಿಂದ ಸತ್ತನು. ಆ ನಿಂದೆಯ ಪರಿಹರಿಸಲೋಸುಗ ನಿಮ್ಮ ಕೃಪೆಯಿಂದ ಎನಗೆ ಹೊನ್ನಮಳೆಯ ಕರಿಸೆನಲು ಶಿವನು ಧಾರಾವರ್ಷವಾಗಿ ಕರಿಸಿದನು. ಆ ಚೋಳರಾಯನ ದೇಶದಲ್ಲಿ ಬಡವರೆಲ್ಲ ಧನಸಂಪನ್ನರಾದರು.

### ನಂದಿಕೇಶ್ವರ.

ಶಾಲಂಕಮುನೀಶ್ವರನ ಮಗ ಶಿಲಾದ ಮುನೀಶ್ವರನು ಸದ್ಭಕ್ತ ಪುತ್ರನಾಗಬೇಕೆಂದು ತಪವ ಮಾಡುವಲ್ಲಿ ಯಜ್ಞದ ಭೂಮಿಯ ಶೋಧಿಸುವಲ್ಲಿ ನಂದೀಶ್ವರನು ತ್ರಿನೇತ್ರ ಜಟಾಜೂಟ ಶಿಶುರೂಪಿಂದ ಪ್ರಸನ್ನನಾಗಿ ಶಿವನ ಮನದಲ್ಲಿ ನೆನವುತ್ತಿರೆ ಶಿವನು ತನ್ನ ರೂಪ ತೋರಿದರು.

### ಪೂಸಲನೈನಾರು.

ತೊಂಡೀರ ಮಂಡಲದ ಸುಸ್ಥಿರಪುರದಲ್ಲಿ ವಿಪ್ರಕುಲದಲ್ಲಿ ಪೂಸಲನೈನಾರು ಉದ್ಭವಿಸಿ ಜಂಗಮದಾಸೋಹ ಮಾಡುತ್ತಿರಲು ಒಂದು ದಿನ ಹೃದಯದೊಳಗೆ ಶಾಸ್ತ್ರಜ್ಞಾನವೆಂಬ ಬಡಿಗೆಯ ಮಾಡಿ ಶಿವಸ್ತುತಿ ಎಂಬ ಮಂಟಪವ ಮಾಡಿ ಗರ್ಭಗೃಹ ಪೌಳಿ ಮೊದಲಾದುವ ಅಂತರಂಗದಲ್ಲಿ ರಚಿಸಿ ಅದರೊಳಗೆ ಪ್ರಾಣಲಿಂಗವ ನಿಲಿಸಿ ಪೂಜಿಸುತ್ತಿರಲು ಇತ್ತ ಕಾಂಚೀಪುರದಲ್ಲಿ ಮನುಜೇಂದ್ರ ಚೋಳರಾಯ ಪ್ರತಿಷ್ಠೆಯ ಮಾಡಬೇಕೆಂದು ಬಂಡಿಯ ಮೇಲೆ ತರಿಸಿದ್ದ ಲಿಂಗವು ಮಾಯವಾಗಲು ಅರಸು ಚಿಂತಿಸುತ್ತಿರಲು ಆಗ ಶಿವನು ಪೂಸಲ್ಲಯ್ಯನ ಹೃದಯದಲ್ಲಿ ಎಯಿದೇವೆ ಎಂದು ಒಬ್ಬನ ಸ್ವಪ್ನದಲ್ಲಿ ಹೇಳಲು ಅರಸು ಕೇಳಿ ಬಂದು ಪೂಸಲಯ್ಯಗೆ ನಮಸ್ಕಾರವ ಮಾಡಿ ನಿಮ್ಮಂತರಂಗದಲ್ಲಿದ್ದ ಗುಡಿಯ ನೋಡಬೇಕೆನಲು ಆ ಹೃದಯವ ತೆರೆದು ತೋರಲು ಆದರೊಳಗೆ ಪಂಚಮುಖ ದಶಭುಜವುಳ್ಳ ಶಿವನ ಕಂಡು ಮನುಜೇಂದ್ರ ಚೋಳನು ಆಶ್ಚರ್ಯಪಟ್ಟನು. ಬಳಿಕ ಪೂಸಲ ನೈನಾರನ ಶಿವನು ಕೈಲಾಸಗಿರಿಗೆ ಕರದೊಯ್ದರು

### ಕಣ್ಣಪ್ಪ.

ಉದವೂರಲ್ಲಿ ಕಣ್ಣಪ್ಪದೇವರು ಜಂತೆ ಕಂಬ ಬೋದುಗೆಗಳಿಂದ ಕಟ್ಟಿದ ಮನೆಯಲ್ಲಿ ಮಂಚ ಮಣೆ ಒನಕೆ ಒರಳು ಬಾಗಿಲು ಕದವು ಕೈಯ್ಯ ಬಳೆಗಳು ಮೊದಲಾದುವೆಲ್ಲವನು ಆನೆಯ ಜಂತದಲ್ಲಿ ಮಾಡಿಕೊಂಡು ಸುಖದಲ್ಲಿರುತ್ತ ಬಳಿಕ ಬೇಂಟೆಯಾಡಿ ಮೃಗವಾಗಿರ್ಪ ಸೌಂದರ ಮಹಾಕಾಯದ ಮಾಂಸವ ನೀಡಿ ಕಣ್ಣನರ್ಪಿಸಿ ನಿತ್ಯ ಪದವ ಪಡೆದರು.



## ೫೧೬ ನೆಯ ವಚನದ ಕಥೆ. (೭೭---೧೩)

### ಕಾಳಿದಾಸ.

ಧಾರಾಪುರವೆಂಬ ಪಟ್ಟಣದಲ್ಲಿ ಭೋಜರಾಜನಿಹನು. ಆತನಿಗೆ ಪದ್ಮಾವತಿ ಎಂಬ ಮಗಳು ಈಕೆಯ ತಂಗಿ ನೇತ್ರಾವತಿಯು ವಿದ್ಯವ ಕಲಿತು ವರರುಚಿಯು ಸೋಲಿಸಲು ಅವ ಮತ್ಸರವ ತಾಳಿದನು. ಬಳಿಕ ಅರಸುಮಗಳಿಗೆ ವರವಿಲ್ಲೆಂದು ಚಿಂತಿಸುತ್ತಿರಲು ಆಗ ವರರುಚಿ ನಾ ತಂದೆನೆಂದು ಹೋಗಿ ಒಂಟೆಯ ಕಾವ ಹೆಡ್ಡನ ಕರೆತಂದು ಶಾಸ್ತ್ರಜ್ಞನೆಂದು ಮರೆಮಾಡಿ ಹೇಳಲು ಮದುವೆಯ ಮಾಡಿ ಏಕಾಂತದ ಮನೆಗೆ ಕಳುಹಲು ಮೊದಲು ಅಳಿಯ ಅಂಜಿ ಮಂಚದ ಕೆಳಗೆ ಕುಳಿತಿರಲು ಈಕೆ ಗಂಡ ಹೆಡ್ಡನೆಂದು ಕಾಳಿಕಾದೇವಿಯ ಬಳಿಗೆ ಹೋಗಿ ಎಲೆ ತಾಯಿ ನನಗೆ ಹೆಡ್ಡ ದೊರಕಿದ. ಆತಂಗೆ ವಿದ್ಯೆಯ ಕೊಟ್ಟು ರಕ್ಷಿಸೆನಲು ಆದೀತು ಎಂದು ಕಳುಹಲು ಗಂಡನ ಕೂಡೆಂದಳು, ಕುಸುಮದಲ್ಲಿ ಕುಸುಮ ಹುಟ್ಟಿತೆಂಬುದ ಕೇಳಿ ಬಲ್ಲೆವಲ್ಲದೆ ಕಂಡರಿಯೆವೆನಲು. ಎಲೆ ಸತಿಯೆ ನಿನ್ನ ಮುಖಕಮಲದಲ್ಲಿ ಕಣ್ಣೆಂಬ ನೆಯ್ದಿಲ ಕುಸುಮವ ನೋಡೆನಲು ಅದಕ್ಕೆ ಸಂತೋಷವಾದಳು. ಬಳಿಕ ವರವ ಕೊಡಲು ಕಾಳಿದಾಸನೆಂದು ಹೆಸರಾಯ್ತು. ಒಂದು ದಿನ ಕಾಳಿದಾಸನು ಲಿಂಗವ ಪೂಜಿಸಿ ಕಣ್ಣ ತೆಗೆದು ಹರಿವಾಣದೊಳಿಟ್ಟು ಆರತಿಯ ಬೆಳಗಲು ಶಿವ ಮೆಚ್ಚಿ ಕಣ್ಣುಗಳ ಕೊಟ್ಟು ಮತ್ತೇನು ಬೇಕೆನಲು ಮಗಳ ಕಣ್ಣಾಗಬೇಕೆಂದು ಪಡೆದು ಕಣ್ಣಿಲ್ಲದವರಿಗೆ ಕೊಡುತ್ತಿರಲು ಅತ್ತ ಕಾಶಿಯಲ್ಲಿ ಜೇಷ್ಠರಾಜನ ಕಣ್ಣು ಹೋಗಲು ಇನ್ನು ರಾಜ್ಯವನಾಳೆನು ಸತ್ತೆನೆನಲು ಮಂತ್ರಿಯು ಕಾಳಿದಾಸ ಕಣ್ಣು ಕೊಡುತ್ತಾನೆ, ಅಲ್ಲಿಗೆ ಹೊಗೆನಲು ಅದ ಕೇಳಿ ಸಂಹಿತೆ ಕಾಳಿದಾಸನು ಆವ ಕೊಟ್ಟಾನು, ನಾ ಕೊಡೆನು ಎಂದು ಶಿವನ ಕೈಯ ಕಂಡುಗ ನವಣೆಯಪ್ಪ ಕಣ್ಣ ಪಡೆದು ಅರಸಿಗೆ ಕೊಟ್ಟು ಮತ್ತೆ ಕಣ್ಣಿಲ್ಲದವರಿಗೆ ಕೊಡುತ್ತಿರಲು ಶ್ರೀಶೈಲದಲ್ಲಿ ಕಂಗಳ ದೇವಯ್ಯನು ಮಲ್ಲಿಕಾರ್ಜುನಗೆ. ಕಣ್ಣನರ್ಪಿಸಿ ಮರಳಿ ಪಡೆವುದೇನರಿದು ಪರರ ಕಣ್ಣು ಪಡೆವುದತಿಶಯವೆಂದು ನಿಂದಕರೆನಲು ಆಗ ಚಕ್ಕನೆ ಕಣ್ಣ ಕಿತ್ತು ಮರಳಿ ಪಡೆದನು. ಮತ್ತೆ ಕಾಚಿಕಾಮನೆಂಬ ಶರಣರು ಆ ಕಂಡುಗ ನವಣೆಯಷ್ಟು ಪಡೆದ ಕಣ್ಣು ತೀರಿ ಹೋದಾವೆ ಸರಿ ಎಂದು ಮನುಜರಿಗೆ ಬಯಸಿದಾಗ ಕಣ್ಣ ಕೊಡುವರು. ಮತ್ತೆ ನಂಬೆಣ್ಣನೆಂಬ ಶರಣ ಗುಡಿಯ ಹಿಂದೆ ನಯನವ ಕಳಚಿ

ಬೇಡಲು ಆಗ ಶಿವನು ಲಿಂಗದೊಳಗಿಂದ ಸಮೀಪಕ್ಕೆ ಬಾ ಕೊಟ್ಟೆನೆನಲು ನೀನು ಸರ್ವೇಶನೆಂಬುದು ಹುಸಿಯೇ, ಅಲ್ಲಿಗೆ ಬರುವುದೆನಲು ಆಗ ಇದ್ದಲ್ಲಿಗೆ ಬಂದು ಕಣ್ಣ ಕೊಟ್ಟನು. ಹೀಗೆ ಶರಣರು ಮಹಿಮೆಯ ಮೆರೆದರು.

## ಓಹಿಲಯ್ಯ.

ಉತ್ತರದೇಶದಲ್ಲಿಯ ವಿಳಾವತಿ ಎಂಬ ಪುರದಲ್ಲಿ ನಿಃಕುಂಬನೆಂಬ ರಾಯ ರಾಜ್ಯವನಾಳುವಾಗ ಮಕ್ಕಳಿಲ್ಲವೆಂದು ಚಿಂತಿಸುತ್ತ ಶಿವಾಲಯಕ್ಕೆ ಬಂದು ಅಷ್ಟವಿಧಾರ್ಚನೆಯಿಂದ ಲಿಂಗವ ಪೂಜಿಸುತ್ತಿರಲು ಆಗ ಶಿವನು ಪ್ರಸನ್ನವಾಗಿ ಇಂತೆಂದನುಃ— ಜ್ಞಾನಸ್ವರೂಪನಾದ ಮಾಯಾವಿಕಾರವ ಹೊದ್ದದ ಸಚ್ಚರಿತ್ರನಾದ ಪುತ್ರನಾದನೆಂದು ನುಡಿದು ಶಿವನು ಲಿಂಗದೊಳಗೆ ಬಯಲಾದನು. ಇತ್ತ ರಾಜಪುತ್ರನ ಪಡೆದು ಓಹಿಲಯ್ಯನೆಂದು ಹೆಸರಿಡಲು ವಿರಕ್ತಿ ಬೆಳೆವಂತೆ ಶಿವಭಕ್ತಿಗೆ ಅವಯವಂಗಳು ಬಂದಂತೆ ಬೆಳೆವುತ್ತ ಹದಿನಾರು ವರುಷದ ಪ್ರಾಯವಾಗಲು ಆ ಮೇಲೆ ತಂದೆಯಾದ ನಿಃಕುಂಬರಾಯ ಮರಣವಾಗಲು ಬಂಧುಗಳು ದುಃಖದಿಂದ ಓಹಿಲಯ್ಯನ ಬಳಿಗೆ ಬಂದು ಮರಣವಾದನೆನಲು ಹೆಣನ ಸಂಚಕರಿಸುವ ಠಾವಿಗೆ ಬಂದು ಇರಲು ಆ ಮಂತ್ರಿಗಳು ಶ್ರೀಗಂಧದ ಕಟ್ಟಿಗೆಗಳನೊಟ್ಟಿ ಅದರ ಮೇಲೆ ಹೆಣನ ಮಲಗಿಸಿ ಅಗಿರು ಕೊರಡುಗಳನೊಟ್ಟಿ ಉರಿಗೊಳಿಸಿ ಸುಡುವಾಗ ಓಹಿಲಯ್ಯನು ಮುಗ್ಧಭಾವದಿಂದ ನನ್ನ ತಂದೆ ಎಂದು ಬಂದಾನೆಂದು ಕೇಳಲು ಇನ್ನು ಬಾರನೆನಲು ನನಗೂ ಇಂತಪ್ಪ ಮರಣವೇ ಸರಿ ಎನಲು ನಿನಗೂ ಹಾಗೇ ಸರಿ ಎನಲು ಆಗ ಓಹಿಲಯ್ಯನು ಮರಣವ ಬಿಡಿಸುವರುಂಟೆ ಎಂದು ಓರ್ವ ಶಿವಭಕ್ತನ ಕೇಳಲು ಆ ಭಕ್ತನಿಂತೆಂದನು. ಇಲ್ಲಿಗೆ ಇಪ್ಪತ್ತು ಗಾವುದದಲ್ಲಿ ಸೌರಾಷ್ಟ್ರಸೋಮೇಶ್ವರನುಂಟು ಆತನು ಬಿಡಿಸುವನೆನಲು ಆಗ ಓಹಿಲಯ್ಯ ರಾಜ್ಯವ ಬಿಟ್ಟು ಪಟ್ಟಾವಳಿಯ ಬಿಟ್ಟು ಕೈಪವನುಟ್ಟು ಸರ್ವಾಂಗುದ್ಧೂಳನವ ಮಾಡಿ ಸೌರಾಷ್ಟ್ರಕ್ಕೆ ಹೋಗುವಾಗ ಮಂತ್ರಿಗಳು ಅವನ ಪಾದದ ಮೇಲೆ ಬೀಳಲು ನಮ್ಮ ಹಾದಿ ನಿಮಗೇಕೆ ಎಂದು ಹೋಗುತ್ತಿರಲು ಮುಂದೆ ಸೋಮೇಶ್ವರನ ಶಿಖರವ ಕಂಡು ಅಡ್ಡಬಿದ್ದು ನಮಸ್ಕರಿಸಿ ಆ ಮೇಲೆ ಲಿಂಗವ ಕಂಡು ನುತಿಸಿದನು. ಏನೆಂಬೆನೆನ್ನ ಪುಣ್ಯವ ಎಲೆ ಯತಿಧರನೆ ಸಾವಿಂಗೆ ಭೀತಿಗೊಂಡೈ ತಂದೆಗೆ ಸಾಯಲೀಯದೆ ಸಲಹೆಂದು ಲಿಂಗದ ಮುಂದಿರ್ದ ಓಹಿಲಯ್ಯನ ಪೂಜಾ



ರಿಗಳು ಏಳೆಂದು ಕೈಹಿಡಿದೆತ್ತಲು ಶಿವಲಿಂಗವ ಬಿಗಿದಪ್ಪಿಕೊಂಡು ಎನ್ನೊಡೆಯನ ಬಿಡಲಾರೆನೆಂದು ಅಳುತ್ತಿರಲು, ಬಲ್ಪಿನಿಂದ ಬಿಡಿಸಿ ಗುಡಿಯ ಹೊರಯಿಂಕೆ ಕರೆತಂದು ಬಿಟ್ಟು ಬೀಗವ ಹಾಕಿ ಹೋಗಲು ಇತ್ತ ಸೋಮೇಶ್ವರನು ಗುಡಿಯ ಅಧಿಕಾರಿಯ ಸ್ವಪ್ನದಲ್ಲಿ ಗಂಟಲವ ತ್ರಿಶೂಲದಲ್ಲಿ ತಿವಿದು ಓಹಿಲದೇವನ ಕರತಾರೆನಲು ಆ ಅಧಿಕಾರಿ ಬೀಗವ ತೆಗೆದು ಒಳಯಿಂಕೆ ಹೊಗಿಸಲು ಆಗ ಲಿಂಗವ ಸ್ತುತಿಸಿದರು. ಸಾವಿಂಗೆ ಅಂಜಿ ಮರೆಯಹೊಕ್ಕವನ ಕರುಣದಿಂದ ರಕ್ಷಿಸೆಂಬ ಮಗನ ಬಿನ್ನಪವನು ಸೋಮನಾಥನು ಕೇಳಲು ಎಲೆ ಮಗನೆ ಹನ್ನೆರಡು ವರುಷ ಗುಗ್ಗುಳವ ತಂದು ನಮಗೆ ಸಮರ್ಪಿಸಿದರೆ ಮರಣವ ತೊಲಗಿಸಿ ನಿತ್ಯತ್ವವ ಕೊಟ್ಟೆವೆನಲು ಅದಕ್ಕೆ ಸಂತೋಷಬಟ್ಟು ಓಹಿಲಯ್ಯಗಳು ಸೋಮನಾಥನ ಕಯ್ಯ ಕಳುಹಿಸಿಕೊಂಡು ಗುಗ್ಗಳಕೆಂದು ದ್ವೀಪಾಂತರಕ್ಕೆ ಹೋಗಿ ಭಕ್ತರು ಕೊಟ್ಟ ದ್ರವ್ಯಮಂ ಕೊಟ್ಟ ಸಹಸ್ರ ಕಂಬಿಗಳಂ ತುಂಬಿ ಬಿಳಿಯ ಪಟ್ಟೆ ವಸ್ತ್ರವ ಮುಚ್ಚಿ ಮುದ್ರೆಯ ಹಾಕಿ ಕಂಬಿಗಳ ಹೊರಿಸಿಕೊಂಡು ಸೌರಾಷ್ಟ್ರಕ್ಕೆ ಬಂದು ಗುಡಿಯ ಹೊಕ್ಕು ದೇವರಿಗೆ ಗುಗ್ಗಳದ ಕಂಬಿಗಳ ಮುದ್ರೆ ಸಹವಾಗಿ ಒಪ್ಪಿಸಿ ಆ ಗುಗ್ಗಳದೊಳಗೆ ರಸವತ್ತಾದ ಹಳಕುಗಳ ತಂದು ಸಕ್ಕರೆ ತುಪ್ಪ ಜೇನತುಪ್ಪಗಳೊಳಗೆ ನೆನಿಸಿ ಧೂಪಾರತಿಯಲ್ಲಿ ಕೆಂಡವ ಪಡುಮಾಡಿ ಅದರಲ್ಲಿ ನೀಡಿ ಲಿಂಗಕ್ಕೆ ಅರ್ಪಿಸಲು ಆ ಸೋಮೇಶ್ವರನು ಅದ ಕೈಯ್ಯಲ್ಲಿ ಆಗ ಘ್ರಾಣಿಸಿ ಸಂತುಷ್ಟನಾದನು. ಈ ತೆರದಿಂದ ಓಹಿಲಯ್ಯ ಹನ್ನೆರಡು ವರುಷ ಪರಿಯಂತರ ನೇಮವ ನಡಿಸಿ ತನಗಿನ್ನು ಮುಕ್ತಿಯ ಕರುಣಿಸೆನಲು ಆಗ ಶಿವನು ಇಷ್ಟು ದಿನ ಮಾಡಿದ ಭಕ್ತಿ ಹೊನ್ನಕೊಟ್ಟವರಿಗಾಯಿತ್ತು ನಿನಗೇನು ಇಲ್ಲವೆನಲು ನೊಂದುಕೊಂಡು ದೇವಾ ಎನ್ನೊಡನಿಂತೇಕೆ? ನಾನು ಸ್ವತಂತ್ರನೇ? ಸೂತ್ರಧಾರಿ ನೀನಾಡಿಸಿದಂತಾಡಿದೆನೆನೆ, ಎಲೆ ಮಗನೆ ಇನ್ನೊಮ್ಮೆ ನಿನ್ನ ದೇಹವ ಬಳಲಿಸಿ ಮಲಯಾಚಲಕ್ಕೆ ಹೋಗಿ ಧೂಪವ ತಂದು ಹನ್ನೆರಡು ವರುಷವ ನಡಿಸು ಎನಲು ಆಗ ಕಂಬಿಯ ಹೊತ್ತುಕೊಂಡು ಹೋಗಿ ಎಂದಿನಂತೆ ಧೂಪವ ತಂದು ಲಿಂಗಕ್ಕೆ ಸಮರ್ಪಿಸಿ, ದೇವಾ ನೀವು ಹೇಳಿದಂತೆ ಧೂಪವನರ್ಪಿಸಿದೆನು, ಇನ್ನಾದರೂ ಕೃಪೆ ಮಾಡೆನಲು ಆಗ ಶಿವನು ಕೈಲಾಸಕ್ಕೆ ಕರದೊಯ್ದನು.

## ತೆಲಗು ಜೊಮ್ಮಯ್ಯ.

ತೆಲುಗ ಜೊಮ್ಮಯ್ಯಗಳು ಪೇರ್ಮಾಡಿರಾಯನ ಪ್ರಧಾನಿ ಪಟ್ಟವ ಬಿಟ್ಟು ಬೇಂಟೆಯ ಕಾಯಕದಲ್ಲಿರುತ್ತಿರಲು ಶ್ರೀಶೈಲದಲ್ಲಿ ಶಿವಾನಂದನೆಂಬ

ಯೋಗೀಶ್ವರನು ತಪವ ಮಾಡುವಾಗ ಗಾಂಧರ್ವರು ಅವರು ಕರಡೆ ಎಂದು ನುಡಿಯಲು ಅದ ಕೇಳಿ ಶಿಷ್ಯ ಕೇಳಿ ನೀವು ಮೃಗಗಳಾಗಿ ಎಂದು ಶಪಿಸಿದರು. ಅವರು ಕಲ್ಯಾಣದ ಸಮೀಪದ ಅರಣ್ಯದಲ್ಲಿ ಮೃಗಗಳಾಗಿರಲು ಆಗ ಜೊಮ್ಮಯ್ಯ ಬೇಂಟೆಯ ನೆವದಲ್ಲಿ ಗಾಂಧರ್ವರ ವಧಿಸಿ ಕೈಲಾಸಕ್ಕೆ ಕಳುಹಿದರು.

---

## ೫೨೧ ನೆಯ ವಚನದ ಕಥೆ. (೭೭--೧೮)

ಗ್ರಂಥಃ— ಈಶ್ವರೋವಾಚ ಭಕ್ತದಾಸೋಹ ಭಾವಂಚ ಸೋಹಂ ಭಾವಂಚ ಜಂಗಮಂ ಭಾವಭೇದದ್ವಯಂ ನಾಸ್ತಿ ಪ್ರಕೃತಿ ಪ್ರತಿಬಿಂಬವತ್. ಟೀಕುಃ— ಭಕ್ತನ ದಾಸೋಹಭಾವ, ಜಂಗಮವು ಸೋಹಂಭಾವ ಈ ಎರಡಕ್ಕಂ ಭೇದವಿಲ್ಲ. ಅದು ಹೇಗೆಂದರೆ ಪ್ರತಿಬಿಂಬದೋಪಾದಿ.

---

## ೫೨೨ ನೆಯ ವಚನದ ಕಥೆ. (೭೮--೨೦)

### ಜಮದಗ್ನಿ.

ಜಮದಗ್ನಿ ಮುನಿ ಕಾಮಧೇನುವಿಂ ಕಾರ್ತವೀರ್ಯಂಗೆ ಶಾಂತಿಯ ಮಾಡಿ ಬೇತಾಳನಾಯಿತ್ತು.

ಅಂತು ಭಕ್ತಸ್ಥಲ ವಚನದ ಕಥೆ ಸಮಾಪ್ತ.

---

# ಮಹೇಶ್ವರಸ್ಥಲದ ವಚನದ ಕಥೆಗಳು.

## ೪ ನೆಯ ವಚನದ ಕಥೆ. (೭೮--೪)

ವೇದೇನ ಸರ್ವ ಕರ್ಮಾಣಿ ಸಂಭವಂತಿ ವೇದ ಸ್ವಯಂಭೂ ಎಂಬ ಅರ್ಥದಿಂದ ವೇದವೇ ದೈವ ಮತ್ತಂ ವೇದೇನ ಸರ್ವ ಶಾಸ್ತ್ರಾಣಿ ಎಂದೆನಲು, ವೇದವೇ ನಿತ್ಯ ಸತ್ಯ ವೇದವೇ ಮುಕ್ತಿ ಪಥವು ಮತ್ತಂ ವೇದ ನ ತತ್ಪರಂ ನಾಸ್ತಿ ಎಂದುದಾಗಿ ವೇದವು ಹೇಳಿದ ವ್ಯವಹಾರ ಮುಖದಿಂದ ನಡೆಯಲು ಸಮಸ್ತ ಸುಖಭೋಗ ಫಲವ ಕೊಡುವದು. ಅದು ನಿಮಿತ್ತಂ ಸರ್ವಕ್ಕೆ ವೇದವೇ ಕರ್ತು ವೇದವೇ ಮೊದಲು ಎಂದೆನಲು, ವೇದವೇ ಮೊದಲೆಂಬ ವಾದಿ ನೀ ಕೇಳಾ. ಶಿವನಿಂದಲಾದ ಮೂವತ್ತಾರು ತತ್ವಂಗಳಲ್ಲಿ ಆಕಾಶ ತತ್ವದಿಂದ ಶಬ್ದವಾಯಿತ್ತು. ಆ ಶಬ್ದ ಸಂಬಂಧವಾದ ವೇದಕ್ಕೆ ನಿತ್ಯತ್ವ ಉಂಟೇ? ವೇದ ಸ್ವಯಂಭುವಾದಡೆ ಪ್ರಳಯ ಕಾಲದೊಳು ಅಳಿಹು ಗೆಲಹಕ್ಕೊಳಗಾದುದು ಮುಖ್ಯ ಶಾಸ್ತ್ರವು. ಮರುಳೇ ಶಿವಸಿದ್ಧಾಂತವೇ ಮುಖ್ಯ ಶಾಸ್ತ್ರ. ಮತ್ತಂ ಋಗ್ವೇದಕ್ಕೆ ಅರುಣ ವರ್ಣದ ದೇಹ ಅತ್ರಿ ಮುನಿ ಗೋತ್ರ ಗಾಯತ್ರಿಯೆ ಛಂದಸ್ಸು ಬ್ರಹ್ಮನಧಿದೈವ. ಯಜುರ್ವೇದಕ್ಕೆ ತಾಮ್ರವರ್ಣದ ದೇಹ ಭಾರದ್ವಾಜ ಮುನಿಗೋತ್ರ ತ್ರಿಷ್ಟುಪುರಂದಸ್ಸು ವಿಷ್ಣು ಅಧಿದೈವ. ಸಾಮವೇದಕ್ಕೆ ಶ್ವೇತ ವರ್ಣದ ದೇಹ ಕಾಶ್ಯಪ ಮುನಿಗೋತ್ರ ಜಗತೀ ಛಂದಸ್ಸು ಈಶ್ವರನಧಿದೈವ ಧವಳ ವರ್ಣದವೆರಡು ಶೃಂಗ. ಅಥರ್ವಣ ವೇದಕ್ಕೆ ಕೃಷ್ಣ ವರ್ಣದ ದೇಹ ಅನುಷ್ಟುಪ ಛಂದಸ್ಸು ಇಂದ್ರನಧಿದೈವ. ಇಂತು ವೇದಗಳಿಗೆ ಅಂಗ ವರ್ಣ ಗೋತ್ರ ಛಂದಸ್ಸು ಅಧಿದೈವತೆಗಳಿರಲು ವೇದ ಸ್ವಯಂಭುವೆಂಬ ಮಾತು ಸಲ್ಲದು. ಮತ್ತಂ ಪರಮೇಶ್ವರನು ಕಿರಾತರೂಪದಲ್ಲಿ ವೇದಂಗಳು ಶ್ವಾನವಾಗಿ ಬಳಿವಿಡಿದೆಯ್ದಿದವು. ತ್ರಿಪುರ ಸಂಹಾರ ಕಾಲದಲ್ಲಿ ರಥಕ್ಕೆ ಕುದುರೆಗಳಾದವು. ಅದು ನಿಮಿತ್ತ ವೇದವೇ ದೈವವೆಂಬ ಮಾತು ಸಲ್ಲದು, ಬಿಡು ಎಂದು ಖಂಡಿಸಿದರು.

---

## ೧೦ ನೆಯ ವಚನದ ಕಥೆ. (೭೯—೧೦)

ಶೃತಿ ಯಜುರ್ವೇದೆ ಯಜುರ್ವೇದದಲ್ಲಿ ಹರಿಗುಂ ಹರಂತ ಮನುಯಾಂದೇವಾವಿಶ್ವೇಶನಂ ವೃಷಭಂ ಮತೀನಾಂ ಟೀಕುಃ— ಮತೀನಾಂ

ವೃಷಭಂ ನಿಪುಣಂ ಶ್ರೀಷ್ಮನಾಗಿ ಹರಿಂ ಹರಂತಂ ಹರಿಂ ವಿಷ್ಣುವಂ ಹರಂತಂ ಸಂಹರಿಸಿದ ಕಾರಣದಿಂದ ವಿಶ್ವಸ್ಯೇಶಾನಂ ವಿಶ್ವಜಗತ್ತಿಗೆ ಈಶಾನಂ ಒಡೆಯನಾದನೆಂದು ಅನುಯಾಂತಿ ಸೇವಿಸುತ್ತಿಹರು.

---

## ೧೧ ನೆಯ ವಚನದ ಕಥೆ. (೮೦---೧೧)

### ವಿಷ್ಣು.

ನಾರಾಯಣನು ಚಕ್ರವ ಪಡೆವುದಕ್ಕೆ ಹಿಮಗಿರಿಯಲ್ಲಿ ತಪವ ಮಾಡುತ ಸಹಸ್ರ ಕಮಲವ ಸಹಸ್ರ ನಾಮದಿಂದ ಲಿಂಗವ ನಿಯಮದಿಂದ ಪೂಜಿಸುತ್ತಿರಲು ಇವನ ನಿಷ್ಠೆಯ ನೋಡಬೇಕೆಂದು ಒಂದು ಬಯಲ ಮಾಡಲು ಇದೇ ಕಮಲವೆಂದು ನಯನವ ಪಾದಕರ್ಪಿಸಲು ಶಿವ ಮೆಚ್ಚಿ ಹತ್ತುಸಾವಿರ ಸೂರ್ಯರ ಕಾಂತಿಯುಳ್ಳ ಜಲಂಧರನ ಕೊಲ್ಲುವುದಕ್ಕೆ ನಿರ್ಮಿಸಿದ ಸುದರ್ಶನ ಚಕ್ರವನು ರಾಕ್ಷಸರ ಜಯಿಸೆಂದು ಕೊಟ್ಟು ಇಂದು ಮೊದಲಾಗಿ ಕಮಲಾಕ್ಷನೆನಿಸಿಕೋ ಎಂದು ಶಿವ ನಿರೂಪಿಸಿದನು.

---

## ೧೨ ನೆಯ ವಚನದ ಕಥೆ. (೮೦---೧೨)

### ಬ್ರಹ್ಮ.

ನಿಬ್ಬೆರಗಿನಿಂದ ತಪಸ್ಸು ಮಾಡುತ್ತಿದ್ದ ಶಿವಬೀಜನೆಂಬ ಋಷೀಶ್ವರನ ಸಮೀಪಕ್ಕೆ ಬ್ರಹ್ಮ ಬರಲಾಗಿ ಆತಂಗೆ ಮನ್ನಣೆಯ ಮಾಡದಿರಲು ಕೋಪಿಸಿ ಆ ಋಷೀಶ್ವರನ ಹೊಯಿದು ಕೆಡಹಿದರೆ ಶಿವಧೋ ಎಂದು ಬಿದ್ದನು. ಆ ಕ್ಷಣವೆ ಪರಮೇಶ್ವರನು ಬಂದಾ ಋಷೀಶ್ವರಂಗೆ ಪ್ರಾಣವ ಕೊಟ್ಟು ಸಂತೈಸಿ ಬ್ರಹ್ಮನ ಶಿರವ ಹೊಯ್ದು ರುಂಡಮಾಲೆಗೆ ಕಟ್ಟಿಸಿದನು.

### ಹರಿ.

ಸ್ವರ್ಗದಲ್ಲಿ ಅಂಗೀರಸನ ಮಕ್ಕಳು ಬೃಹಸ್ಪತಿಯು ಸಂವರ್ತಕನು ಈರ್ವರು ದಾಯಾದ್ಯ ಭಾಗಕ್ಕೆ ಯುದ್ಧಂಗೆಯ್ಯೆ ಸುರರು ಸಂವರ್ತಕನ ಹೊರಡಿಸಲು ಚಂದ್ರಹಾಸರಾಜನಿಗೆ ಚಂದ್ರಪನವಿಯನು ಕೊಟ್ಟೆಹೆನೆಂದು ಯಜ್ಞವ ಮಾಡಿಸಿ ಸುರರುಗಳು ಚಂದ್ರಹಾಸ ಮುಖ್ಯರ



ಸಂಹರಿಸಿ ಅಲ್ಲಿಂದ ವನಾಂತರಕ್ಕೆ ಬಂದು ಶಿವನ ಕುರಿತು ಮಾವಿನ ಮರದಡಿಯಲ್ಲಿ ತಪಸ್ಸಿರ್ದು ಒಂದು ಮಾವಿನ ಫಲವು ತಾನೆ ಒಂದು ಫಲವನೂಡಿ ಮರಳಿ ರಸ ತುಂಬಿ ತೊಟ್ಟಂ ಹತ್ತುವ ವರವ ಪಡೆದಿರೆ ವಿಷ್ಣು ಆತನ ಶಿರದ ಮೇಲೆ ನಿಂದು ಫಲವ ಕೊಯ್ಯುತಿರೆ ಆತನ ಶಿಷ್ಯರೀರ್ವರು ಮಂತ್ರೋದಕದಿಂ ಶಿರಚ್ಛೇದನವ ಮಾಡಲು ಶಿರವು ಶಿವನೆಡೆಗೆ ಹೋಗೆ ರುಂಡಮಾಲೆಗೆ ಕಟ್ಟಿಸಿದನು.

### ಸುರಪತಿ.

ಪಾರ್ವತೀದೇವಿಯರು ತೈಲಾಭ್ಯಂಗವ ಮಾಡಿಕೊಂಡು ರುದ್ರಕನ್ನಿಕೆಯರು ಸಹವಾಗಿ ಜಲಕ್ರೀಡೆಗೆ ಹೋಗುವ ಸಮಯದಲ್ಲಿ ದೇವೇಂದ್ರ ನೋಡಲು ಬರುತಿರ್ದುದ ಕಂಡು ದೇವಿಯವರು ಕೋಪಿಸಿ ಅವನ ಶಿರಚ್ಛೇದನವ ಮಾಡಿ ದೇವರ ಸಮೀಪಕ್ಕೆ ಕಳುಹಲು ರುಂಡಮಾಲೆಗೆ ಕಟ್ಟಿಸಿದನು.

### ಧರಣೀಂದ್ರ.

ಮಹಾಶೇಷನಿರುವಂತಹ ಏಕಾಂತ ಸ್ಥಲದಲ್ಲಿ ಉತ್ತರ ಪ್ರಕಾಶನೆಂಬ ಋಷೀಶ್ವರನು ತಪಸ್ಸು ಮಾಡುತ್ತಿರ್ದನು. ಆ ಕಾಲದಲ್ಲಿ ಮುಚುಕುಂದನೆಂಬ ದೈತ್ಯನು ಪಾತಾಳ ಲೋಕದಿಂದ ಮಹಾಶೇಷನ ಸಮೀಪಕ್ಕೆ ಹೋಗಿ ಪ್ರಶಂಸಿಸಿ ಆತನ ಅತಿಶಯವಾಗಿ ಕೊಂಡಾಡುತ್ತ ತಿರುಗಿ ಬರುವಾಗ ಅಲ್ಲಿ ಒಬ್ಬ ಬಂಟನು ಆತನ ಅತಿಶಯವೇನೆಂದು ಜರಿದು ಹೋಗಿ ಹಿಡಿದಿಹೆನೆಂದು ಹೋಗಿ ಕೆಯ್ಯ ನೀಡಲಾಗಿ ಮಹಾಶೇಷನು ಹಿಂಡಕ್ಕಟ್ಟಿದನು. ಹಿಂದಟ್ಟಿದರೆ ಓಡಿ ಬಂದಾ ಋಷೀಶ್ವರನ ಮರೆಯ ಬಿದ್ದನು. ಬಿಡದೆ ವಿಷವನುಗುಳಿದನು. ಉಗುಳಲಾಗಿ ಆ ವಿಷಜ್ವಾಲೆಯಿಂದ ಋಷೀಶ್ವರನು ವ್ಯಥೆಯನೆಯ್ದುವಾಗ ಶಿವಧೋ ಎಂದು ಬಿದ್ದನು. ಆ ಕ್ಷಣದಲೇ ಪರಮೇಶ್ವರನು ಬಂದಾ ಋಷೀಶ್ವರಂಗೆ ಪ್ರಾಣವ ಕೊಟ್ಟನು. ಮಹಾಶೇಷನ ಮೇಲೆ ಕೋಪಿಸಿ ಶಿರವ ಹೊಯ್ದು ರುಂಡಮಾಲೆಗೆ ಕಟ್ಟಿಸಿ ಉಳಿದ ಶಿರವನೆಲ್ಲ ಕೋವಳವಾಗಿ ಉಟ್ಟನು.

### ಅಂತಕ

ನಾಗಾರಿ ಎಂಬ ಬ್ರಾಹ್ಮಣನ ಮಗನಾದ ಏಕಾಶಿ ತನ್ನ ಬ್ರಾಹ್ಮಣಿಯ ಬಿಟ್ಟು ಕಳ್ಳ ಬಂಟನಾಗಿ ಕ್ರೂರ ಕರ್ಮದಿಂದಿರಲು ಆತನ ಕೊಂದು

ಹೋಗಬೇಕೆಂದು ಯಮಭಟರು ಬರಲಾಗಿ ಅವರ ಕಂಡು ಶಂಭುಲಿಂಗದ ಮರೆಯ ಹೊಗಲು ಅವರು ಅಂಜಿ ಓಡಿ ಹೋದರು. ಮರಳಿ ಯಮ ತಾನೆ ಬಂದು ಲಿಂಗದ ಮರೆಯಲಿದ್ದವನ ಮೇಲೆ ಪಾಶವ ಹಾಕಿ ಎಳೆಯಲಾಗಿ ಶಿವಘೋ ಎಂದು ಗೋಳಿಟ್ಟನು. ಅಷ್ಟರೊಳಗೆ ಪರಮೇಶ್ವರನು ಪ್ರತ್ಯಕ್ಷನಾಗಿ ಯಮನ ಶಿರಸ್ಸನ್ನು ಹೊಯ್ದು ರುಂಡಮಾಲಿಗೆ ಕಟ್ಟಿಸಿ ಆ ಬ್ರಾಹ್ಮಣಂಗೆ ರುದ್ರಪದವಿಯ ಕೊಟ್ಟನು. ಈ ಕಥೆಯನ್ನು ಜೈಮಿನಿ ಋಷಿಯು ನಾರದನ ಮುಂದೆ ಹೇಳಿದನು.

---

## ೧೬ ನೆಯ ವಚನದ ಕಥೆ. (೮೦--೧೬)

### ಅಂಧಕಾಸುರ

ನರವರ್ಮ ಗಾವಿಲಋಷಿ ವಸುದೇವನ ಮಗಳು ಹಿರಣ್ಯಕಶ್ಯಪನ ತಮ್ಮ ಹಿರಣ್ಯಾಕ್ಷ ಆತನ ಸೂನು ಅಂಧಕಾಸುರ ಆತನ ಭೀತಿಯಿಂದ ದೇವತೆಗಳು ಮೊರೆ ಇಡೆ ಕೇಳ್ದು ಕಾಶಿಯಲ್ಲಿ ನಾಂಟ್ಯವಾಡೆ ನುತಿಸೆ ನುತಿಗೆ ಮೆಚ್ಚಿ ಹರನು ಗಾಣಪತ್ಯತ್ವವಿತ್ತನು.

### ಮಹಿಷಾಸುರ

ಕಾಶೀಖಂಡ ಸ್ಕಂದಪುರಾಣ ಸಾಕ್ಷಿ. ಮಹಿಷಾಸುರನ ಸೂನು ಗಜಾಸುರ ನವಸಾವಿರಯೋಜನದುದ್ದ ಶರೀರ ಉಳ್ಳಾತನಾಗಿ ಆತನ ಉಪಹತಿಯಿಂದ ತರುಗಿರಿ ನುಗ್ಗಾಗುತ್ತಿರಲು ಅನಿತರಲ್ಲಿ ಹರಿಯಜ ಮುಖ್ಯರು ಹರಗೆ ಮೊರೆ ಇಡೆ ಶೂಲದಲ್ಲಿರಿದು ನಾಂಟ್ಯವನಾಡೆ ಅವನ ಸ್ತುತಿಸೆ ಮೆಚ್ಚಿ ಕಾಶಿಯಲ್ಲಿ ಚರ್ಮವ ಹೊದ್ದು ಕೃತ್ತಿವಾಸನೆಂದು ವಿರಾಜಿಸಿದನು.

---

## ೧೭ ನೆಯ ವಚನದ ಕಥೆ. (೮೦—೧೭)

### ಕಕ್ಕಯ್ಯ

ಬಿಜ್ಜಳನ ಅರಮನೆಯ ಮುಂದೆ ವೈಷ್ಣವನು ಪುರಾಣವ ಹೇಳುವಾಗ ಶಿವನು ದೇವಿಯರ ಕೂಡೆ ವಿಷ್ಣು ಸಹಸ್ರ ನಾಮವ ಹೇಳಿದನೆಂದು ಹುಸಿಯ ಹೇಳಲು ಆಗ ಕಕ್ಕಯ್ಯನೆಂಬ ಶರಣನು ಅವನನಿರಿಯಲು ಹುಳುವಿನ ರಾಶಿಯಾದನು.



### ಭೃಗು

ತ್ರಯೋದಶಂ ಹರಿಧ್ವಂಸೆ ಸ್ಕಂದಪುರಾಣ ಕಾಳಿಕಾ ಖಂಡದಲ್ಲಿ ವಾಯುಮುನಿ ತೃಣಬಿಂದು ಮುನಿಯ ಕೇಳೆ ಪೇಳ್ದ ನಾರದ ರಕ್ಕಸರಿಗೆ ದೇವತೆಗಳಿಗೆ ದಾಯಾದಿ ವಿಷಯವ ಹುಟ್ಟಿಸಲು ಆ ಕಥನದಿಂದ ಅವರಿಗೆ ಯುದ್ಧವಾಗೆ ಭೃಗುಮುನಿಯು ಹೋಗೆ ಅವನ ಸತಿ ದಿವ್ಯದೇವಿ ಮಂತ್ರದಿ ಸ್ತಂಭಿಸೆ ಹರಿಯು ಚಕ್ರದಲ್ಲಿಡೆ ಆಕೆಯ ಶಿರವರಿಯಲು ಭೃಗುಮುನಿ ಸಂಜೀವನ ಮಂತ್ರದಿಂ ಶಿರವನಿತ್ತು ಹರಿ ಎದೆಯ ನೊದೆದು ನೀಚೋತ್ಪತ್ತಿ ಪಡೆ ಎಂದು ಶಪಿಸೆ ದಶಾವತಾರದಲ್ಲಿ ಹುಟ್ಟಿದನು.

---

## ೧೮ ನೆಯ ವಚನದ ಕಥೆ. (೮೧—೧೮)

### ಅನುಸೂಯೆ

ದಕ್ಷನ ಮಗಳಾದ ಅತ್ರಿಮುನಿಯ ಸತಿ ಅನುಸೂಯಾದೇವಿ ಭಕ್ತಿಯ ಮಾಡುತ್ತಿರಲು ಬ್ರಹ್ಮ ವಿಷ್ಣು ರುದ್ರರು ಈಕೆಯ ನೋಡಬೇಕೆಂದು ಮುನಿಗಳಾಗಿ ಬರಲು ಭಿಕ್ಷಕ್ಕೆ ಬರಲು ಆಗ ಕುಳ್ಳಿರಿಸಿ ನೀಡುವಾಗ ಮಗಳೇ ನಮಗೆ ಹುಟ್ಟಿದ ಮಾರ್ಗದಲ್ಲಿ ನೀಡಿದರೆ ಸಲಿಸಿಹೆನಲು ಆಗ ಅನುಸೂಯೆ ಆಗದೆಂದರೆ ಭಕ್ತಿಗೆ ಕುಂದು, ಬೆತ್ತಲೆ ನೀಡಿದರೆ ಅಭಿಮಾನಕ್ಕೆ ಕೆಟ್ಟತ್ತೆಂದು ಅಣಿಮಾ ಮಂತ್ರದಿಂದ ಹುಟ್ಟ ಮುಟ್ಟಿಸಲು ಶಿಶುರೂಪಗಳ ಮಾಡಿ ಬೆತ್ತಲೆ ನೀಡಿ ಅವರುಂಡ ಬಳಿಕ ಸೀರೆಯನುಟ್ಟು ಗರಿಮಾ ಮಂತ್ರದಿಂದ ಹುಟ್ಟಿನಲ್ಲಿ ಮುಟ್ಟಿಸಲು ಮೊದಲಂತಾಗಿ ಮೆಚ್ಚಿದೆವು ಬೇಡು ಎನಲು ನೀವು ಮೂವರು ನನಗೆ ಮಕ್ಕಳಾಗಿ ಎನಲು ಆಗ ಬ್ರಹ್ಮ ಸೋಮನೆಂಬ ನಾಮದಿಂದ ವಿಷ್ಣು ದತ್ತಾತ್ರೇಯನೆಂಬ ನಾಮದಿಂದ ಇಬ್ಬರೂ ಹುಟ್ಟಿದರು. ಬಳಿಕ ಅನುಸೂಯೆ ಗರಿಕೆಯಲ್ಲಿ ಲಿಂಗಪೂಜೆಯ ಮಾಡುವಾಗ ರುದ್ರನು ದೂರ್ವಾಸನೆಂಬ ನಾಮದಿಂದ ಹುಟ್ಟಿದನು. ಈ ರೀತಿಯಲ್ಲಿ ಅನುಸೂಯಾದೇವಿ ಭಕ್ತಿಯ ಮಾಡಿ ಶಿವನ ಕೃಪೆಯ ಪಡೆದಳು.

---

## ೧೯ ನೆಯು ವಚನದ ಕಥೆ. (೮೧---೧೯)

### ದೇವೇಂದ್ರ

ಮಹಾಮೇರುವಿನ ಕೆಳಗೆ ಶಿವಶೇಷನೆಂಬ ಋಷೀಶ್ವರನು ತಪಸ್ಸು ಮಾಡುತ್ತಿರಲಾಗಿ ದೇವೇಂದ್ರನು ಶಿವನ ಓಲಗಕ್ಕೆ ಹೋಗುವಾಗ ಆ ಋಷೀಶ್ವರನ ಬೆವರಿನ ವಾಸನೆಯು ಕಂಡು ಹೇಸಿ ಉಗಿಯಲು ಅದನರಿದು ಆ ಋಷೀಶ್ವರನು ಕೋಪಿಸಿ ಹೀನ ಜಾತಿಯಲ್ಲಿ ಹುಟ್ಟೆಂದು ಶಾಪವ ಕೊಡಲು ಈತ ಮರ್ತ್ಯದಲ್ಲಿ ಸೋಮಶಂಭುವೆಂಬ ಮುನಿಯು ಪೂರ್ವದಲ್ಲಿ ಶ್ವಪಚ ಆತನ ನೋಡಬೇಕೆಂದು ಅಮೃತವತಿ ಎಂಬವಳೊಬ್ಬ ವೇಶಿ ಬರಲಾಗಿ ಅವಳ ಕಂಡು ಭ್ರಮಿಸಿ ಆ ಮುನಿ ಕೂಡಿದ ಅವಳ ಗರ್ಭದಲ್ಲಿ ದೇವೇಂದ್ರ ಹುಟ್ಟಿದನು.

### ಬ್ರಹ್ಮ

ಮಹಾಮೇರುವಿನ ಮೇಲಣ ಕಂಕಣದಲ್ಲಿ ಕಮಲಾಸನೆಂಬ ಋಷೀಶ್ವರನು ಆ ವೇಳೆಯಲ್ಲಿ ಶಿವನ ಓಲಗಕ್ಕೆ ಬ್ರಹ್ಮ ಹೋಗುವಾಗ ಆ ಋಷೀಶ್ವರನ ಕಂಡು ಅಂಜದೆ ಸೋಂಕಿಕೊಂಡು ಹೋಗಲಾಗಿ ಆ ಋಷೀಶ್ವರನು ಕೋಪಿಸಿ ಬ್ರಹ್ಮಂಗೆ ನಿಜಾಶ್ರಯದಲ್ಲಿ ಹುಟ್ಟಹೋಗೆಂದು ಶಪಿಸಲು ಇತ್ತ ಮರ್ತ್ಯದಲ್ಲಿ ಸತ್ಯಋಷಿ ಎಂಬ ಮುನಿ ಪೂರ್ವದಲ್ಲಿ ಬೇಡನು ಆತನ ನೋಡಬೇಕೆಂದು ಜೇಷ್ಠಾದೇವಿ ಎಂಬವಳೊಬ್ಬ ಜಾರೆ ಬರಲು ಅವಳ ಕಂಡು ಭ್ರಮಿಸಿ ಕೂಡಿದನು. ಅವಳ ಗರ್ಭದಲ್ಲಿ ಬ್ರಹ್ಮ ಬಂದು ಜನಿಸಿದನು.

### ವಿಷ್ಣು

ಸೂರನ ಮಗ ವಸುದೇವನ ರಾಣಿ ದೇವಿಕೆಯ ಬಸಿರಲ್ಲಿ ಕೃಷ್ಣನಿರುವಾಗ ಭವಿಷ್ಯತ್ಕಾಲ ತಿಳಿದವರು ಈ ಹುಟ್ಟಿದ ಮಗ ನಿನ್ನ ಕೊಂದನೆಂದು ಕಂಸನಿಗೆ ಹೇಳಲು ಅವನು ಹುಟ್ಟಿದಾಗ ದನಿಯ ಮಾಡೆಂದು ಕತ್ತೆಯ ರೂಪದ ಖರನೆಂಬವನ ಮಡಗಲು ಬಳಿಕ ಕೃಷ್ಣ ಹುಟ್ಟಿದಾಗ ಕೂಗಬೇಡೆಂದು ವಸುದೇವ ಕತ್ತೆಯ ಕಾಲ ಹಿಡಿಯಲು ಅದು ಸುಮ್ಮನಾಯಿತ್ತು. ಬಳಿಕ ಕೃಷ್ಣನ ಎತ್ತಿಕೊಂಡು ಹೋಗಿ ಶಕ್ತಿಯ ಗುಡಿಯಲ್ಲಿ ನಂದಗೋಪಾಲ ಸತಿ ಹೆತ್ತ ಹೆಣ್ಣುಮಗುವು ಅಲ್ಲಿರಲು ಅದ ತೆಗೆದುಕೊಂಡೊಯ್ದು ಇರಿಸಿ ಬರುವಾಗ ನಂದಗೋಪಾಲ ಕಂಡು ಗಂಡು ಮಗುವ ಅಲ್ಲೇಕೆ ಮಡಗಿದೆ ಎನಲು ಅದು ಹೆಣ್ಣೆನಲು ಮತ್ತೆ ನೋಡೆಂದು ಕಳುಹಲು ಅದು



ಗಂಡಾಗಿರಲು ಎತ್ತಿಕೊಂಡು ಬಂದು ಸಾಕುತ್ತಿರಲು ಅದಕೇಳಿ ಕಂಸನು ವಿಷದ ಮೊಲೆಯು ಪೂತಿನಿ ಎಂಬವಳ ಮೊಲೆಯು ಕೊಡೆಂದು ಕಳುಹಲು ಆಗ ಮೊಲೆಯುನುಣಿಸುವಾಗ ವಿಷವನೆಲ್ಲ ಹೀರಿ ಉಗುಳಿದ. ಅಲ್ಲಿಂದ ಕಂಸನ ಜಯಿಸಿ ಸುಖದಲ್ಲಿರುತಿರ್ದನು.

### ಅರುಹ

ಬುದ್ಧಿಯೇ ದೈವವೆಂಬ ಬೌದ್ಧವಾದಿ ಹಿಂಸೆಯ ಮಾಡಬಾರದೆಂಬ ಜೈನವಾದಿ ನಿನ್ನ ಪೂರ್ವವೃತ್ತಾಂತ ಕೇಳು ಶಾಲಿವಾಹನ ಶಕೆ ವರುಷಕ್ಕೆ ಮೊದಲು ೫೦೬ ವರುಷದಲ್ಲಿ ನಾಭಿರಾಜ ಮರುತಾದೇವಿ ಅರುಹನೆಂಬ ಹೆಸರಿನಿಂದ ಪುಟ್ಟಿ ಬೇಂಟೆಗೆ ಹೋಗಿ ಸರಸೀತೀರದಲ್ಲಿ ತೋಹ ಬಿಟ್ಟಿರೆ ವೃಷಭನು ನೀರ್ಗುಡಿವುದಕ್ಕೆ ಬರೆ ಕೊಂದು ನೋಡೆ ವೃಷಭನಾಗಿರೆ ಶಾಸ್ತ್ರಜ್ಞರ ಕರಿಸಿ ವೃಷಭವಧೆಗೆ ಪ್ರಾಯಶ್ಚಿತ್ತವಾವುದೆನೆ ವಿಶ್ವರಾದಿ ಶಾಸ್ತ್ರವನೋದಿ ಪುರುಷ ಪ್ರಮಾಣದ ಅಟ್ಟಣೆಯ ರಚಿಸಿ ಅದರ ಮೇಲೆ ವೃಷಭನ ಮಡಗಿ ಅದರ ಕೆಳಗೆ ಪಲಾಶದ ಪರ್ಣವ ಹಾಸಿ ಪದ್ಮಾಸನದಲ್ಲಿ ಕುಳ್ಳಿರ್ದು ಆಜ್ಞಾಚಕ್ರದಿ ಪವನ ನಿಲಿಸಿ ಹೃತ್ಕಮಲ ಕರ್ಣಿಕಾ ಮಧ್ಯದಲ್ಲಿ ಆತನ ನೆಲೆಗೊಳಿಸಿ ಭೃಕುಟಿಸ್ಥಾನ ಮಧ್ಯದಲ್ಲಿ ಪರಬ್ರಹ್ಮವನಿರಿಸಿ ಜಾನಿಸಿ ಸತ್ಪ್ರಣಮವನುಚ್ಚರಿಸುತ್ತ ಪಕ್ಷಮಾತ್ರವಿರೆ ದುರ್ಗಂಧಕ್ಕೆ ಸೆಲೆಯದೆ ವೃಷಭ ಚರ್ಮವ ಹೊದೆದು ಅಂಡವ ಪಿಡಿದು ಬಾಲವ ಬಲಗೈಯಲ್ಲಿ ಪಿಡಿದು ಆವಾಗಳು ಚರ್ಯತಪಂಗೆಯ್ವುತ ಜೀವರಾಶಿಗಳ ಕೊಲ್ಲದೆ ಸದ್ಧರ್ಮದಿಂದಿರೆ ದೋಷವು ಹೋಗುವದೆಂದು ಹೇಳೆ ಆಚರಿಸಿ ಅರುಹನು ಅಪವರ್ಗವ ಸಾರ್ದನು. ಅಂದಿಂದಾಯಿತ್ತು ಜೈನಮತವು ಇಂತು ನಂದ ದೋಷವ ಕೆಡಿಸಲಾರದೆ ದುಃಖಬಟ್ಟನು ಅರುಹನು. ನಿಮಗೆಂತು ಮೋಕ್ಷವಪ್ಪುದು? ಜೈನರಿಗೆ ನರಕ ತಪ್ಪದು.

---

## ೨೦ ನೆಯು ವಚನದ ಕಥೆ (೮೧---೨೦]

ಯಜುರ್ವೇದೆ ಯಜುರ್ವೇದದಲ್ಲಿ ರುದ್ರೀಯಪಶು ರುದ್ರದಲ್ಲಿಯು ನಮಃಶಿವಾಯ ಚ ಶಿವತರಾಯ ಚ ನಮಃಶಿವಾಯ ಚ ಹರಿಕೇಶಾಯ ಚ

ಟೀಕುಃ— ನಮಃಶಿವಾಯ ಚ ಶಿವತರಾಯ ಚ ಪರಶಿವಂಗೋಸುಗ ನಮಃ ಶಿವಾಯ ಚ ಶಿವಂಗೋಸುಗವು ಹರಿಕೇಶಾಯ ಚ ವಿಷ್ಣುಬ್ರಹ್ಮರಿಗೊಡೆಯನಾದಾತಂಗೆಯು ನಮಸ್ಕಾರವು.

---

## ೨೧ ನೆಯ ವಚನದ ಕಥೆ [೮೧--೭೧].

ಹರನೆ ದುಷ್ಟನಿಗ್ರಹ ಸೃಷ್ಟಿಪ್ರತಿಪಾಲನ ವಿಚಕ್ಷಣನೆಂದೆಂಬರು. ನಿಮಗೆ ಅಹಂಕರಿಸಿದ ಬ್ರಹ್ಮವಿಷ್ಣು ದಕ್ಷಾದಿಗಳ ಶಿರಚ್ಛೇದನವ ಮಾಡಿದಿರಿ. ನಿಮಗೆರಗದೆ ದುರ್ವೃತ್ತಿಯಲ್ಲಿ ನಡೆದ ಗಜಾಸುರ ವ್ಯಾಘ್ರಾಸುರ ಗುಹ್ಯಾಸುರರುಗಳ ಕೊಂದು ಕಳೆದಿರಿ. ಇದನರಿದು ಸ್ತೋತ್ರವ ಮಾಡಿದರೆ ನೀವು ಕರುಣಿಸಿದಿರಯ್ಯ. ಇಂತಹ ಕರ್ತರಿನ್ನುಂಟೆ? ನಿಮ್ಮಂತಹ ಬಲಿಷ್ಠರಿನ್ನುಂಟೆ? ನಿಮ್ಮಂತಹ ಪುರುಷರುಗಳಿನ್ನುಂಟೆ? ಶಿವಶಿವಾ ದುಷ್ಟದುಷ್ಟರುಗಳೆಲ್ಲರ ಶಿಕ್ಷಿಸಿದಿರಿ. ಎನ್ನ ಮನವ ಶಿಕ್ಷಿಸಲಾರಿರೇ? ಶಿವಶಿವಾ ನಿಮ್ಮಿಂದ ಎನ್ನಮನ ಸಾಮರ್ಥ್ಯವುಳ್ಳುದಲ್ಲಾ! ಎನ್ನಿಂದ ನೀವು ಸಾಮರ್ಥ್ಯವಿಲ್ಲದಿರ್ದೊಡೆ ಶಿವಭಕ್ತ ಅಪರಾಧಿಗಳ ಶಿಕ್ಷಿಸುವಂಥ ಇರಿಭಕ್ತರು ಕಾಲಾಗ್ನಿ ರುದ್ರ ಮಡಿವಾಳ ಮಾಚಯ್ಯಂಗೆ ಮೊರೆಯಿಟ್ಟು ಕಳೆವೆನು. ಶಿವಧೋ ಶಿವಧೋ. ಎನ್ನ ಮೊರೆಯ ಕೇಳಿರಣ್ಣಾ. ಹರನೇ ನೀನು ದುಷ್ಟನಿಗ್ರಹ ಶಿಷ್ಟ ಪ್ರತಿಪಾಲನೆಂಬ ಬಿರುದ ಬಿಟ್ಟು ಕಳೆ. ಬಳಿಕ ನಿಮ್ಮ ವರದ ಹಸ್ತನೆಂಬೆ, ಶಂಕರನೆಂಬೆ, ಶಶಿಧರನೆಂಬೆ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನೆಂಬೆ.

---

## ೨೨ ನೆಯ ವಚನದ ಕಥೆ (೮೧--೨೨).

### ವ್ಯಾಸ.

ಕಾಳಿಕಾಖಂಡೆ, ವೈಭವಖಂಡದಲ್ಲಿ ಹೇಳುತ್ತಿದ್ದಿತ್ತು. ತೃಣಬಿಂದು ಮುನಿ ಅನಿಲಾದ ಮುನಿಯ ಬೆಸಗೊಂಡನು. ಹರಿಯಜರಿಂದಧಿಕರಾರೆನೆ, ಶಿವನೇ ಅಧಿಕನೆಂದು ವೇದವ್ಯಾಸನಿಗೆ ದೃಷ್ಟವನೊರೆದನದೆಂತೆನೆ— ಕಾಳಿಂದಿನೀ ಎಂಬ ನದಿಯಲ್ಲಿ ಹುಟ್ಟಿದ ಸತ್ಯವತಿ ತಾನೆ ಮತ್ಸ್ಯಗಂಧಿ ತಾಯಿ, ಪಾರಾಶರಮುನಿ ತಂದೆ, ವೇದವ್ಯಾಸನೆ ಮಗನು. ನೈಮಿಷಾರಣ



ದಲ್ಲಿ ಮುನಿಗಳಿಗೆ ಸಕಲ ಶಾಸ್ತ್ರವ ಬೋಧಿಸುತ್ತಿರ್ದು ಶಿವಾಧಿಕ್ಯವ ಬಿಟ್ಟು ದುರ್ಬುದ್ಧಿಯಿಂ ವಿಷ್ಣುವೇ ದೈವವೆನೆ ಮುನಿಜನವೆಂದಿತ್ತು. ಕಾಶಿಯಲ್ಲಿ ವಿಶ್ವನಾಥನ ಗೃಹದಲ್ಲಿ ಕರವ ನೀಡಿ ದಿಟವೆಂದು ಎನ್ನು ಎಂದು ಋಷಿಜನವೆನಲು ಅಹಂಮೆಂದು ಬಂದು ಕರವೆತ್ತಿ ನ ಕೇಶವೋ ದೈವ ಪರಃ ಎನೆ ಭುಜಸ್ತಂಭನವಾಗೆ, ಹರಿಯ ನುತಿಗೆಯ್ಯೆ ಹರಿ ಬಂದು ಮಮ ಕರ್ತು ಮಹೇಶ್ವರನೆಂದು ಬೋಧಿಸಲು ಶಿವನ ಸ್ತುತಿಗೆಯ್ದು ಬಾಹುಗಳ ಪಡೆದನೆಂದು ಅನಿಲಾದ ಋಷಿ ತೃಣಬಿಂದು ಮುನಿಗೊರೆದನು.

---

## ೨೩ ನೆಯ ವಚನದ ಕಥೆ (೮೨—೨೩).

ವಿಶಾಪಹರಣಂ ಚೈವ ಅಷ್ಟಾದಶಮಿತಿ ಸ್ಮೃತಃ. ಶೈವಪೌರಾಣ ಧರ್ಮಸಂಹಿತೆಯಲ್ಲಿ ನಂದೀಶ್ವರನ ಸನತ್ಕುಮಾರ ಬೆಸಗೊಂಡ ದೂರ್ವಾಸನು ಶಿವನಲ್ಲಿ ಮಂದಾರಮಾಲೆಯ ತರುತ್ತ ದಾರಿಯಲ್ಲಿ ದೇವೇಂದ್ರಂಗೆ ಕೊಡಲು ಉದಾಸೀನಂ ಮಾಡೆ ಋಷಿ ಶಪಿಸೆ ಐಶ್ವರ್ಯ ಹೋಗೆ ಶಿವನು ಅಮೃತ ಮಥನದಿಂ ಬಂದ ವಿಷವ ಧರಿಸಿದರು.

### ವೀರಭದ್ರ.

ದಕ್ಷನ ಯಜ್ಞದಲ್ಲಿ ವೀರಭದ್ರದೇವರು ಬಂದು ಶಿವವಿರಹಿತ ಯಾಗಕ್ಕೆ ನೀವೇಕೆ ಬಂದಿರೆಂದು ಭಗಾದಿತ್ಯನ ಕಣ್ಣು ಪೂಷಾದಿತ್ಯನ ಹಲ್ಲ ಕಿತ್ತು ಸಾವಿತ್ರೀ ಗಾಯತ್ರೀ ಸರಸ್ವತೀ ಎಂಬ ಬ್ರಹ್ಮನ ಮೂವರ ಹೆಂಡಿರನು ಮೊಲೆಮೂಗ ಕೊಯ್ದು ಅದಿತಿಯ ಮೂಗ ಕೊಯ್ದು ದಕ್ಷನ ಪಟ್ಟದ ರಾಣಿಯಾದ ತಿವಲ್ಲಿಯ ಕಿವಿಯ ಕೊಯ್ದು ಶಿಕ್ಷೆಯ ಮಾಡಿದನು. ಬಳಿಕ ಇಂದ್ರನು ಕೋಗಿಲೆಯಾಗಿ ಓಡುವಾಗ ಸುರಿಗಿಯಿಂದ ಕಡಿದನು. ವಾಯು ಹೋಗುತ್ತಿರಲು ಪರಶುಗೊಡಲಿಯಿಂದ ಕಡಿದನು.

---

## ೨೪ ನೆಯ ವಚನದ ಕಥೆ (೮೪—೨೪).

### ಮಾರಿ.

ಒಬ್ಬ ಗಂಧರ್ವನು ಸ್ವರ್ಗದಿಂದ ಮರ್ತ್ಯಕ್ಕೆ ಬಂದು ಮಾರಿಯ ಸಂಗವ ಮಾಡಲು ಅವಳು ಗರ್ಭಿಣಿಯಾಗೆ ಆ ಮಾರಿಗೆ ಹುಟ್ಟಿದೇಳು

ದಿನದ ಮಗನ ಹೊಲೆಯರ ಮನೆಯಲ್ಲಿ ಹಾದರದಲ್ಲಿ ಕೊಲ್ಲಲು ಅವನ ಯಮದೂತರು ಅಗಸರ ಕಲ್ಲ ಮರೆಗೊಂಡುದ ಬಿಡದೆ ಯಮನಿಗೊಪ್ಪಿಸಲು ಅದು ಕಾರಣದಿಂದಸಗರು ಏಳು ದಿನಕ್ಕೆ ಮೇಕಲ್ಲ ಮೇಲೆ ತೊಳೆಯಲಿಲ್ಲ. ಮಾರಿ ತನ್ನ ಮಗನ ಹೆತ್ತ್ರೊಸಗೆ ಸತ್ತ್ರೊಸಗೆಯ ಏಳು ದಿನದೊಳಗೆ ಮಾಡಿ ಊರಕ್ಕಿ ಊರೆಣ್ಣೆ ಉಣ್ಣ ಮಗನೆಂದು ಜೋಕುಮಾರನೆಂಬ ಪೆಸರಿಂ ಜೋಗುಳವಾಡಿ ಶೋಕವ ಮಾಡಿದ ಕಾರಣದಿಂ ಮಾರಿಯ ಮಗನಿಗೆ ಜೋಕುಮಾರನೆಂಬ ಹೆಸರಾಗಿ ಲೋಕದಲ್ಲಿ ನಡೆವುದೆ ಸಾಕ್ಷಿ.

---

## ೨೮ ನೆಯ ವಚನದ ಕಥೆ. (?)

### ಸಿಂಹಸೂದ್ರಿಕ.

ಸಿಂಹಸೂದ್ರಿಕರು ಶಿವನ ಪೂಜಿಸುತ್ತ ವೈರವರ್ಗದಿಂದಳಿಯೆ ಶಿವನು ಮೆಚ್ಚಿದೆ ಬೇಡಿರೆನೆ ನಿಮ್ಮಾಲಯದ ಮೇಲಿರಲೆಂದು ಬೇಡಿಕೊಂಡರು.

### ವಿಷ್ಣು.

ತ್ರಿಪುರದವರ ಬಾಧೆಗೆ ದೇವತೆಗಳು ವಿಶ್ವಕರ್ಮರಥವ ನಿರ್ಮಾಣ ಮಾಡಿ ಹರನ ಮುಂದಿಡೆ ಮೆಟ್ಟಲು ರಥ ಪಾತಾಳಕಿಳಿಯೆ ವಿಷ್ಣು ನಂದೀಶ್ವರಂಗೆ ನಿಮ್ಮ ರೂಪ ಕೊಡೆಂದುಪಾವಸ್ಥೆಯ ಮಾಡಿಕೊಟ್ಟರು. ಆ ರೂಪಿನಿಂ ವಿಷ್ಣು ಪಾತಾಳದ ರಥವೆತ್ತಿ ತಂದು ಹರನ ಮುಂದಿಡೆ ಮೆಚ್ಚಿದೆವೆನೆ ಎನ್ನ ರೂಪು ಮರ್ತ್ಯದಲ್ಲಿ ನಿಮ್ಮಾಲಯದ ಮೇಲಿರಲೆಂದು ಬೇಡಿಕೊಂಡನು

### ಭೃಂಗೀಶ್ವರ.

ಕೈಲಾಸದಲ್ಲಿ ಪಾರ್ವತೀ ಪರಮೇಶ್ವರರು ಓಲಗವಾಗಿರುವಾಗ ಭೃಂಗೀಶ್ವರನು ಸರ್ಪಕುಂಡಲ ರತ್ನಖಚಿತದ ತೋಳಬಳೆ ವಜ್ರದ ಕಂಕಣ ಮುತ್ತಿನ ಹಾರ ಪಾದದಲ್ಲಿ ಗೆಜ್ಜೆ ಬಿರುದಿನ ಪೆಂಡೆಯ ಇವ ಧರಿಸಿಕೊಂಡು ಚಲ್ಲಣವನುಟ್ಟು ಕಾಸೆಯ ಕಟ್ಟಿ ಭಸಿತೋದ್ಧೂಳನವ ಮಾಡಿ ಲಾಕುಳವ ಪಿಡಿದು ಶಿವನ ನಗಿಸುತ್ತ ಹಾದಿ ಹೋಗುತ್ತ ಶಿವನಿಗೆ ಕೈಯ್ಯ ಮುಗಿದು ದೇವಿಯರಿಗೆ ಮುಗಿಯದಿರಲು ಕೋಪಿಸಿ ನಮ್ಮ ಸೊಮ್ಮದ ದೇಹವ ತಾರೆನಲು ಆ ಕ್ಷಣದಲ್ಲಿ ಅಸ್ತಿಗಳನುಳುಹಿ ಮಾಂಸರಕ್ತಗಳ ಕೊಡಹಲು



ಆಗ ದೇವಿ ಚಂಡಮಾರುತನ ಕರೆದು ಈ ಭೃಂಗಿಯ ಹಾರಿಸಿಕೊಂಡು ಹೋಗೆನಲು ಆಗ ಗಟ್ಟ ಬೆಟ್ಟಗಳ ಕಿತ್ತು ಹಾರಿಸುತ್ತ ಬರುವಾಗ ಸ್ತೋತ್ರವ ಮಾಡಲು ಆ ಭೃಂಗೀಶ್ವರಗೆ ಶಿವನು ಮೂರನೆಯ ಪಾದವ ಕೊಡಲು ಅದ ಕಂಡು ವಾಯುವು ಅಂಜಿ ಅತ್ತಲೇ ಹೋದುದು. ಬಳಿಕ ಶಿವನು ಭೃಂಗೀಶ್ವರನ ತನ್ನ ಬಳಿಯಲ್ಲಿರುವಂತೆ ಮಾಡಿದನು.

---

## ೨೯ನೆಯ ವಚನದ ಕಥೆ. (?)

### ಶಂಕರದಾಸಿಮಯ್ಯ.

ಭೂತಳದಲ್ಲಿ ಸ್ಕಂದಶಿಲೆ ಎಂಬ ಪುರವಿರ್ಪುದು. ಗೋವಿಂದ ಭಟ್ಟನೆಂಬ ಶಿವಬ್ರಾಹ್ಮಣನಿರ್ಪನು. ಆತನ ಸತಿಯು ಹೆಸರು ದುರ್ಮತಿ. ಇಬ್ಬರು ಸುಖದಲ್ಲಿರುವಾಗ ಆ ಬ್ರಾಹ್ಮಣನು ಕಾಶಿಗೆ ಹೋಗುವಾಗ ಒಂದು ಗಾವುದದಲ್ಲಿ ನವಿಲೆ ಎಂಬ ಊರಲ್ಲಿ ಜಡೆಯಶಂಕರನೆಂಬ ಲಿಂಗವಿರ್ಪುದು. ಆ ದೇವಾಲಯಕ್ಕೆ ಹೋಗಿ ಕುಳಿತಿರಲು ಅಲ್ಲಿರ್ದ ಶೈವಭಕ್ತರು ಪೂಜಿಸುವದ ಕಂಡು ಈ ಲಿಂಗವ ಬಿಟ್ಟು ಇನ್ನು ವಾರಣಾಸಿಗೆ ಹೋಗುವುದೇಕೆಂದು ದಿನಂಪ್ರತಿ ತಮ್ಮ ಆ ಊರಿಂದ ಬಂದು ಪೂಜಿಸುತ್ತ ಎನಗೆ ಕಾಶಿಯು ನೀನೆ ಗಂಗೆಯು ನೀನೆ ಇನ್ನಾ ಕಾಶಿಗೆ ಹೋಗೆನು ಎಂದು ಇರುತ್ತಿರಲು ಆ ಒಂದು ದಿನ ಲಿಂಗವು ಕನಸಿನಲ್ಲಿ ನಿಜ ರೂಪ ತೋರಿ ಎಲೆ ಮಗನೆ ಚಳಿಮಳೆಯೊಳಗೆ ಎಡೆಯಾಡಿ ಕಷ್ಟ ಪಡಬೇಡ, ನಮ್ಮೂರಿಗೆ ಬಾ ಎನಲು, ಆ ನುಡಿಯ ಕೇಳಿ ಎಚ್ಚತ್ತು ಎನ್ನೊಡೆಯ ಕರುಣಿಸಿದನೆಂದು ತನ್ನ ಸತಿ ಸಹವಾಗಿ ಮಯೂರಪುರಕೆ ಬಂದು ಗುಡಿಯ ಹೊಕ್ಕು ಲಿಂಗವ ಪೂಜಿಸುವಾಗ ಶಿವನು ನಿನಗೆ ನಾಳೆ ದೀಕ್ಷೆಯ ಕೊಟ್ಟೆವು, ಶುದ್ಧಾಂಗನಾಗಿರ್ಪುದೆನಲು, ದೇವಾ ಎನ್ನ ಉತ್ತಮಾಂಗದಲ್ಲಿ ಹಸ್ತಮಸ್ತಕ ಸಂಯೋಗವ ಮಾಡಿ ಕರುಣಿಸೆನಲು ಲಿಂಗದೊಳಗಿಂದ ಜಂಗಮ ರೂಪಿನಿಂದ ಜೆಡೆಯಶಂಕರ ಬಂದು ದೀಕ್ಷೆಯ ಕೊಟ್ಟು ಲಿಂಗವನಿತ್ತು ಕರ್ಣದಲ್ಲಿ ಪಂಚಾಕ್ಷರಿಯ ಜಪಿಸಲು ದೀಪವ ಸೋಂಕಿ ದೀಪವಾದಂತೆ ಗುರು ಮುಟ್ಟೆ ಗುರುವಾಗಿಂತೆಂದನು. ಎನಗೂ ಎನ್ನ ಸತಿಗೂ ಒಂದೇ ಹೆಸರಿಟ್ಟು ಗೋವಿಂದನೆಂಬ ಹೆಸರ ಬಿಡಿಸೆನಲು ಆಗ ಶಿವನು ಶಂಕರದಾಸಯ್ಯನೆಂಬ ಹೆಸರಿನಿಂದಿರು. ನಿನ್ನ ಸತಿ ಶಿವ

ದಾಸಿ ಎಂಬ ಹೆಸರಿಂದಿರಲು ಆ ಮೇಲೆ ಶಂಕರದಾಸಯ್ಯಗೆ ನೊಸಲ ಕಣ್ಣು ಕೊಟ್ಟರು. ಅದೆಂತೆಂದೊಡೆ ಸಿಡಿಲ ಸಂಗಡಕ್ಕೆ ಬರಸಿಡಿಲು ಬಂದಂತೆ ವಡಬಾಗ್ನಿ ದಾವಾಗ್ನಿ ಸಂಗಡವಿದ್ದಂತೆ ಕಾಲಾಗ್ನಿ ಹಣೆಯಲ್ಲಿ ನಿಂದಂತೆ ಶಿವನಿಕ್ಕಿದ ನಂದಿ ಮೊಗವಾಡದ ಮರೆಯಲ್ಲಿ ನೊಸಲಕಣ್ಣು ನಿಂದೊಪ್ಪುತ್ತ ಮನೆಮನೆಗೆ ಹೋಗಿ ಧಾನ್ಯವ ತಿರಿತಂದು ಬೋನವ ಮಾಡಿ ಲಿಂಗಕ್ಕೆ ಕೊಟ್ಟು ಪ್ರಸಾದವ ಸಲಿಸುತ್ತಿರಲು ಮತ್ತೊಂದು ದಿನ ಧಾನ್ಯವ ತೀರುವುದಕ್ಕೆ ಹೋಗಲು ಒಂದು ಮನೆಯಲ್ಲಿ ಶಂಕರ ಗಂಡ ಘನವಯ್ಯ ಎನಲು ಈ ಜೋಳದ ಹೆಸರು ಶಂಕರನ ಪೆಸರೆಂಬುದ ಸಾನರಿಯೆ. ಇನ್ನು ಜೋಳವನುಣ್ಣೆ ಎಂದು ಲೋಳಿಸರದ ಹುಳುಕು ಒಂದು ಗುಲಗುಂಜಿಯನು ಸುಣ್ಣವನು ಕೂಡಿಸಿ ಅರಿದು ಲಿಂಗಕ್ಕೆ ಕೊಟ್ಟು ಆ ಪ್ರಸಾದವ ಸೇವಿಸುತ್ತಿರಲು ಆ ಲಿಂಗವು ವಕ್ತ್ರಪಾದನೆಂಬ ಶಿಷ್ಯನ ಕೊಡಲು ಆತನ ಕೆಯ್ಯ ಕೊಡೆಯ ಹಿಡಿಸಿಕೊಂಡು ಒಂದು ದಿನ ಕಲ್ಯಾಣಕ್ಕೆ ಬರುವಾಗ ದಾರಿಯಲ್ಲಿ ಪೆಂಬರೆ ಎಂಬೂರ ಹೊರಗೆ ಮೈಲಾರನ ಗುಡಿ ಇರಲು ಬಂದು ಆ ಮೈಲಾರನ ಎಡಹುತ್ತ ಬಂದು ಕುಳ್ಳಿರಲು ಅದು ಇಂತೆಂದು ನುಡಿಯಿತ್ತು. ಎನ್ನನುರುಹದೆ ಹೋದನು. ಕಣ್ಣು ಮೂರುಳ್ಳನ ಪಾದ ಸೋಂಕಿ ಬದುಕಿದೆನೆನುತ್ತ ಮೈಲಾರ ನುಡಿವುತ್ತಿರಲು ಆಗ ಅದ ಪೂಜಿಸುವೆನೆಂದು ಮೇಳಾದೇವಿ ಎಂಬ ವೇಶಿ ಸಂದಣಿಯ ಕಂಡು ಹೊರಗೆ ನಿಂತು ಆ ಶಂಕರದಾಸಯ್ಯಗಳ ಕಂಡು ಆಕೆಯಲ್ಲಿಗೆ ಸಂಪಗೆಯ ಹೂವಗಳನು ಕರ್ಪೂರ ವೀಳೆಯವನು ಮೈಲಾರನೊಳಗೆ ಕೊಡಿ ಎನಲು ಅವ ತಕ್ಕೊಂಡು ತಮ್ಮ ಲಿಂಗಕ್ಕರ್ಪಿಸಿ ಆ ಮಾಲೆಯ ಧರಿಸಿ ವೀಳೆಯವ ನೀಡಿಕೊಳಲು ಆಗ ಅದಕೆ ಕೋಪಿಸಿ ಮೈಲಾರಗೆ ಕೊಡದೆ ಅವ ನೀವೆ ಭೋಗಿಸುವರೇ ಎಂದು ಆ ಮೈಲಾರನೆ ಹದರಿ ಆಕೆ ಶಂಕರದಾಸಯ್ಯಗೆ ನುಡಿಯಲು ನಗುತ ಎಲೋ ಮೈಲಾರ ತಾಂಬೂಲವ ಪಿಡಿ ಎನಲು ಭಯದಿಂದ ಕೈಯ್ಯ ಒಡ್ಡಿ ತಕ್ಕೊಂಡು ಒಂದಿಷ್ಟು ಮೆದ್ದು ಉಳಿದುದ ಮೈಗೆ ತೊಡಕೊಂಡು ನಿಂದಿರಲು ಆಗ ಮೇಳಾದೇವಿಯು ಅಚ್ಚರಿಬಟ್ಟು ನಮ್ಮ ಮೈಲಾರ ದೇವರಿಗೆ ಒಬ್ಬ ಜಂಗಮ ಬಂದು ಗರ್ವದಿಂದ ತನ್ನ ಬಾಯ ತಂಬುಲವನಿಕ್ಕಿದನು. ತಮ್ಮ ಮೈಲಾರ ಸಾಮರ್ಥ್ಯ ಹೋಯಿತ್ತು. ಎಲ್ಲರ ಎಂಜಲ ತಿಂಬುವ ಪ್ರಾಪ್ತಿ ಬಂದಿತು. ಇನ್ನು ಮೊಳುಗೆಯ ಪೂಜಿಸುವದೇಕೆಂದು ಅಲ್ಲಿಯ ಜನರೆಲ್ಲ ಎನುತ್ತಿರಲು ಆಗ ಶಂಕರದಾಸಯ್ಯ ಅಲ್ಲಿಂದ ಹೋಗುವಾಗ



ತಮ್ಮ ಶಿಷ್ಯನಾದ ವಕ್ತ್ರಪಾದನ ಕೈಯ ಕೊಡೆಯ ಹಿಡಿ ಎನಲು ಆ ಮೈಲಾರ ತಾನು ಬಂದು ಕೊಡೆಯ ಹಿಡಿದುಕೊಂಡು ಸಂಗಡ ಹೋಗುತ್ತಿರಲು ಅಕಟಕಟ ಮೈಲಾರ ಕೊಡೆಯ ಹಿಡಿದುಕೊಂಡು ಹೋದನೆಂದು ಜನರು ಚಿಂತಿಸುತ್ತ ಎಲೆ ಶಿವಶರಣ ನಮ್ಮ ಮೈಲಾರನ ಬಿಡಿರಯ್ಯ ಎನಲು ಆಗ ಶಂಗರದಾಸಯ್ಯ ಕೊಡೆಯ ಹಿಡಿದುಕೊಂಡು ನಿಂದಿರು ಎನಲು ಆಗ ಕೊಡೆಯ ಮೈಲಾರನೆಂದು ಹೆಸರಾಯಿತ್ತು ಆ ಮೇಲೆ ವಕ್ತ್ರಪಾದ ತಿರಿ ತಂದ ಧಾನ್ಯವ ಕೊಟ್ಟಣಕ್ಕೆ ಹಾಕುವಾಗ ಒಬ್ಬ ಒಕ್ಕಲಗಿತ್ತಿಯು ಬತ್ತವ ಮಾರ ಕುಟ್ಟ ಎನಲು ಈ ನುಡಿಯ ಶಂಕರದಾಸಯ್ಯಗೆ ಹೇಳಲು ಹಾಗೆ ಆಗಲಿ ಎಂದು ಮಾರಿ ಮಸಣಿಗಳ ಮನೆಗೆ ಧಾನ್ಯವ ಕಳುಹಲು ಮಾರಿ ಮಸಣಿಗಳು ಕಂಡು ಈ ಭತ್ತವ ಕುಟ್ಟದಿದ್ದರೆ ನೊಸಲ ಕಣ್ಣಿನಿಂದ ಸುಟ್ಟಹನೆಂದು ಮರುಳು ತಾಂಡಿಗಳ ಕರೆದು ಊರೊಳಗಿಣ ಒನಕೆ ಮೊಂಗಳನೆಲ್ಲ ತರಿಸಿ ಶಂಕರದಾಸಯ್ಯನ ಹಾಡುತ್ತ ರಾತ್ರಿಯಲ್ಲಿ ಭೂಮಿ ನಡಗುವಂತೆ ಕುಟ್ಟಿ ಅಕ್ಕಿಯ ಮಾಡಿ ಒಪ್ಪಿಸಲು ಆ ಅಕ್ಕಿಯಿಂದ ಗಣ ಪರ್ವವ ಮಾಡಿ ಇರುವಾಗ ಅವರ ಸತಿ ಶಿವದಾಸಿಯಮ್ಮ ಗರ್ಭಿಣಿಯಾಗಿ ಶಿವಜ್ಞಾನವೇ ರೂಪಾದಂತೆ ಮಗನ ಹೆರಲು ಅದಕೆ ಲಿಂಗವ ಧರಿಸಿ ಜಂಗಮ ಪಾದೋದಕವ ನರ್ಪಿಸಿ ಸದ್ಯೋಜಾತ ದೇವರೆಂದು ಹೆಸರಿಟ್ಟು ಆ ಮೇಲೆ ಸತಿಸುತರು ಬಸವೇಶ್ವರನ ದರ್ಶನಕ್ಕೆ ಬಂದರು. ಅಲ್ಲಿ ಕೌದಿಯ ಹೊಲಿವ ಕಾಯಕದಿಂದ ಜಂಗಮಾರ್ಚನೆಯ ಮಾಡುತ್ತಿದ್ದರು.

---

## ೪೪೪ ನೆಯ ವಚನದ ಕಥೆ. (?)

### ಗೌತುಮ.

ಬ್ರಹ್ಮೇಶ್ವರ ತ್ರಿಯಂಬಕೇಶ್ವರ ಲಿಂಗಗಳಿರ್ಪ ತ್ರಿಯಂಬಕ ಪರ್ವತದಲ್ಲಿ ಗೌತುಮ ಮುನಿ ಇಹನು. ಅವನ ಹಿಂದೆ ಹನ್ನೆರಡು ವರುಷ ಬರ ಬರುತ್ತಿದೆ ಎಂದು ತಿಳಿದು ತಪವ ಮಾಡುತ್ತಿರಲು ಶಿವನು ಮೆಚ್ಚಿ ಏನು ಬೇಕೆನಲು ನನಗೆ ಉದಯದಲ್ಲಿ ಬಿತ್ತಿ ಬಯಕೆ ಫಲವಾಗುವ ಸಿದ್ಧಿಯ ಕೊಡಿ ಎನಲು ಹಾಗೆಯೆ ಕೊಡಲು ಬಳಿಕ ದಂಡಕಾರಣ್ಯ ನೈಮಿಷಾರಣ್ಯ ಮೊದಲಾದ ಅರಣ್ಯವಾಸಿಗಳಾದ ಮುನಿಗಳು ಗೌತುಮನಾಶ್ರಮಕ್ಕೆ ಬಂದು ಬರ ತಿಳಿವನಕ ಉಂಡು ಕೊಂಡಿರಲು ಬಳಿಕ ದಾರುಕನೆಂಬ ಮುನಿ ಇನ್ನು ನನ್ನಾಶ್ರಮಕ್ಕೆ ಹೋದೆನು ಎನಲು ಗೌತುಮ ಪ್ರೀತಿ

ಯಿಂದ ಇಲ್ಲಿ ಇರಬೇಕೆಂದೆನಲು ಆ ದಾರುಕನು ಈತನು ಸುಮ್ಮನೆ ಪೋಗಲೀಸ. ಒಂದು ದ್ರೋಹವ ಹಾಕಿ ಹೋಗಬೇಕೆಂದು ಅಗ್ನಿಪುರುಷನ ಗೋವ ಮಾಡಿ ಗದ್ದೆಯಲ್ಲಿ ನಿಲಿಸಲು ಗೌತುಮ ಕಂಡು ಹುಲ್ಲಿನ್ಹಲ್ಲಿಗೆ ಹೋಗೆಂದು ನೂಕಲು ಅದು ಪ್ರಾಣವ ಬಿಡಲು ಗೋಹತ್ಯವ ಮಾಡಿದನೆಂದು ಎಲ್ಲರು ಬಿಟ್ಟು ಹೋಗಲು ಗೌತುಮ ತಪವ ಮಾಡುತ್ತಿರಲು ಶಿವ ಮೆಚ್ಚಿ ಬೇಡು ಎನಲು ಗೋಹತ್ಯವ ಪರಿಹರಿಸಿ ಎನಲು ಅದು ಕೃತಕ ನಿನಗಿಲ್ಲವೆನಲು ಈ ವಾಕ್ಯದೋಷಕ್ಕೆ ಜಡೆಯ ಗಂಗೆಯ ಬೇಡಿಕೊಂಡು ಗೋವಿನ ಮೇಲೆ ಹರಿಸಲು ಅದು ಎದ್ದಿತ್ತು. ಆಗ ದಾರುಕನ ಶಪಿಸಿ ಸುಖದಲ್ಲಿದ್ದನು.

### ದಕ್ಷ.

ಕೈಲಾಸದಲ್ಲಿ ಶಿವನು ದೇವಿಯು ಅಂತಪುರದಲ್ಲಿರುವಾಗ ಎಲೆ ದೇವಿ ನೀ ಸೋತರೆ ಜಗವ ಪುಟ್ಟಿಸೆ ನಾ ಸೋತರೆ ಲೋಕವ ಸಂಹರಸಿಹೆನು ಎಂದು ಪಗಡೆಯನಾಡುವಾಗ ನಾರದನೆಂದನು. ದಕ್ಷನು ನಿಮ್ಮ ಬಿಟ್ಟು ಯಜ್ಞವ ಮಾಡುತ್ತಾನೆ ಎನಲು ಆದ ದೇವಿ ಕೇಳಿ ಮನಪವನಂಗಳೇಗಾಲಿ ಪರ್ವತವೇ ಅಚ್ಚು ಇಂತಹ ರಥಕ್ಕೆ ಸಾವಿರ ಸಿಂಹವ ಕಟ್ಟಿ ಎಳೆಕೊಂಡು ರುದ್ರಕನ್ನಿಕೆಯರು ಸಹವಾಗೆ ಯಜ್ಞದ ಬಳಿಗೆ ಬರಲು ಆಗ ದಕ್ಷನು ಮುದಿ ಎತ್ತನೇರಿ ತಿರಿದುಂಬ ಅಮಂಗಲನ ಸತಿ ಇಲ್ಲಿಗೇಕೆ ಬಂದೆ ಎನಲು ಆಗ ನಿಂದೆಯ ಕೇಳಿದೆನೆಂದು ಕಿವಿಯ ಮುಚ್ಚಿಕೊಂಡು ಹೋಮದೊಳಗೆ ಧುಮುಕಿ ಬಯಲಾದಳು. ಆಗ ಶಿವನು ಕೇಳಿ ಮುನಿದು ಜಡೆಯನಪ್ಪಳಿಸಲು ಸಿಂಹದೋಪಾದಿಯಲ್ಲಿ ಸಾವಿರ ಮುಖದಿಂದ ಎರಡು ಸಾವಿರ ತೋಳುಗಳಿಂದ ವೀರಭದ್ರ ದೇವರು ಹುಟ್ಟಿ ಯಜ್ಞಕ್ಕೆ ಬಂದು ದಕ್ಷನ ತಲೆಯ ಹೊಯ್ಯಲು ಅದು ಹರಿಯದಿರಲು ಭುಜದ ಮೇಲೆ ನಿಂತು ಕಯ್ಯಲ್ಲಿ ಕಿತ್ತು ಅಗ್ನಿ ಕುಂಡಕೆ ಹಾಕಿ ಶಿವನ ಬಳಿಗೆ ಹೋದನು. ಅಲ್ಲಿಗೆ ಬಂದು ನೆರವಾದವರ ದಧೀಚಿಯು ಶಾಪವ ಕೊಟ್ಟನು.

### ಪರಶುರಾಮ.

ಪರಶು ವಿಪ್ರರಿಗೆ ದೇಶವ ಕೂಡೆ ಅವರು ಹೊರಡಿಸಲು ಹೋಗಿ ವರುಣನ ಬೇಡೆ ಅಂಬೆಚ್ಚಷ್ಟು ತೆಗೆದುಕೋ ಎನೆ ಎಸೆವ ಸಮಯದಿ ದೇವೇಂದ್ರನು ಒರತಿಯಾಗಿ ನಾರಿಯ ಕಡಿಯೆ ೧೨ ಗಾವುದದಿ ಬಳಿ ವಿಪ್ರರು ಅದನು ಬೇಡೆ ಕೊಟ್ಟನು.



### ನಾಗಾರ್ಜುನ.

ಮತ್ಸ್ಯೇಂದ್ರನ ಶಿಷ್ಯ ನಾಗಾರ್ಜುನನು ಶ್ರೀಗಿರಿಯ ಮೇರುವಿನಂತೆ ಚಿನ್ನವ ಮಾಡಬೇಕೆಂದು ಮೂಲಿಕೆಯ ಗುಳಿಗೆಯ ಬಾಯೊಳಗಿಟ್ಟುಕೊಂಡು ಊದುವಾಗ ಶಿವನು ವಿಷ್ಣುವಿಂಗೆಂದನು. ಅದು ಚಿನ್ನವಾದರೆ ಎಲ್ಲ ಕಡಿದಾಡಿತು. ಅವನ ವಧಿಸೆಂದು ಕಳುಹಲು ವಿಪ್ರನಾಗಿ ನಾಗಾರ್ಜುನನ ಬಳಿಗೆ ಬಂದು ಇದೇನೆನಲು ನಿನಗಿದರ ಮಾತೇಕೆನಲು ಇವನ ತಲೆಯ ಹೊಯಿದರೆ ಹರಿಯದೆಂದು ವಿಷ್ಣು ನಿನ್ನ ಬಾಯೊಳಗಣ ಗುಳಿಗೆಯ ತೋರು ಹೋದೆನೆನಲು ಅವ ಕೆಯ್ಯೊಳಗಿಟ್ಟುಕೊಂಡು ತೋರಲು ಆಗ ಚಕ್ರದಿಂದಿಡಲು ನಾಗಾರ್ಜುನನ ತಲೆ ಕತ್ತರಿಸಿ ರಸಗಂಡವೆಂದು ಕೂಗುತ ಗಾಳಿ ಪೂಜೆಯ ಪರ್ವತದಲ್ಲಿ ಬೀಳಲು, ಅವ ಸತ್ತುಹೋದನು. ॥ಗ್ರಂಥ॥ ಏಕಂ ದೃಷ್ಟ್ವ ಶತಂ ದೃಷ್ಟ್ವ ದೃಷ್ಟ್ವ ಪಂಚಶತ್ಯೈರಪಿ ಅತಿ ತೃಷ್ಣ ನ ಕರ್ತವ್ಯಂ ಚಕ್ರಂ ಭ್ರಮತಿ ಮಸ್ತಕೆ. ನಾಗಾರ್ಜುನನಿದ್ದನು. ಒಂದು ತೂಕ ವೇದಿಯಂ ಕಂಡು ನೂರು ತೂಕ ವೇದಿಯಂ ಕಂಡು ಸಹಸ್ರ ವೇದಿಯಂ ಕಂಡು ದಣಿಯದೆ ಅತಿ ತೃಷ್ಣೆಯ ಮಾಡಲಾಗಿ ಚಕ್ರ ಬಂದು ತಲೆಯ ಕೊಂಡು ಹೋಯಿತ್ತು.

---

## ೪೯ ನೆಯ ವಚನದ ಕಥೆ. (?)

### ಮಾಯಭಟ್ಟಾಚಾರ್ಯ.

ಮಂಗಲಾಂಬಿಕೆ ಎಂಬ ಸ್ತ್ರೀ ಸಹವಾಗಿ ಮಾಯಭಟ್ಟಾಚಾರ್ಯರು ಅಂಜೆ ಎಂಬ ಪುರದಲ್ಲಿರುತ್ತ ಷಡ್ದರ್ಶನದವರ ಗೆದ್ದು ಕಾಶಿಖಾಂಡವ ಪುರುಷಾಕೃತಿಯ ಮಾಡೆ ಶಿವನೇ ದೈವ ಹರಿವಿರಿಂಚಿ ಮೊದಲಾದ ದೇವತೆಗಳು ಶಿವನ ಸೇವಕರೆಂದು ನುಡಿಸಿದರು.

---

## ೫೦ ನೆಯ ವಚನದ ಕಥೆ. (?)

### ಜಮದಗ್ನಿ.

ಮಾತಂಗಿಯ ಮಗ ವಿಪ್ರ ರೇಣುಕಾದೇವಿಯ ಮಗ ಹೊಲೆಯ ಇವರಿಬ್ಬರು ಜಮದಗ್ನಿಗೆ ಹುಟ್ಟಿದರು. ಕ್ಷೇತ್ರದಲ್ಲಿ ಹುಟ್ಟಿದ ವಿಪ್ರ ತಾನಿದ್ದ ಮನೆಯಲ್ಲಿ ಹುಟ್ಟಿದ ಹೊಲೆಯ ಇವರಿಬ್ಬರಿಗೆ ಸಾಕ್ಷಿಗಳು ಭಾರದ್ವಾಜ

ವಿಶ್ವಾಮಿತ್ರ ಆಗಸ್ತ್ಯ ನಾರದ ಕೌಂಡಿಲ್ಯ ಇಷ್ಟರು ಸಾಕ್ಷಿಗಳಾಗಿ ನಿಮ್ಮೊಳಗೆ ನೀವು ಸಂವಾದ ಬೇಡ ಎಂದು ವಿಭಾಗವ ಮಾಡಿ ಹಂಚಿಕೊಟ್ಟ ವಿವರವೆಂತೆಂದೊಡೆ ಊರ ಹೊರಗಣ ಗೃಹವ ಹೊಲೆಯರಿಗೆ ಕೊಟ್ಟರು. ಊರೊಳಗಣ ಗೃಹ ವಿಪ್ರರಿಗೆ ಕೊಟ್ಟರು. ಸತ್ತುದ ಹೊತ್ತುಕೊಂಡು ಹೋಗುವರ ಹೊಲೆಯರಿಗೆ ಮಾಡಿದರು. ಬದುಕಿರ್ದ ಜೀವ ದನವ ದಾನ ಮುಖದಿಂ ತಕ್ಕೊಂಬುದಕ್ಕೆ ವಿಪ್ರರಿಗೆ ಮಾಡಿದರು. ಇನ್ನು ಕಂಡಲ್ಲಿ ತೊಲಗಿ ಸಂಭ್ರೋಳಿ ಎಂದು ಹೊಲೆಯರಿಗೆ ನಾಮತೀರ್ಥವ ಮಾಡುವ ಸಮಯದಲ್ಲಿ ಹೊಳೆಯೊಳು ಮುಳುಗಿ ದೂರದೊಳೊಯ್ದು ಭಾವ ವಿಪ್ರರಿಗೆ ಇಂತೆಂದು ವಿಭಾಗ ಪ್ರತಂಗಳಂ ಬರೆದು ಕೊಟ್ಟರು.

---

## ೫೬ ನೆಯ ವಚನದ ಕಥೆ. (?)

### ನಳ.

ಉತ್ತರದೇಶದಲ್ಲಿ ನಿಷಧಪುರದಲ್ಲಿ ನಿಷಧನ ಮಗ ನಳಚಕ್ರವರ್ತಿ. ಇವನು ರೂಪಿನಲ್ಲಿ ಕಾಮ, ಬಲ್ಲವಿಕೆಯಲ್ಲಿ ಬ್ರಹ್ಮ, ಪ್ರತಾಪದಲ್ಲಿ ವಿಷ್ಣುವಿಗೆ ಸಮಾನವಾಗಿ ಒಂದು ದಿನ ಸಿಂಗರದೋಟಕ್ಕೆ ಹೋಗಿ ಹಂಸೆಗಳ ಕಂಡು ಸಲಹಬೇಕೆಂದೊಂದ ಹಿಡಿಯಲು ಅದು ಎಲೆ ಅರಸಿ ಮಾನಸ ಸರೋವರದಿಂದ ನಿನ್ನ ನೋಡಬಂದೆ, ಬಿಟ್ಟರೆ ಉಪಕಾರವ ಮಾಡಿಹೆನೆನಲು ಅದೇನೆಂದು ಕೇಳಲು ನೀನು ಕುಂಡಿನಿ ದೇಶದ ಕೌಂಡಿಲ್ಯಪುರವನಾಳುವ ಭೀಮರಾಜನ ಸತಿ ಭುಜಬಲದೇವಿಯ ಮಗಳು ವೀರಾದೇವಿ ಆಕೆಯ ತಂಗಿ ದಮಯಂತಿ ಈಕೆ ರೂಪಿನಲ್ಲಿ ರತಿ ಬಲ್ಲವಿಕೆಯಲ್ಲಿ ಸರಸ್ವತಿಯ ಸಮಾನವಾದ ಈಕೆಯನೆ ಮದುವೆಯಾಗೆಂದು ಹೇಳಿ ಬಳಿಕ ಅವು ದಮಯಂತಿಯ ಸಿಂಗರದೋಟಕ್ಕೆ ಬರಲು ಆಕೆ ತಾನೆ ಒಂದ ಹಿಡಿಯಲು ಆ ನಿನಗುಪಕಾರವ ಹೇಳಿಹೆನು ಬಿಡು ಎನಲು ಅದೇನೆಂದಳು, ನೀನು ನಳನನೆ ಮದುವೆಯಾಗೆನಲು ಆಗ ಬಿಟ್ಟಳು. ಬಳಿಕ ದಮಯಂತಿಯು ಸ್ವಯಂವರವ ಮಾಡುವಾಗ ಎಲ್ಲ ಅರಸುಗಳು ಕೂಡೆ ನಳನು ಬರಲು ಆ ವೇಳೆಯಲಿ ಐವರು ದೇವತೆಗಳು ನಳನ ರೂಪಾಗಿ ಆತನ ಬಳಿಯ ಕುಳಿತಿರಲು ಅಗ ದಮಯಂತಿ ಬಂದು ಆರು ಮಂದಿ ಒಂದೇ ರೂಪಾಗಿರಲು ಅವರು ಅನುಮಿಷರು ಈತ ಎವೆ ಇಕ್ಕುತಾನೆ ಎಂದು ತಿಳಿದು ರತ್ನಮಾಲೆಯ ನಳಗೆ ಹಾಕಿ ಮದುವೆಯಾಗಿ



ಸಂಗಡ ಮನೆಗೆ ಹೋಗುವಾಗ ನಳನ ರೂಪ ತಾಳಿದ ದೇವತೆಗಳೊಳಗೆ ಇಂದ್ರನೆಂದನು. ಎಲೆ ನಳನೇ ನೀನು ಯಜ್ಞವ ಮಾಡಿದರೆ ವಿಘ್ನವು ಮಾಡುವುದಿಲ್ಲವೆಂದನು. ಅಗ್ನಿ ಬೆಂಕಿ ಇಲ್ಲದಡಿಗೆಯ ಕಲಿಸಿದನು. ಯಮ ವ್ಯಾಧಿ ಬಾರದಂತೆ ಮಾಡಿದನು. ವರುಣ ಮಳೆ ತಪ್ಪದಂತೆ ಮಾಡಿದನು. ಕುಬೇರ ಖೇಚರದಲ್ಲಿ ರಥವ ನಡಿಸುವುದ ಕಲಿಸಿದನು. ಬಳಿಕ ನಳ ತನ್ನೂರಿಗೆ ಬಂದಿರುವಾಗ ಕಲಿ ದ್ವಾಪಾರಗಳು ಬಂದು ದಮಯಂತಿ ಈತಗೇಕೆಂದು ಮೊದಲು ಅಣ್ಣತಮ್ಮಂದಿರ ಜೂಜಾಡಿಸಿ ನಳನ ಸೋಲಿಸಿ ರಾಜ್ಯವನೆಲ್ಲ ತಮ್ಮಗೆ ಕೊಡಿಸಲು ಅಂತಹ ನಳನ ಹೊರಡಿಸಲು ದಂಪತಿಗಳು ಹೋಗಿ ಅರಣ್ಯದಲ್ಲಿ ಹೆಂಡತಿಯ ಬಿಟ್ಟುಹೋದನು. ದಮಯಂತಿ ಪುರದಲ್ಲಿದ್ದ ಭೀಮರಾಜನ ಗುರಿ ಕಾಣದ ಋತುಪರ್ಣ ಬೇಂಟೆಗೆ ಬಂದು ದಮಯಂತಿಯ ಕಂಡು ಆಕೆಯ ತಂದೆಯ ಹತ್ತಿರಕ್ಕೆ ಕಳುಹಿದ ಬಳಿಕ ನಳ ಚಿತ್ರಕೂಟಗಿರಿಯಲ್ಲಿ ಹೋಗುವಾಗ ಒಂದು ಸರ್ಪ ನಳರಾಜ ಕಾಡಗಿಚ್ಚು ಬಂತು. ನನ್ನ ಹೊಳೆಯ ದಾಂಟಿಸೆನಲು ಆಚೆಗೆ ಕೊಂಡು ಹೋಗಲು ಆ ಸರ್ಪ ನನ್ನ ದಂತದ ಮೇಲೆ ಬೆರಳ ಮಡಗು, ನಿನ್ನ ಕಾಂತಿ ಕುಂದಿತ್ತು ನಿರುಗಬಹುದೆನಲು ಹಾಗೆ ಮಾಡೆ ಅವಂ ತಿರುಗಿ ಹೋಗಿ ಅಲ್ಲಿ ಒಬ್ಬನ ಕೂಡೆ ರಥವ ನಡಿಸಬಲ್ಲೆನೆನಲು ಆಗ ಋತುಪರ್ಣ ಸಂಬಳವ ಮಾಡಿ ನಳನ ಇಟ್ಟುಕೊಂಡಿರಲು ಆಗ ಮರಳಿ ದಮಯಂತಿಯ ಸ್ವಯಂವರಕೆಂದು ಋತುಪರ್ಣಗೆ ಹೇಳಿ ಕಳುಹಲು ರಥವನೇರಿ ಹೋ ಎಂದರೆ ನೂರು ಗಾವುದವ ಹೋಯಿತ್ತು. ಆಗ ಋತುಪರ್ಣನ ರಥವು ಬೇಗ ನಡೆಯಿತ್ತು. ನೀನಾರು ಎನಲು ಅವ ಸುಮ್ಮನಿರಲು ಕತ್ತಿಯ ಕಿತ್ತು ಹೊಯ್ವಾಗ ಮೈಯ್ಯೊಳಗಿದ್ದ ಕಲಿ ದ್ವಾಪಾರಗಳು ಹೊಗಳಲು ಮೊದಲ ಕಾಂತಿಯಾಯಿತ್ತು. ಆಗ ರಥವ ನಡಿಸುವುದ ನನಗೆ ಕಲಿಸಿದರೆ ನಾ ನಿನಗೆ ಪಗಡೆ ಕಲಿಸಿಹೆನೆನಲು ಅದಕ್ಕೆ ಒಡಂಬಟ್ಟು ಕಲಿಸಲು ಆಗ ನಳನ ರಥದೊಳಗೆ ಕುಳ್ಳಿರಿಸಿ ಋತಪರ್ಣ ಸಾರಥಿಯಾಗಿ ಕೌಂಡಿಲ್ಯಗೆ ಹೋಗಿಳಿಯಲು ಬಳಿಕ ಭೀಮರಾಜ ಬಂದರಸುಗಳಿಗೆ ಸೋಪಸ್ಕರಗಳ ಕೊಡಿಸಿ ನಮ್ಮ ಕೇಳಿದಲ್ಲದೆ ಬೆಂಕಿಯ ಹೊತ್ತಿಸಬೇಡವೆನಲು ಆಗ ನಳನು ಬೆಂಕಿ ಇಲ್ಲದೆ ಅಡಿಗೆಯ ಮಾಡಿ ಒಬ್ಬ ಬಡಿವೆಗೆ ಇಕ್ಕಲು ಆಕೆ ಹೊಗೆಯಲ್ಲಿಯೂ ಬೋನವಿಲ್ಲದೊಂದು ಠಾವಿನಲ್ಲಿ ದೊರಕಿತೆನಲು ಅವ ನಳನೆಂದು ತಿಳಿದು ಭೀಮರಾಜ ದಮಯಂತಿಯ ಕೂಡಿಸಿ ಇಬ್ಬರನು ಅವರೂರಿಗೆ ಕಳುಹಿಸಿದನು. ಆಗ ತನ್ನೂರ ಬೀದಿ

ಯಲ್ಲಿ ಹೋಗುವಾಗ ಬಡಗಿವಾಚಲದೇವಿಯು ಕಂಡು ಈಕೆಯು ಮದುವೆಯಾಗಬೇಕು, ಕ್ಷತ್ರಿಯ ಕುಲವ ಮಾಡಬಹುದೆ ಎಂದು ಹಾರುವರ ಕೇಳಲು ಚಿನ್ನದ ಗೋವು ಮಾಡಿ ಬಾಯಲ್ಲಿ ಹೊಗಿಸಿ ಪೃಷ್ಠದಲ್ಲಿ ಹೊರಡಿಸಿ ಆ ಗೋವ ಬ್ರಾಹ್ಮಣರಿಗೆ ಕೊಡಲು ಕ್ಷತ್ರಿಯಳಾದಾಳೆನಲು ಹಾಗೆ ಮಾಡಿಸಿ ಕೊಡಲು ಅದ ಕಡಿದು ಹಂಚಿಕೊಂಬಾತ ಹೊಲೆಯರು ಸತ್ತಗೊವು ನಮ್ಮದು, ನಿಮಗೆ ಸಲ್ಲದೆನಲು ಚಿನ್ನದ ಗೋವು, ನಿಮಗೆ ಸಲ್ಲದೆಂದು ಹೊಲಯರ ಕೂಡೆ ಹೋರಿಯಾಡುವ ಹಾರುವರ ಮಾತ ಕೇಳಬಹುದೆ ಎಂದು ಬಸವೇಶ್ವರನು ಬಿಜ್ಜಳನ ಕೂಡೆ ಹೇಳಿದರು.

---

## ೬೨ ನೆಯ ವಚನದ ಕಥೆ. (೮೮--೬೨)

ಕಾಳಿಂದಿ ಎಂಬ ನದಿಯಲ್ಲಿ ಹುಟ್ಟಿದ ಸತ್ಯವತಿ ತಾನೆ ಮತ್ಸ್ಯಗಂಧಿ ಎಂಬಾಕೆಯೆ ತಾಯಿ ಪರಾಶಮುನಿ ತಂದೆ, ವೇದವ್ಯಾಸನೆ ಮಗನು. ಪಾರಾಶು ಕೈವಾಲ್ಯ ಭಾರ್ಯೆ ತಸ್ಯಪುತ್ರ ವೇಷ ಋಷಿಃ ತಪಸಾ ಜ್ಯಾಯತೆ ವಿಪ್ರ ತಸ್ಯಜಾತಿಭೇದಂ ನ ಕಾರಯೆತ್ ॥೫॥ ಮಾರ್ಕಂಡೇಯನೆಂಬ ಮುನಿ ಮಾತಂಗಿ ಗರ್ಭ ಸಂಭೂತ್ವಾ ತಪಸಂ ಜಾಯತೆ ವಿಪ್ರ ತಸ್ಯ ಜಾತಿ ಭೇದಂ ನ ಕಾರಯೆತ" ರಜತಾದ್ರಿಯ ಪೂರ್ವದಿಕ್ಕಿನ ನದಿಯ ಸಮೀಪದಲ್ಲಿ ಶಿವಾನಂದ ಋಷಿಯು ತಪವ ಮಾಡುತ್ತಿರಲು ಅಲ್ಲಿಗೆ ಸ್ವರ್ಗಲೋಕದ ವೇಶ್ಯಾಂಗನೆ ಜಲಕ್ರೀಡೆಗೆ ಬರಲು ಅವಳ ಲಾವಣ್ಯವಂ ಕಂಡು ಕಾಮಾತುರದಿಂ ಪಿಡಿಯಲು ಅವಳು ಒಡಂಬಡದಿರೆ ಆ ಋಷಿಯ ರೇತಸ್ಸು ಸ್ಖಲಿತವಾಗಿ ನದಿಯಲ್ಲಿ ಬೀಳಲು ಮಂಡುಕ ನುಂಗಲು ಆ ಮಂಡುಕನ ಗರ್ಭದಲ್ಲಿ ಮಂಡೋದರಿ ಜನಿಸಿದಳು. ಆ ಋಷಿಯು ಶಿವನ ಬಳಿಗೆ ಬಂದು ದೀರ್ಘದಂಡ ನಮಸ್ಕಾರವಂ ಮಾಡಿ ಈ ಮಂಡೋದರಿಯಿಂದ ಸೇವೋಪಚಾರವ ಕೈಕೊಂಬುದೆಂದು ಬಿನ್ನೈಸಿ ಹೋದನು. ಇತ್ತ ಕೆಲವು ಕಲ್ಪಾಂತರ ಪರಿಚಾರಿಕೆಯಾಗಿ ಸೇವೋಪಚಾರಂಗಳಂ ಮಾಡುತ್ತಿರಲು ಇತ್ತ ರಾವಣ ಗಾನವಿದ್ಯೆ ತಪವಂ ಮಾಡಿ ಶಿವನ ಮೆಚ್ಚಿಸಿಕೊಂಡು ಮಂಡೋದರಿಯ ಬೇಡಿಕೊಳ್ಳಲು ರಾಮನಿಂದ ಎನ್ನ ಕುಲ ನಾಶವಾಗುತ್ತದೆ ಎಂದು ಮಂಡೋದರಿ ದೇವರ ಸ್ತೋತ್ರವಂ ಮಾಡಿ ಎನ್ನ ಕುಲವರ್ಧನವಪ್ಪಂತೆ ವರವೀವುದೆನಲು ನಿನ್ನ ಗರ್ಭದಲ್ಲಿ ಜನಿಸಿದ ಪುತ್ರನು ಹನ್ನೆರಡು ಸಾವಿರ ವರುಷ ತಪವಂ ಮಾಡೆ



ನಿನ್ನ ಕುಲ ವರ್ಧನವಾದೀತು. ಎನ್ನ ಮರೆದು ಮದೋನ್ಮತ್ತನಾದ ಕಾಲಕ್ಕೆ ಕುಲ ನಾಶವಾದೀತೆಂದು ಶಿವನು ವರವಿತ್ತನು. ಬಾಹ್ಯದಲ್ಲಿ ತಪವಂ ಮಾಡೆ ರಾಮನಿಂದ ಕಂಟಕ ಬಂದಿತ್ತೆಂದು ಮಂಡೋದರಿಯ ಗರ್ಭದಲ್ಲಿ ಏಳುನೂರು ವರುಷ ತಪವಂ ಮಾಡಿ ಇಂದ್ರಜಿತು ವರವಂ ಪಡೆದು ಆತನ ಮೇಲೆ ಎನ್ನ ಪರಾಕ್ರಮ ನಡೆಯದೆಂದು ರಾಮಬಾಣ ರಾಮನ ಕೂಡೆ ಹೇಳಿತ್ತು. ಮಿತ್ರಾವರುಣ ರಂಭೆಯ ಕೂಡಲು ಅಗಸ್ತ್ಯ ಜನಿಸಿದನು. ಅತ್ರಿಮುನಿ ಅನುಸೂಯಾದೇವಿಯರಿಗೆ ದೂರ್ವಾಸ ಪುಟ್ಟಿದನು. ಗ್ರಂಥ॥ ಶ್ವಪಚೋಪಿ ಮುನಿಶ್ರೇಷ್ಠೋ ಶಿವಭಕ್ತದ್ವಿಜಾಧಿಕಃ। ಶಿವಭಕ್ತಿವಿಹೀನಶ್ಚ ದ್ವಿಜೋಪಿ ಶ್ವಪಚಾಧಮಃ ॥೬॥

---

## ೬೩ ನೆಯ ವಚನದ ಕಥೆ. (೮೯--೬೩)

### ಜಗದೇವ.

ಜಗದೇವನು ಬಸವೇಶ್ವರನಿಗೆ ಭಿಕ್ಷವ ಮಾಡಿಹೆನೆಂದು ವಿಭೂತಿ ವೀಳೆಯವ ಕೊಟ್ಟು ವಿಪ್ರರ ಕಾಲ್ತೊಳೆದುದುಕವ ಮಂಡೆಯ ಮೇಲೆ ತಳೆದು ಬಂದು ಬಸವೇಶ್ವರನ ಚಿತ್ತೈಸೆನೆ, ಬಾರದೆ ಎಲೆ ಜಗದೇವ ಕೇಳು, ಏಲೇಶ್ವರದ ಕೇತಯ್ಯಗಳು ಹುರಿದ ಬೀಜವ ಬಿತ್ತಿ ಬೆಳೆದರು. ಇಳಿಹಾಳ ಬ್ರಹ್ಮಯ್ಯನು ಬೀಜವಿಲ್ಲದೆ ಬೆಳೆದರು. ಮತ್ತಂ, ಏಲೇಶ್ವರದ ಕೇತಯ್ಯನು ಪಶುಗಳು ಸೀಮೋಲ್ಲಂಘನೆಯಾದವೆಂದು ಬಿಡೆ ಆಹಾರವ ಕೊಳ್ಳದಿರಲು ಮರಳಿ ಕೂಡಿಕೊಳ್ಳೆ ಲಿಂಗ ದರ್ಶನ ಸ್ಪರ್ಶನವ ಮಾಡಿ ಆಹಾರಂಗೊಂಡವು. ಸೌಂದರನಾಚಯ್ಯನ ಸ್ತ್ರೀ ಗರ್ಭಿಣಿಯಾಗಿರೆ ಲಿಂಗವ ಮಡಗಿರೆ ಶಿಶು ಹುಟ್ಟಿ ಮುನ್ನ ಉದಯಿಸಿದುದಕ್ಕೆ ಲಿಂಗವ ಧರಿಸಿ ಕಡೆಯಲುದಿಸಿದುದ ಬಿಟ್ಟುದನರಿಯೇ ಎಂದು ಬಸವೇಶ್ವರನು ನಿರೂಪಿಸಿ ಜಗದೇವನು ಅಪರಾಧವೆಂದು ಸ್ತುತಿಸಿ ಶಿವದ್ರೋಹಿಯ ಕೊಲ್ಲಲು ಪುರಾತನರು ಕೃಪೆಯಾದಹರೆಂದು ಭಾಷೆಯ ಕೊಟ್ಟಿರುತ್ತಿರಲು, ಹರಳಯ್ಯ ಮಧುವಯ್ಯಗಳ ಮೇಲೆ ತಪ್ಪಿಲ್ಲದೆ ಬಿಜ್ಜಳನು ಕಣ್ಣ ಕಳೆಯಿಸಲು, ಬಸವೇಶ್ವರ ದೇವರು ಅವರಿಗೆ ಕಣ್ಣ ಕೊಟ್ಟು, ಎಲೆ ಜಗದೇವ ನಿನಗೆ ಕೊಟ್ಟ

ಭಾಷೆ ಇದೀಗವೆಂದು ಶಿವದ್ರೋಹಿಯ ಕೊಲ್ಲಲು ಎಂದು ಜಗದೇವ ಮೊಲ್ಲೆ ಬೊಮ್ಮಯ್ಯನು ಊಟ ಮಾಡುವಲ್ಲಿ ಜನನಿ ಮೂದಲಿಸೆ ಬಿಜ್ಜಳನ ಕೊಂದು ಶಿವಲೋಕಕ್ಕೆ ಎಯ್ದಿದರು.

---

## ೬೯ ನೇ ವಚನದ ಕಥೆ. (೯೦--೬೯)

ಸಿದ್ಧರಾಮಯ್ಯನು ಮಳೆಯಲ್ಲಿ ಕ್ಷೇತ್ರವ ಪ್ರದಕ್ಷಿಣವ ಮಾಡುತ್ತಿರೆ ಸಿಡಿಲು ಬಂದು ಪಂದಿಪೆನೆಂದು ಬಂದೆರಗೆ ಆಲಗಿಸಿಂದಿರಿಸಿ ಸಿಡಿಲು ಶಿವನ ಸ್ತುತಿಸೆ ಶಿವನು ಶಿದ್ಧರಾಮಯ್ಯಗೆ ಬೇಡವೆಂದು ಹೇಳೆ ಕೃಪೆಯಿಂದ ಸಿಡಿಲ ಬಿಟ್ಟರು. ಎಂದಿನಂದದಿ ಪ್ರದಕ್ಷಿಣ ಬರೆ, ಕೃಷ್ಣಶ್ವಾನ ಪಾದದ ಮೇಲೆ ಬೀಳೆ, ಗುಡ್ಡರು ಇದೇನೆಂದು ಕೇಳೆ ಶಿವನೋಲಗಕ್ಕೆ ಭಾಗವಾನೆಂಬ ಗಾಂಧರ್ವನು ಬಂದು ಶಿವನಿಗೆ ಸಾಷ್ಟಾಂಗ ದಂಡಪ್ರಣತನಾಗುವಲ್ಲಿ ಅಘೋರ ಮುಖದಿಂದುದಿಸಿದ ಉಗ್ರಮುಖ ಗಣೇಶ್ವರನ ಭಾಗವಾನನ ಕಾಲು ಸೋಂಕಲು ಕೃಷ್ಣ ಶ್ವಾನನಾಗೆಂದು ಶಾಪವ ಕೊಟ್ಟ. ವಿಶಾಪವೆಂದಿಗೆನೆ ಸೊನ್ನಲಿಗೆಯಲ್ಲಿ ಮಲ್ಲಿಕಾರ್ಜುನನ ಪ್ರಸಾದವ ಕೊಳ್ಳೆ ವಿಶಾಪವೆನೆ ಬಂದೆನೆಂದು ಹೇಳಿ ಮಲ್ಲಿಕಾರ್ಜುನನ ಧೂಪವ ಆರೋಗಣೆಯ ಮಾಡಿಸುವ ಸಮಯ ಉಘೇ ಎನೆ ನಿಜ ತನುವಿಂದೆ ಉಘೇಕಾಳನೆಂಬ ಪೆಸರಾಗಿ ಕೈಲಾಸಕ್ಕೆ ಹೋದನು. ಶುನಕನ ಶ್ರವವನಿಕ್ಷೇಪಿಸಿ ಸಿದ್ಧರಾಮಯ್ಯನು ಸುಖದಿಂದಿರೆ.

---

## ೭೮ ನೆಯ ವಚನದ ಕಥೆ. (೯೧--೭೮)

ಶ್ವಪಚಯ್ಯನು ಏಕಾಂತಾಶ್ರಮದಲ್ಲಿ ಪಾಕವ ಮಾಡುತ್ತಿದ್ದು ಸಾಮವೇದಿಗಳ ಕಂಡು ಪಾದರಕ್ಷೆಯ ಮುಚ್ಚೆ ಆತನು ನಿಂದಿಸಿ ಖೇಚರತ್ವ ವಳಿಯಲು ಶ್ವಪಚಯ್ಯನಿಂದ ಉಪದೇಶವ ಪಡೆದು ಛತ್ತೀಸಪುರವ ಕೈಲಾಸಕೆಯ್ದಿಸಿದರು. ಈಶ್ವರೋವಾಚ ॥ಗ್ರಂಥ॥ ಭವಿಪಾಕ ನ ಕರ್ತವ್ಯಂ ಲಿಂಗನೈವೆದ್ಯಂ ಕಿಲ್ಬಿಷಂ ಭಕ್ತ ಪಾಕ ವಿಪತ್ರಾನ್ನಂ ಲಿಂಗ ನೈವೇದ್ಯಮುತ್ತಮಂ.

---



## ೭೭ ನೆಯ ವಚನದ ಕಥೆ. (೯೧--೭೭)

ಶಿವಚಿತ್ತರು ತರ್ಕೈಸಿದ ಒಂದು ಲಕ್ಷ ವಿಪ್ರರನು ಶಿವಭಕ್ತರ ಪಾದರಕ್ಷೆಯನು ತೂಗಲು ಪಾದರಕ್ಷೆಗೆ ಸಮಾನವಾಗದಾದರು. ಪಾಶದಿವರು ಓಷಧೀ ಪ್ರಸ್ತಪುರದಲ್ಲಿ ಗಿರಿಜಾವಿವಾಹದ ಸಂಭ್ರಮಕ್ಕೆ ಅಗಸ್ತ್ಯ ಋಷೀಶ್ವರನು ಬರುವುದಕ್ಕೆ ದಕ್ಷಿಣದ ಪೃಥ್ವಿ ಏಳಲು ತಮ್ಮ ಚಮ್ಮಾವುಗೆಯ ಮಡಗಲು ಪೃಥ್ವಿ ನಿಂದಿತ್ತು.

---

## ೯೪ ನೆಯ ವಚನದ ಕಥೆ. (೯೪--೯೪)

### ಸುಕುಮಾರ.

ಕುತಾರದೇಶದಲ್ಲಿ ವೀರಾವತಿ ಎಂಬ ನದೀತೀರದಲ್ಲಿ ಕೌಂಡಿಲ್ಯಪುರವಿಹುದು. ಅಲ್ಲಿ ಪರಪುರಂಜಯನೆಂಬ ರಾಜನ ಮಂತ್ರಿಯ ಮಗ ಸುಕುಮಾರನು ಪರಸ್ತ್ರೀಯರ ಬಲುಮೆಯಿಂದ ಸಂಗವ ಮಾಡುತ್ತಿರಲು ಅರಸು ಕೇಳಿ ನಿನ್ನ ಮಗನಿಗೆ ಶಿಕ್ಷೆಯ ಮಾಡಲೋ ಬುದ್ಧಿಯ ಹೇಳಿಯೋ ಎನಲು ಅವನು ಹೆದರಿ ಕಿರಾತದೇಶಕ್ಕೆ ಹೋಗಿ ನೀರಡಿಸಿ ಕೊಳನ ಬಳಿಗೆ ಹೋಗಲು ಅಲ್ಲಿ ಒಬ್ಬ ಹೊಲತಿ ಸೂತಕವಾಗಿ ನಾಲ್ಕನೆಯ ದಿನದಲ್ಲಿ ಸ್ನಾನವ ಮಾಡಿ ನಿಂತಿರಲು ಕಂಡು ಸುಕುಮಾರನು ಸಂಭೋಗಕ್ಕೆ ಕರೆಯಲು ಒಲ್ಲೆನೆನಲು ಬಲುಮೆಯಿಂದ ಕ್ರೀಡಿಸಿಟ್ಟುಕೊಂಡಿರಲು, ಬಳಿಕ ಪಂಚಮಹಾಪಾತಕ ಪುಟ್ಟಿದಂತೆ ಐವರು ಮಕ್ಕಳ ಪುಟ್ಟಿಸಿ ಅವಳು ಸತ್ತುಹೋಗಲು ಮತ್ತೆ ಐವರು ಹೆಣ್ಣುಮಕ್ಕಳನೆ ಹೆಂಡಿರುಮಾಡಿ ಆಳಲು ಶ್ವಪಚರು ನೀ ಪಾಪಿ ನಮ್ಮ ಕೇರಿಯಲ್ಲಿರಬೇಡವೆಂದು ಹೊರಡಿಸಲು ಮಾದಿಗರ ನೆರೆಯಲ್ಲಿರುತ್ತ ಒಂದು ದಿನ ಮಾದಿಗರ ಕೂಡಿಕೊಂಡು ಕಳವಿಗೆ ಹೋಗಲು ಅವರೊಳಗೆ ಒಬ್ಬ ಸಿಕ್ಕು ಎಲ್ಲರ ಮೇಲೆ ಹೇಳಿಹನೆಂದು ಕಿರಾತದೇಶದ ವಾಣಿಜ್ಯಪುರಕೆ ಹೆಂಡರು ಸಹವಾಗಿ ಹೋಗಿ ಸುಕುಮಾರ ಗವಿಯೊಳಗಿರಲು ಅಲ್ಲಿ ಲಿಂಗಪೂಜೆಗೆ ಎಲ್ಲರು ಬರುತ್ತಿರಲು ಅವರು ಮಾಡುವ ಲಿಂಗಪೂಜೆಯ ಕಂಡು ಕಳವ ಮರೆತು ತನ್ನ ಹೆಂಡಿರು ತಳುವಾಯಿತೆಂದಾರೆಂದು ಲಿಂಗವ ನೋಡುತ್ತ ಹಿಮ್ಮರಿಗೆಯಲ್ಲಿ ಬರುತ್ತ ಹಳ್ಳವ ಬಿದ್ದು ಸಾಯಲು ಯಮದೂತರು ಕೊಂಡುಹೋಗುತ್ತಿರಲು

ಶಿವದೂತರು ಬಂದು ಲಿಂಗದ ದರ್ಶನವಾದನು. ನಿನಗೇನು ಕಾರಣವೆಂದು ತಾವು ಕೈಲಾಸಕ್ಕೆ ಒಯ್ಯಲು ಶಿವನು ಆ ಸುಕುಮಾರನಿಗೆ ಗಣಪದವಿಯ ಕೊಟ್ಟರು.

---

## ೯೬ ನೆಯ ವಚನದ ಕಥೆ. (೯೪—೯೬)

### ರಾಮ

ರಾವಣನ ಬಾಧೆಗೆ ದೇವತೆಗಳು ಬಂದು ನಾರಾಯಣಂಗೆ ಮೊರೆ ಇಡಲು ಆ ನಾರಾಯಣನು ರಾಮಾವತಾರದಿಂದ ದಶರಥನುವರದಲ್ಲಿ ಜನಿಸಿ ಮಲತಾಯಿಯ ಕೃತಕದಿಂದ ವನಪ್ರವೇಶವಾದಲ್ಲಿ ಆ ರಾಮಲಕ್ಷ್ಮಣರಿದ್ದ ಆರಣ್ಯಕ್ಕೆ ರಾವಣನ ತಂಗಿಯಾದ ಶೂರ್ಪಣಖಿಯು ಬಂದು ಮೋಹಿಸಿ ರಾಮ ಲಕ್ಷ್ಮಣರನು ಕೂಡೆನಲಾಗಿ ಒಲ್ಲದೆ ಹೋದರು. ಅವಳು ನೊಂದು ರಾಕ್ಷಸ ಕೃತ್ಯವ ತೋರಲಾಗಿ ನಾಶಿಕಚ್ಛೇದನವಂ ಮಾಡಿದರು. ಆಕೆ ಖರ ದೂಷಣ ತ್ರಿಶಿರಗೆ ಮೊರೆ ಇಡಲು ಅವರೀ ರಾಮನ ಮೇಲೆ ದಂಡೇಳಲವರನಾ ರಾಮ ಸಂಹರಿಸಲಲ್ಲಿಂದ ತಮ್ಮಣ್ಣಗೆ ನಿನಗೆಂದು ಒಂದು ಹೆಣ್ಣಾದ ಸೀತೆಯುರುವನಿಕ್ಕಿ ತನಗೆ ವಿಧಿಯಾಯಿತ್ತೆಂದು ಹೇಳಲಾಗಿ ಆ ರಾವಣನು ತಮ್ಮ ಮಾವನಾದ ಮರೀಚನಿಗೆ ಬಂದು ಮರೀಚ ಮೃಗವಾಗಲು ಸೀತೆಗೆ ಪ್ರೀತಿದೋರಿ ರಾಮನಾ ಮೃಗನ ತಂದುಕೊಡೆನಲಾಕೆಗೆ ಲಕ್ಷ್ಮಣ ಕಾವಲಿಟ್ಟು ತಾನಾಮೃಗದ ಬೆಂಬತ್ತಲದರ ಕೃತಕವ ಕಂಡೆಸೆಯಲದು ಲಕ್ಷ್ಮಣನ ನೆನೆದು ಪ್ರಾಣವ ಬಿಡಲು, ರಾಮನಳಿದನೆಂಬ ಚಿಂತೆದೋರಿ, ಸೀತೆಯ ಬಿಟ್ಟು ಲಕ್ಷ್ಮಣನು ಅಣ್ಣನೆಡೆಗೆಯ್ದಲ್ಲಿ ಇತ್ತಲೀ ರಾವಣ ಕಪಟಭಿಕ್ಷಾರ್ಥಿಯಾಗಿ ಸೀತೆಯ ನೊಯ್ವಾಗ ಜಟಾಯುವನು ಜಯಿಸಿ ಲಂಕೆಯ ಹೊಕ್ಕನು. ಇತ್ತ ರಾಮ ಸೀತಾ ವಿಯೋಗದಲ್ಲಿ ಜಟಾಯುವ ಕಂಡು ಹನುಮಂತನಿಂದ ಸುಗ್ರೀವರಿಗೆ ಅಭಯುವನು ಕೊಟ್ಟು ವಾಲಿಯ ನೆಚ್ಚು ಕೊಂದು ಸುಗ್ರೀವನ ಹೆಂಡತಿಯ ಬಿಡಿಸಿ ಪಟ್ಟವ ಕಟ್ಟಿ ಅಲ್ಲಿಂದ ಹನುಮನ ಲಂಕೆಗೆ ಕಳುಹಿಅವನು ಆ ಲಂಕೆಯನು ಸುಟ್ಟು ಮುದ್ರಿಕೆಯನು ಸೀತೆಗೊಪ್ಪಿಸಿದ ಮೇಲೆ ವಿಭೀಷಣ ಬರಲಿಟ್ಟುಕೊಂಡು ಅಲ್ಲಿಂದ ಹನುಮ ನೀಲ ಸುಗ್ರೀವ ಅಜ ನಳ ಜಾಂಬುವ ಮುಖ್ಯವಾದ ಎಪ್ಪತ್ತೇಳು ಕೋಟಿ ಕಪಿಯ ನಾಯಕ



ಬಲಗೂಡಿ ನಾಲ್ಕು ದಿನಕ್ಕೆ ಸಮುದ್ರವನು ಸೇತುವೆಗಟ್ಟಿ ಆರು ದಿನಕ್ಕೆ ದಾಂಟಿ ಲಂಕಾಪುರವ ಮುತ್ತಿ ಆ ರಾವಣನ ಛತ್ರಭಂಗವ ಮಾಡಿ ಅಂಗಜನ ಸಂಧಾನಕ್ಕೆ ಕಳುಹಲು ಆ ಸಂಧಾನ ಮುರಿದು ಸಮರವಾದಲ್ಲಿ ಮಿತ್ರಘ್ನ ಧೂಮ್ರಾಕ್ಷ ವಜ್ರದಂಷ್ಟ್ರ ಆಕಂಪನ ದೇವತೆಗಳು ಅಗಣಿತ ಬಲವಾರುದಿನ ಕಳಿದರಾ ಮೇಲೆ ರಾವಣನು ಯುದ್ಧದಲ್ಲಿ ಮಾನಭಂಗವಾಗಿ ಹೋಗೆ ಆ ಮೇಲೆ ಕುಂಭಕರ್ಣನ ನೆಬ್ಬಿಸಲು ಅವನು ರಾಮನ ಬಾಣದಿಂದಳಿದ. ಆನಂತರದಲ್ಲಿ ನರಾಂತಕ ದೇವಾಂತಕ ತ್ರಿಶೀಕರ ಮದೋನ್ಮತ್ತರೆಂಬ ನಾಲ್ವರು ಕುಮಾರರು ಮಹೋದರನೆಂಬ ಪ್ರಧಾನಿ ಸಹಿತ ಅಪರಮಿತ ಬಲವಳಿಯಿತ್ತು. ಅಲ್ಲಿಂದ ಅತಿಕಾಯನೆಂಬ ಮಗನಗಣಿತ ಸೇನೆ ಮಡಿಯಿತ್ತು. ಇಂದ್ರಜಿತುವೆಂಬ ಕುಮಾರ ಮಾರಣ ಯಜ್ಞವ ಮಾಡಿ ಬ್ರಹ್ಮಾಸ್ತ್ರದಿಂದ ರಾಮ ಲಕ್ಷ್ಮಣ ಮುಖ್ಯವಾದ ಎಪ್ಪತ್ತೇಳು ಕೋಟಿ ಕಪಿ ನಾಯಕರನು ಕೊಂದನು. ಹನುಮಂತ ಜಾಂಬವ ವಿಭೀಷಣರುಳಿದರು. ಹನುಮಂತನಿಂದ ಸಂಜೀವನವ ತರಿಸಿ ರಾಮ ಲಕ್ಷ್ಮಣ ಮೊದಲಾದ ಬಲವನೆಬ್ಬಿಸಿದರು. ಆ ಮೇಲೆ ಕುಂಭ ನಿಕುಂಭ ಶ್ರೋಣಿತಾಕ್ಷ ಇಂದ್ರಜಿತು ಸುಪರ್ಶನೆಂಬ ಪ್ರಧಾನ ರಾಮ ಲಕ್ಷ್ಮಣ ಕಡೆ ಹುಟ್ಟಿ ನಮಗೆ ವಿರೂಪಾಕ್ಷ ಮೊದಲಾದ ಚತುರಂಗ ಮಾರ್ಬಲವಳಿದ ಮೇಲೆ ರಾವಣನು ಅತಿ ಕೋಪೋದ್ರೇಕದಿಂದ ಕಾದುತ್ತಿರಲಾ ಸಮಯದಲ್ಲಿ ವಿಭೀಷಣನಿಂದಾತನ ಆಯುವಿನ ಮರ್ಮವ ಕೇಳಿ ಬ್ರಹ್ಮ ವಿಷ್ಣು ರುದ್ರ ಮಂತ್ರಸಮೇತ ಬಾಣದಿಯವನ ಎದೆಯ ನೆಸೆಯಲು ಆ ವಿಭೀಷಣನಿಗೆ ಶೋಕ ಪುಟ್ಟಲು ಅದ ಪ್ರಹರಿಸಿ ವಿಭೀಷಣಗೆ ಲಂಕಾಪುರದಲ್ಲಿ ಸ್ಥಿರಪಟ್ಟವ ಕಟ್ಟಿದರು.

---

## ೯೭ ನೆಯ ವಚನದ ಕಥೆ. (೯೪—೯೭)

### ಖಚರ

ಸಿಂಹಕಂದರವೆಂಬ ನಗರ ಖಚರನೆಂಬ ರಾಜ ಆತನು ತನ್ನ ಸುತೆ ಅಮೃತಮತಿಗೆ ಭ್ರಮಿಸಿ ಕೂಡಬಹುದೆ ಎಂದು ವಿಪ್ರರ ಕೇಳೆ ತಾ ಬಿತ್ತಿ ಬೆಳೆದ ಫಲವನುಣ್ಣಬಹುದು ಎನೆ ಖಚರನು ಸುತೆಯ ತುಡುಕಿ ಹಿಡಿಯಲು ಓಡಿ ಬಂದು ಲಿಂಗದ ಗರ್ಭವ ಹೊಗಲು ಬೆಂಬತ್ತಿ ಬಂದು ಖಡ್ಗದಿಂದ ಹೊಯ್ಯಲು ಅಸ್ತಿಲಾಪುರ ಮಜ್ಜಲಾಪುರ ಶಿಖೇಶಲಾಪುರ ರೋಹಿತಾಪುರವೆಂಬ ನಾಲ್ಕು ಆದವು.

## ದಾಸಯ್ಯ.

ಹೊಟ್ಟಲಕೆರೆ ಎಂಬ ಪುರದಲ್ಲಿ ಸುಗ್ಗಲದೇವಿಯರು ದೇಸಿಂಗ ರಾಯನ ಮದುವೆಯಾಗಲು ಅಂಗ ಲಿಂಗವ ಧರಿಸದೆ ಇರಲು ಈಕೆ ಬೇರೊಂದು ಮನೆಯಲ್ಲಿ ಜಂಗಮಾರ್ಚನೆಯ ಮಾಡುತ್ತಿರಲು ಒಂದು ದಿನ ಅರಸು ನಮ್ಮ ಗುರುಗಳನೇಕೆ ಪೂಜಿಸೆ ಎನಲು ಅದಕ್ಕೆ ಸುಗ್ಗಲಿ ನಮ್ಮ ಗುರುವ ವಾದದಿಂದ ಸೋಲಿಸ್ಸಿದರೆ ಮನ್ನಿಸಿಹೆನೆಂದು ದಾಸ ಯ್ಯನ ಕರಸಿ ಅರಸನ ಸಭೆಯಲ್ಲಿ ಉನ್ನತಾಸನದಲ್ಲಿ ಮೂರ್ತವ ಮಾಡಿಸಿ ರಲು ಜೈನರು ಬಂದು ದಾಸಯ್ಯಗಳೆ ನಿಮ್ಮ ರಾಮನಾಥ ಸರ್ವಗತ ನಹುದೇ ಎನಲು ಅಲ್ಲದಿದ್ದರೆ ಈ ಚರಾಚರಕೆ ಚೈತನ್ಯವೆಲ್ಲಿಯದೆನಲು ಹಾಗಾದರೆ ಮಲಮೂತ್ರಗಳನ್ನೆಲ್ಲಿ ಬಿಡುವಿರೆನಲು ಅದಕ್ಕೆ ಇಂಬ ತೋರಿಹೆ ವೆಂದು ಒಬ್ಬ ಜೈನನ ಕರೆದು ನಿನ್ನ ಜಿಹ್ವೆಯಲ್ಲಿ ಶಿವನುಂಟೇ ಎನಲು ಅವ ಇಲ್ಲವೆನಲು ಹಾಗಾಗಲೆನಲು ಅಲ್ಲಿ ಮಲಮೂತ್ರಗಳ ಬಿಡುವೆವು ಎಂದು ದಾಸಯ್ಯ ನುಡಿಯಲು ಮತ್ತೆ ಜೈನರು ನಮ್ಮ ಜಿನೇಶ್ವರನೂ ಸರ್ವಗತನೆಂದು ಈ ಮರದೊಳಗೆ ನುಡಿಸಿಹೆವೆನಲು ಹಾಗಗಲೆನಲು ಒಬ್ಬ ಹುಡುಗನ ಮರದ ಹೊಟ್ಟೆಯಲ್ಲಿಟ್ಟು ಎಲೇ ಜಿನೇಶ್ವರನೇ ನೀನು ಸರ್ವ ಗತನಾದರೆ ನುಡಿ ಎನಲು ಆ ಹುಡುಗ ಸತ್ತು ಸುಮ್ಮನಿರಲು ಅವನ ತಾಯಿ ಬಂದು ದಾಸಯ್ಯಗೆ ನಮಸ್ಕರಿಸಿ ಅವರ ವಾದ ಹಾಳಾಗಲಿ ನನ್ನ ಮಗನ ಪ್ರಾಣವ ಕೊಡಿ, ಎಂದು ಪಡೆದುಕೊಂಡು ಹೋಗಲು ಮತ್ತೆ ಜೈನರು ಈತನ ಕೊಲ್ಲಬೇಕೆಂದು ಕೊಡದೊಳಗೆ ಸರ್ಪನ ಹಾಕಿ ಇಲ್ಲಿ ನಿಮ್ಮ ಶಿವನಿದ್ದಾನೇ ಎನಲು ಇಲ್ಲಿ ಶಿವನ ತೋರಿ ನಿಮ್ಮ ಸಂಹಾ ರವ ಮಾಡದೆ ಬಿಡೆವೆಂದು ಹಸ್ತವ ಮಡಗಿ ಆ ಸರ್ಪನ ಸ್ಫಟಿಕದ ಲಿಂಗವ ಮಾಡಿ ಅದಕೆ ಉತ್ತರನಾಥನೆಂದು ಹೆಸರಿಟ್ಟು ಏಳುನೂರು ಬಸದಿಗಳನೊಡೆದು ಲಿಂಗಗಳ ನಿಲಿಸಿ ದೇಸಿಂಗರಾಯಗೆ ಲಿಂಗವ ಧರಿಸಿ ತಮ್ಮ ಊರಿಗೆ ಹೋಗಲು ಇವರು ಸುಖದಲ್ಲಿದ್ದು ಶಿವನ ಕೃಪೆಯ ಪಡೆದರು.

## ಅಣುಪುರ ಸಿದ್ಧಯೋಗಿ.

ಅಣುಪುರಸಿದ್ಧಯೋಗಿ ಲಿಂಗದಿಂ ಪರುಷವ ಪಡೆದಿರೆ ಅವರ ಗೃಹಕ್ಕೆ ವಿನಾಶಕ್ತಿರಾಯ ಬಂದು ಪರುಷವ ಬೇಡಲು ಲಿಂಗದ ಪೀಠದಲ್ಲಿ ಮಡಗಿ ಹುಲ್ಲೆಯ ಶರೀರದಲ್ಲಿ ಪ್ರವೇಶವಾಗೆ ಲಿಂಗವು ಪರುಷವ ನುಂಗಲು



ಘಾಸಿಮಾಡಿದ ಪಾಪಕ್ಕೆ ಭೋಜನ ಹುಳುಗುಪ್ಪಿಯಾಗುತ್ತಿರೆ ಕೆಲವು ದಿನವಿರೆ ಓರ್ವ ಬಂಟನು ಬೇಂಟೆಯಲ್ಲಿ ಪರಕಾಯವೇಷದ ಹುಲ್ಲೆಯ ನೆಸೆವುತ್ತಿರೆ ಶಿಶುವಿಗೆ ಮೊಲೆಗೊಟ್ಟು ಬಂದಿಹೆನೆನೆ ಬಾರದಿದ್ದರೆ ಏನು ಎನೆ ವಿನಾಶಕ್ತರಾಯನು ಮಾಡಿದ ಪಾಪಕ್ಕೆ ಹೋಗುವೆನೆನೆ, ಬಿಟ್ಟು ರಾಜನ ಕೂಡೆ ಹೇಳೆ, ಹುಲ್ಲೆಯುಪದೇಶದಿಂದ ವಿನಾಶಕ್ತರಾಯನು ಮಕರಭೋಜನವಾಗಿ ಅಸ್ತಿಮಾತ್ರದಿಂ ಶಿವಧ್ಯಾನದಲ್ಲಿರೆ ಶಿವಕೃಪೆಯಾ ಯಿತ್ತು.

---

## ೯೮ ನೆಯ ವಚನದ ಕಥೆ. (೯೫—೯೮)

### ಚಲದಂಕ ಬಲ್ಲಯ್ಯ.

ಚಾಳೋಕ್ಯರಾಯನು ಒಬ್ಬ ಚರಮೂರ್ತಿಯ ಸತಿಯ ಅಪಹರಿಸಿ ಕೊಂಬ ಸಮಯದಲ್ಲಿ ಆ ಜಂಗಮವು ರಾಜಬೀದಿಗೆಯ್ದಿ ಶೋಕದಿಂದ ಹರಗಣಂಗಳ ಸ್ಮರಿಸೆ ಅನಿತರೊಳು ಚಲದಂಕ ಬಲ್ಲಯ್ಯಗಳೆಂಬ ದಣ್ಣಾ ಯಕರು ಕೇಳಿ ಚಾಳೋಕ್ಯನ ಸಂಹರಿಸಿದರು.

---

## ೧೨೧ ನೆಯ ವಚನದ ಕಥೆ. (೯೮—೧೨೧)

### ಸೋಮುಖ.

ಕುಂಡಿನಿ ಎಂಬ ಪುರದಲ್ಲಿ ಧನಪಾಲನೆಂಬ ವೈಶ್ಯನ ಮಗ ಸೋಮು ಖನು ಮಾಡಬಾರದ ಪಾಪವ ಮಾಡೆ ಚೋರರು ಸಹ ಅರಣ್ಯ ದಲ್ಲಿ ಹಾಳು ದೇಗುಲದಲ್ಲಿ ಧನವ ತೆಗೆದಿಹೆನೆಂದು ಅಗಿವುತ್ತಿರೆ ಬ್ರಹ್ಮ ರಾಕ್ಷಸ ಎರಗೆ ಮೂರ್ಛೆಯಾಗಿ ಬಿದ್ದು ಲಿಂಗದ ಬೆಂಬಳಿಗೆ ಬಂದು ಮಜ್ಜನದ ಬಿಂದುವ ಜಿಹ್ವೆಯಲ್ಲಿ ಆಸ್ವಾದಿಸೆ ಬ್ರಹ್ಮರಾಕ್ಷಸ ಬಿಟ್ಟುಹೋ ಯಿತ್ತು, ಮುಕ್ತಿಯಾಯಿತ್ತು.

---

## ೧೩೮ ನೆಯ ವಚನದ ಕಥೆ. (೯೮—೧೩೮)

### ಪೌಲಸ್ತ್ಯ.

ಪೌಲಸ್ತ್ಯ ಬ್ರಹ್ಮನ ಸ್ತ್ರೀ ಕೈಕಸೆ ಪತಿವ್ರತಾಂಗನೆಯಾಗಿರೆ ಶಿವನು ಒಂದು ದಿನ ಶೌಚಕ್ಕೆ ಹೋಗಿ ನೀರ ತಾರೆನೆ, ಕಾಯುತಿದ್ದೆನೆಂದು

ಲಿಂಗಾಯತ ಸಂಶೋಧನ ಕೇಂದ್ರ
ಅರಿವೇ ಗುರು
ಶಿವಬಸವ ನಗರ
ಬೆಳಗಾವಿ.೧೦
ನಾಗನೂರ ಶ್ರೀ ರುದ್ರಾಕ್ಷಿಮಠ

ಸ್ಯವ ಮಾಡೆ ಆಗ ಅವನು ಆರಣ್ಯಕ್ಕೈಯ್ದಿ ತಪಸ್ಸಿರೆ ಅವನ ಗಡ್ಡದಲ್ಲಿ ದಂಪತಿಗೀಜಗಗಳು ಗೂಡನಿಕ್ಕಿರೆ ಒಂದು ಹೆಣ್ಣು ಹಕ್ಕಿ ಗರ್ಭಿಣಿಯಾಗಿ ತಾವರೆಯ ತಂಡುಲವ ಬಯಸಿ ತನ್ನ ಪುರುಷನಿಗೆ ತಾರೆನಲು ಅದು ಆಕಾಶಕ್ಕೈದಿ ಬೆಳಗು ಪರಿಯಂತರ ಕಮಲದಲ್ಲಿರ್ದು ತಂಡುಲವ ತಂದುಕೊಡಲು ಅದು ಒಲ್ಲೆಂದು ಕೋಪಿಸಲು ನನ್ನಲ್ಲಿ ಜಾರಭಾವ ಉಂಟಾದರೆ ಪೌಲಸ್ತ್ಯ ಬ್ರಹ್ಮ ಮಾಡಿದ ಪಾಪಕ್ಕೆ ಹೋಗುವೆನೆನಲು ನಾ ಮಾಡಿದ ಪಾಪವೇನೆಂದು ಕೇಳಲು ನೀನು ೧೦ ವರುಷ ಸ್ತ್ರೀಯುಗಲಿರ್ದೆ ಇನ್ನು ಆಕೆಯ ಕೂಡು ಹೋಗು ಎನಲು, ಅವನು ಹಾಗೆ ಬಂದು ಕೂಡಲು ದಶಶಿರ ಪುಟ್ಟಿದನು.

### ವಿಶ್ವೇಶ್ವರ.

ಉತ್ತರದೇಶದಲ್ಲಿಯ ಅಂಗಜಪುರದಲ್ಲಿ ವಿಜಯ ಭೂಪಾಲನೆಂಬರಸು ಆತನ ಸತಿ ಸಾವಿತ್ರಾದೇವಿಯ ಮಗ ವಿಶ್ವೇಶ್ವರನು ದುರಾಚಾರದಲ್ಲಿರಲು ಒಂದು ದಿಸ ಸೇವಂತಿಗೆಯ ಪುಷ್ಪ ಸೂಳೆಗೆ ಒಯ್ವಾಗ ಒಂದು ಹೂವು ಅಶುಚಿಯಾದ ಭೂಮಿಯಲ್ಲಿ ಬೀಳಲು ಅದು ಶಿವನಿಗೆ ಸಲ್ಲಲಿ ಎಂದು ಮರಣವಾಗಲು ಅವನ ಯಮದೂತರು ಕರೆದೊಯ್ದು ಪುಣ್ಯಪಾಪವ ವಿಚಾರಿಸಿ ಇವನು ಬಿದ್ದ ಹೂವ ಶಿವನಿಗೆ ಸಲ್ಲಲಿ ಎಂದುದರಿಂದ ಒಂದು ರಾತ್ರೆ ರಂಭೆಯ ಭೋಗ ಉಂಟೆಂದು ಇವನ ಆಕೆಯ ಬಳಿಗೆ ಕಳುಹಲು ಲಿಂಗಪೂಜೆಯ ಮಾಡಿಸಿ ಗಣಪದವಿಯ ನೆಯ್ದಿಸಿದಳು.

---

## ೧೪೧ ನೆಯ ವಚನದ ಕಥೆ. (೧೦೧—೧೪೧)

### ಭದ್ರದತ್ತ

ಪಾಲಂಕಿ ಎಂಬ ಕ್ಷೇತ್ರದಲ್ಲಿ ಭದ್ರದತ್ತನೆಂಬರಸಿನ ಬಳಿಗೆ ಸೀತಾಂಗನೆಂಬ ಮುನಿ ಬಂದು ಭಿಕ್ಷಾ ಎನಲು ಅರಸೆಂದನು, ನೀನು ಮೊದಲ ಜನ್ಮದಲ್ಲಿ ಆರಿಗೆ ಇಕ್ಕಲಿಲ್ಲವು ಅದರಿಂದ ಮನೆಮನೆಗೆ ತಿರುಗುತಿದ್ದೆ ಎನಲು ಅದಕ್ಕೆ ಮುನಿ ನಾವು ಗ್ರಹಸ್ಥರ ಪಾವನವ ಮಾಡುವುದಕ್ಕೆ ಬರುತ್ತಿವಲ್ಲದೆ ಅನ್ನವ ಕಾಣೆವೆ, ನೀನು ಪಾಪಿಯ ಕೂಸಾಗೆಂದು ಶಪಿ



ಸಲು ಆ ಭದ್ರದತ್ತ ಶ್ರೀಶೈಲದಲ್ಲಿ ಬಾಲದೊಡಿಗೆಯ ತೊಟ್ಟುಕೊಂಡು ಕುಳಿತಿರಲು ಶಿಶುವೆಂದೆತ್ತಿಕೊಳ್ಳಲು ಅವರನೆ ನುಂಗುತ್ತಿಹುದು.

---

## ೧೬೦ ನೆಯ ವಚನದ ಕಥೆ. (೧೦೪-೧೬೦)

ಅಯ್ಯನವರು ಅಮ್ಮನವರು ನಮ್ಮ ನಿಮ್ಮ ಭಕ್ತರ ಭಕ್ತಿ ವಿಶ್ವಾಸವ ನೋಡುವೆನೆಂದು ಜಂಗಮಾಕೃತಿಯ ಧರಿಸಿ ಅಮ್ಮನವರ ಭಕ್ತಗೃಹಕ್ಕೈಯ್ದೆ ಅವರು ಅಷ್ಟೈಶ್ವರ್ಯದ ಮರವೆಯಿಂದ ಲೆಕ್ಕಿಸದಿರಲು ಅಲ್ಲಿ ಓರ್ವ ಶಿವನ ಭಕ್ತನು ತನ್ನ ಸತಿ ಸುತರು ಗೋವು ಆಳಿದಿರಲು ಅತ್ಯಂತ ವಿಶ್ವಾಸ ಭಕ್ತಿಯ ಮಾಡಲು ಅವರ ಭಕ್ತಿನಿಷ್ಠೆಗೆ ಶಿವನೊಲಿದನು. ॥ಸಾಕ್ಷಿ॥ ಅಪವಾದಾರ್ಥ ನಾಶಂ ಚ ವಿಯೋಗೇನ ಚ ಬಾಂಧವಾ ರಾಜತೆಮಹಾವೇದೀಮದ್ಭಕ್ತಸ್ಯ ಲಕ್ಷಣಂ ॥೧॥

---

## ೧೬೧ ನೆಯ ವಚನದ ಕಥೆ. (೧೦೫--೧೬೧)

### ಪರೋಕ್ಷರಾಯ

ಅರ್ಜುನನ ಮಗ ಅಭಿಮನ್ಯುವಿನ ಮಗ ಪರೋಕ್ಷರಾಯ ರಾಜ್ಯವಾಳುವಾಗ ಬವಿಷ್ಯತ್ಕಾಲವ ಬಲ್ಲವರು ಈತ ಸರ್ಪ ಕಚ್ಚಿ ಸತ್ತಾನೆನಲು ಆಗ ಮುಂದಾಸನದೊಳಗಿಟ್ಟು ನಡುಗೆರೆಯೊಳಗೆ ತಿಟ್ಟು ಮೇಲೆ ಇರಿಸಲು ಒಬ್ಬ ಮಾಲೆಗಾರರೋಣಿಯೊಳಗೆ ಹೋಗಿ ಪುಷ್ಪದ ಮಾಲೆಯ ಕೊಡುತ್ತ ಒಂದು ಹಾವು ಮೆಕ್ಕೆಯ ಕಾಯ ಅರಸು ಕಯ್ಯಲ್ಲಿ ಹಿಡಿದಿರಲೆ ಎಂದು ಕೊಡಲು, ಇದೇನೆಂದು ಕೇಳಲು ಹಾವು ಮೆಕ್ಕೆಯ ಕಾಯಿ ಎನಲು ಅದ ಕೇಳಿ ಪರೋಕ್ಷರಾಯ ಸತ್ತನು.

---

## ೧೬೨ ನೆಯ ವಚನದ ಕಥೆ. (೧೦೫—೧೬೨)

### ಭೋಜರಾಜ.

ಭಲ್ಲಕಿ ಎಂಬ ಪಟ್ಟಣದಲ್ಲಿ ಮಲ್ಲಿರಾಜನೆಂಬ ಭಕ್ತನಿಹನು. ಆತನ ಸತಿ ಹೆರುವಾಗ ಮುನ್ನೂರು ಜೋಯಿಸರು ಗಳಿಗೆವಟ್ಟಲವನಿಕ್ಕಿರುವಾಗ ಶಿಶುವು ಜನಿಸಿತ್ತು. ಇದು ತಂದೆಗೆ ಒಳಿತಲ್ಲ ಬಿಸುಡಬೇಕೆನಲು

ತೊಟ್ಟಿಲೊಳಗೆ ಮಡಗಿ ಬಿದಿರ ಮೆಳೆಗೆ ಕಟ್ಟಿ ಬರಲು ಮೂರು ತಿಂಗಳ ಮೇಲೆ ಅರಸು ಗೂಡೆಯ ನೋಡಲು ಅಲ್ಲಿ ಈ ಪುಟ್ಟಿದ ಶಿಶು ಕೀರ್ತಿನಂತನಾದಾನೆಂದು ಬರೆದಿರಲು ಆಗ ಕಂಡು ಬಾಗಿಲವರ ಕರೆದು ಶಿಶು ಜನಿಸುವಾಗ ಬಂದಿದ್ದರಾರೆನಲು ಈ ಸಣ್ಣನ ಬಂದಿದ್ದನೆಂದು ತೋರಲು ಎಲೆ ಬಾಲಕಾ ಶಿಶು ಸತ್ತಿತ್ತು ಎಂತೇಕೆ ಬರೆದೆ ಎನಲು ಅದು ಸಾಯಲಿಲ್ಲ ಕೊಂಡು ಬನ್ನಿ ಎನಲು ಆಗ ಪರಿಚಾರಕರು ಹೋಗಿ ತಂದು ಮುಂದಿರಿಸಿ ಇದು ಮೇಲಿದ್ದ ಜೇನು ಗಾಳಿಗೆ ಬಾಯೊಳಗೆ ಬೀಳಲು ಬದುಕಿತೆನಲು ಆಗರಸು ಈ ಪುಣ್ಯವಂತನ ತಂದೆಗೆ ಹೊಲ್ಲಹೆಂದು ಬಿಸಾಡಿಸಿದ ಮುನ್ನೂರ ಹಾರುವರ ಕಲ್ಲಗಾಣಕ್ಕೆ ಹಾಕಿಸುವಾಗ ಬಾಲಕನಾದ ವರರುಚಿ ಎಂದನು. ಅರಸೇ ಗಳಿಗೆ ಬರೆವಾಗ ಚಮತ್ಕಾರ ಇವರಿಗೆ ತಿಳಿಯದು. ನಾ ತೋರುವೆನೆಂದು ಮೂರು ಬಾಳೆಯ ಕಂಭವ ನಿಲ್ಲಿಸಿ ಕತ್ತಿಯಲ್ಲಿ ಹೊಯ್ವಾಗ ಒಂದರಲ್ಲಿ ಹಾಲು ಒಂದರಲ್ಲಿ ನೀರು ಒಂದರಲ್ಲಿ ರಕ್ತ ಸುರಿದವು. ಮೂರರಲ್ಲಿಯೂ ಹಾಲು ಬೀಳಬೇಕು. ವಿಷಘಳಿಗೆ ಬಂದುದರಿಂದ ಹೀಗಾಯಿತ್ತೆಂದು ಅವರ ಬಿಡಿಸಿದನು. ಬಳಿಕ ಆ ಶಿಶುವ ಭೋಜರಾಜನೆಂದು ಹೆಸರ ಕರೆದು ರಾಜ್ಯವನಾಳುವಾಗ ಒಂದು ವಟವೃಕ್ಷದಲ್ಲಿ ಏಳುನೂರು ಭೂತಗಳಿರುವವು. ಅವರೊಳಗೆ ಒಂದು ಭೂತ ಮಾರಿಯ ಹಬ್ಬಕ್ಕೆ ಆಹಾರವ ಕೊಳ್ಳಬೇಕೆಂದು ಹೋಯಿತ್ತು. ಇತ್ತ ರಾಯನ ಗುರು ಉದ್ಭಟಯ್ಯ ಐಕ್ಯವಾಗಲು ಈತನ ಶಿಷ್ಯಳಾದ ಹಿರಿಯ ಕುಲದ ಜೊಮ್ಮವ್ವೆ ದಹನವ ಮಾಡುವಾಗ ಹೋಗೆ ಆಲದ ಮರಕೆ ತಾಗಲು ಭೂತಗಳು ಕೈಲಾಸಕ್ಕೆ ಹೋದವು. ಇದು ಬಂದು ಅಳುವಾಗ ನೀನಾರೆಂದು ಅರಸು ಕೇಳಲು ನಾವು ಏಳೂರ ಗಾಂಧರ್ವರು ಒಬ್ಬನ ಹೆಸರು ಚಾಮಿದೇವ ದೂರ್ವಾಸನ ಕೊಳನಲ್ಲಿ ಸ್ನಾನವ ಮಾಡುವಾಗ ಆತ ಶಪಿಸಲು ಭೂತಗಳಾದೆವು. ಹನ್ನೆರಡು ಸಾವಿರ ವರುಷ ಈ ಆಲದ ಮರದಲ್ಲಿದ್ದೆವು. ಈಗ ಚಂದನದ ಕಟ್ಟಿಗೆಯನೊಟ್ಟ ಉದ್ಭಟಯ್ಯನ ಸುಟ್ಟ ಬೂದಿಯ ಮೇಲೆ ಸುಡಲು ಹೊಗೆತಾಗಿದರೆ ಹೋದೆನೆನಲು ಆಗ ಭೋಜರಾಜ ಕಟ್ಟಿಗೆಗಳನೊಟ್ಟಿ ಆ ಮರದ ಮೇಲೆ ತಾ ಸಹಿತನಾಗಿ ಬಂಧುಗಳನೆಲ್ಲ ಕುಳ್ಳಿರಿಸಿಕೊಂಡು ಆ ಹೊಗೆ ತಾಗಲು ಮರ ಸಹಿತ ಕೈಲಾಸಕ್ಕೆಯ್ದಿದರು.



### ವಿಹಲ್ಯಕರಣಿ.

ಭವನಪುರದಲ್ಲಿ ಭವನ ರಾಜ ಆ ಪುರದ ಊರ್ಧ್ವಗೌತನ ಮಗ ಗೌತುಮನು ಕೋಮಟಗನ ಮಗ ಮಣಿಕುಂಡಲನು ಭಾಗ್ಯಶಾಲಿಯಾಗಿರಲು ಅವರೀರ್ವರು ದೇಶಾಂತರವ ಹೋಗುತ್ತ ಆ ಮಣಿಕುಂಡಲನು ಧರ್ಮವಿಜಯನೆಂಬವನು ಒಂದು ಕೈ ಒಂದು ಕಾಲು ಎರಡು ಕಣ್ಣು ಹೋಗಾಡಿಸಲು ಗೌತಮೀತೀರದಲ್ಲಿ ಯೋಗೀಶ್ವರ ಲಿಂಗದ ಪೂಜೆಗೆ ವಿಭೀಷಣ ಬಂದ ಅವನ ಮಗ ವಿಹಲ್ಯಕರಣಿಯನು ಮಣಿಕುಂಡಲನ ಅವಯವಕ್ಕೆ ಮುಟ್ಟಿಸಲು ಕಣ್ಣು ಕೈ ಕಾಲು ಬಂದವು. ಅವನ ಮಹಾಪುರಕ್ಕೆ ಹೋಗಿ ಮಹಾರಾಜನ ಮಗಳ ಕಣ್ಣು ಹೋಗಿರೆ ವಿಹಲ್ಯಕರಣಿಯ ಮುಟ್ಟಿಸಲು ಕಣ್ಣು ಬಂದವು. ಅವಳ ಮದುವೆಯಾಗಿ ಸುಖದಲ್ಲಿರ್ದನು.

---

## ೧೬೫ ನೆಯ ವಚನದ ಕಥೆ. (೧೦೫—೧)

### ಸತ್ಯೇಂದ್ರಚೋಳ

ಚೋಳ ಮಂಡಲದಲ್ಲಿ ಧರ್ಮವತಿ ಎಂಬ ಪಟ್ಟಣದಲ್ಲಿ ಸತ್ಯೇಂದ್ರ ಚೋಳರಾಜನೆಂಬ ಶರಣನಿರ್ದ. ಆತನ ಸತಿ ಅಮೃತವತಿಯು ತನಗೆ ಮಕ್ಕಳಿಲ್ಲವೆಂದು ಪತಿಮೋಹಿ ಎಂಬ ಮಂತ್ರಿಯ ಮಗ ಮಿತವಚನನ ತಕ್ಕೊಂಡು ಸಾಕುತ್ತಿರಲು ಬಳಿಕ ಒಂದು ದಿನ ತಮ್ಮ ಗುರುವಾದ ಚಿದ್ಘನ ಶಿವಾಚಾರ್ಯರು ಬಂದು ಭಕ್ತಿಯ ಕೈಕೊಂಡು ಹೋಗುವಾಗ ಅಮೃತವತಿಯು ನನಗೆ ಮಕ್ಕಳಿಲ್ಲನೆನಲು ಆಗ ತಮ್ಮ ತಾಂಬೂಲ ಪ್ರಸಾದವ ಕೊಡಲು ಗರ್ಭಿಣಿಯಾಗಿ ಕುಮಾರನ ಹೆತ್ತು ಮಂತ್ರಲಕ್ಷನೆಂದು ಹೆಸರಿಟ್ಟು ಸುಖದಲ್ಲಿರುವಾಗ ಹದಿನಾರು ವರುಷವಾಗಲು ಬಳಿಕ ಪತಿಮೋಹಿ ಸಿಂಧುರಾಜನ ಮೇಲೆ ದಂಡ ಹೋಗಿ ಆನೆ ಕುದುರೆ ಹಣ ಆತನ ಇಬ್ಬರು ಪುತ್ರಿಯರು ಸಹವಾಗಿ ಕಪ್ಪವ ಕಮಲೆಯ ಮಿತವಚನನಿಗೆ ಕುಮುದಿನಿಯ ಮಂತ್ರಲಕ್ಷಗೆ ಧಾರೆಯನೆರೆದು ಸುಖದಲ್ಲಿರಲು ಸಿಂಧುರಾಜ ಕಳುಹಿದ ಎರಡು ತೇಜಿಗಳನೇರಿಕೊಂಡು ಸಾರೆಯ ಹೋಗಿ ಬರುವಾಗ ಮಾರ್ತಾಂಡಸೆಟ್ಟಿಯ ಸತಿ ತಿರುಕೊಳನಾಚಿಯ ಮಗ ಶಂಕರ ಬೀದಿಯಲ್ಲಿರಲು ಆಗ ಮಿತವಚನನ ಕುದುರೆ ತುಳಿದು

ಆ ಶಿಶುವಿನ ತಲೆ ಕತ್ತರಿಸಲು ತಿರುಕೊಳನಾಚಿಯಗು ಬಂದು ಆ ತಲೆಯ ತಕ್ಕೊಂಡು ಆರಸಿನ ಮುಂದೆ ಮಡಗಲು ಈ ಶಿಶುವ ಕೊಂದ ವರಾರೆನೆ ಮಿತವಚನನ ಕುದುರೆ ತುಳಿಯಿತ್ತೆನಲು ಆಗ ಆರಸು ಅವನ ಕರೆ ಎನಲು ಆಗ ಮಂತ್ರಲಕ್ಷ ಆ ತಪ್ಪು ನನ್ನದು ಅಣ್ಣನ ಕರೆವುದೇ ಕೆನಲು ಆ ಮಾತಿಗೆ ಇವನ ಶಿರಚ್ಛೇದನವ ಮಾಡೆಂದು ಪತಿಮೋ ಹಿಗೆ ಹೇಳಲು ಆತನ ಕೊಲ್ಲಲಾರದೆ ತಾನೆಯಳಿಯಲು ಆಗ ಸಂಡಾ ಯಿಗೆ ಹೇಳಲು ಕರದೊಯ್ದು ಶಿರವ ಕತ್ತರಿಸಿ ಆರಸಿನ ಮುಂದೆ ಮಡ ಗಲು ಹೇಗೆ ಹೊಯಿದೆ ಎಂದು ಕೇಳಲು ಆಗ ಸಂದಾಯಿ ಹೀಗೆ ಹೊಯಿದೆನೆಂದು ತನ್ನ ಶಿರವ ಕತ್ತರಿಸಿಕೊಳ್ಳಲು ಅದ ತಿರುಕೊಳನಾ ಚಿಯರು ಕೇಳಿ ತನ್ನ ಶಿರವ ಕತ್ತರಿಸಿಕೊಳ್ಳಲು ಆ ಐದು ತಲೆಯ ಅರಸು ಕಂಡು ಇವಕ್ಕೆ ಕಳಸಗಾಣಿಕೆ ಎಂದು ತನ್ನ ಶಿರವ ಕತ್ತರಿಸಿ ಕೊಳ್ಳಲು ತಪ್ಪುಮಾಡಿದವ ನಾನೆಂದು ಮಿತವಚನ ತನ್ನ ಶಿರವ ಕತ್ತ ರಿಸಲು ಆಗ ಅಮೃತವತಿ ಶಿವಂಗೆ ಎಂಟು ತನುವು ಒಂದು ಕಡಿಮೆ ಯಾಯಿತ್ತೆಂದು ತನ್ನ ಶಿರವನರಿದುಕೊಂಬಾಗ ಶಿವ ಕೈಹಿಡಿದು ಮಚ್ಚಿದೆ ಬೇಡು ಎನಲು ಶಂಕರನ ಪ್ರಾಣವ ಕೊಡು ಎನಲು ಎಲ್ಲರ ಪ್ರಾಣ ವನು ಕೊಟ್ಟು ಕೈಲಾಸಕ್ಕೆ ಕರೆದೊಯ್ದರು.

---

## ೧೬೩ ನೆಯ ವಚನದ ಕಥೆ. (೧೦೬—೯)

**ಬಸವ**

ಬಸವೇಶ್ವರನ ಕೂಡೆ ಬಿಜ್ಜಳಾಂಕನು ತರ್ಕವ ಮಾಡಿದಲ್ಲಿ ಗೆದ್ದ ಪವಾಡ ೬೪, ಭಕ್ತಿವಾದದಿಂದ ಗೆದ್ದ ಪವಾಡ ೨೪, ಇಂತು ಉಭಯ ಕೂಡಲಾಗಿ ೮೮ ಪವಾಡವ ಗೆಲವಾಗಿ ಬಿಜ್ಜಳ ಚಿಂತೆಯಿಂದ ಹಸ್ತವ ಮುಗಿದು ಚೆನ್ನಬಸವೇಶ್ವರಂಗೆ ಪ್ರಧಾನಪಟ್ಟವ ಕಟ್ಟಿದ ಪ್ರಸ್ಥಾವದ ವಚನ

---

## ೧೮೦ ನೆಯ ವಚನದ ಕಥೆ. (೧೦೭--೩)

**ಗುಂಡಬ್ರಹ್ಮಯ್ಯ.**

ಗೋಚರಪುರದಲ್ಲಿ ಗುಂಡಬ್ರಹ್ಮಯ್ಯಗಳು ಮರೆಹೊಕ್ಕವರ ಕೊಡೆ ನೆಂದು ಬಿರುದಿನ ಕಾಳೆಯ ಹಿಡಿಸಲು ಇದ ನಾರದನು ಶಿವನಿಗೆ ಹೇಳಲು



ಓರುಗಲ್ಲ ಗಣಪತಿರಾಯನ ಮನೆಯ ಕನ್ನವನಿಕ್ಕಿ ಮುತ್ತು ಮಾಣಿಕವ ಚಲ್ಲುತ ಗುಂಡಬ್ರಹ್ಮಯ್ಯನ ಮನೆಗೆ ಬರಲು ಬಂದ ಕಳ್ಳನ ಕೊಡು ಎನಲು ಕೊಂದರೂ ಕೊಲ್ಲಲಿ ಕೊಡುವುದಿಲ್ಲವೆನಲು ಆ ನುಡಿಗೇಳಿ ಗಣ ಪತಿರಾಯ ಶೂಲಕ್ಕೆ ಹಾಕಬೇಕೆಂದು ಕರಿಸಲು ಆ ಬ್ರಹ್ಮಯ್ಯನ ಸತಿ ಶಿರವನಿಳುಹಿ ಮುಂಡದಲ್ಲಿ ಆರತಿವಿಡಿದು ಬರಲು ಆರಸು ಕಂಡು ಅವರ ಬಿಡಿ ಎನಲು ಶೂಲವ ಲಿಂಗಕ್ಕರ್ಪಿಸಿದೆ ಇನ್ನು ಹೋದೆವೇ ಎಂದು ಶೂಲಕ್ಕೆ ಬೀಳಲು ಶಿವ ಮೆಚ್ಚಿ ಶೂಲದ ಮರ ಸಹವಾಗಿ ಕೈಲಾಸಕ್ಕೆ ಕರೆದುಕೊಂಡು ಹೋದನು.

---

## ೧೮೧ ನೆಯ ವಚನದ ಕಥೆ. (೧೦೮--೪

**ಬಸವ**

ಬಸವೇಶ್ವರನು ಚರಲಿಂಗಕ್ಕೆ ನೊಸಲಕಣ್ಣವ ಕೊಟ್ಟರು.

---

## ೧೮೯ ನೆಯ ವಚನದ ಕಥೆ. (೧೦೮—೪)

ಪೂರ್ವದಲ್ಲಿ ಒಬ್ಬ ಪಾರುವನು ತನ್ನ ಕುಟುಂಬ ಸಹಿತ ಕಾಶಿಗೆ ಹೋಗುತ್ತ ಒಂದು ಅಗ್ರಹಾರದಲ್ಲಿರಲು ಅಲ್ಲಿ ಒಬ್ಬ ಹೆಬ್ಬಾರುವನ ಮನೆ ಯಲ್ಲಿ ಬ್ರಾಹ್ಮಣ ಭೋಜನ ಕಾಲದೊಳು ತನ್ನ ಕರೆಯಲು ಬಂದು ಕುಳ್ಳಿರ್ದು ಉಣ್ಣದಿರಲು ಏನು ಕಾರಣವೆಂದು ಕೇಳಲು ಭೂಪ ಕ್ಷೇತ್ರ ವೃತ್ತಿಗಳನೇನುವನೂ ಬೇಡುವುದಿಲ್ಲವೆನೆ ಮತ್ತೇನು ಬೇಕೆನೆ, ಎಲೆ ಯಜ ಮಾನನೆ ನಿನ್ನ ಮನೆಯ ಗೋಡೆಯಲ್ಲಿ ಸುಣ್ಣದ ಬೆರಳೊಳು ಬರೆದ ನಿತು ಭೂಮಿಯಂ ಕೊಡೆಂದು ಪಡೆದಲ್ಲಿ ದಸಿಯಂ ಬಲಿದು ಅದಕ್ಕೆ ಒಂದು ಸತ್ತ ನಾಯ ತಂದು ಸಿಕ್ಕಿಸಲದರ ನಾತಕ್ಕೆಲ್ಲರು ಮನೆಯ ಬಿಟ್ಟು ಹೋಗಲಲ್ಲಿ ತನ್ನ ಕುಟುಂಬ ಸಹಿತ ಪೊಕ್ಕು ಸುಖದಿಂದಿರ್ದನಾ ಧೂರ್ತ ಬ್ರಾಹ್ಮಣನು.

---

ಅರಿವೇ ಗುರು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦
ಶ್ರೀ ರುದ್ರಾಕ್ಷಿಮಠ

## ೧೯೨ ನೆಯ ವಚನದ ಕಥೆ (೧೦೯-೧೫)

### ಸಿದ್ದಣ್ಣ ಮಂತ್ರಿ

ಕಲ್ಯಾಣದಲ್ಲಿ ಬಲದೇವ ಮಂತ್ರಿಯ ತಮ್ಮ ಸಿದ್ದಣ್ಣ ಮಂತ್ರಿ ಆತನ ಸತಿ ಪದ್ಮಗಂಧಿಯಲ್ಲಿ ನೀಲಮ್ಮ ಹುಟ್ಟಿದಳು. ಆಕೆಗೆ ಸಂಗಮೇಶ್ವರನ ಕಯ್ಯಲ್ಲಿ ದೀಕ್ಷೆಯ ಕೊಡಿಸಿ ಬಸವೇಶ್ವರನು ವಿವಾಹವಾಗಿ ಈರ್ವರು ಜಂಗಮಾರ್ಚನೆಯ ಮಾಡುತ್ತಿರಲು ಒಂದು ದಿನ ಕಳ್ಳನು ಜಂಗಮವೇಷವ ಧರಿಸಿ ಬಸವೇಶ್ವರನ ಮನೆಗೆ ಬಂದು ನೀಲಲೋಚನೆಯ ರತ್ನಖಚಿತದೋಲೆಯಂ ಕಂಡು ತೆಗವುತ್ತಿರಲು ನಿಮ್ಮ ಹಸ್ತನೊಂದಾವೆಂದು ತಮ್ಮ ಹಸ್ತದಲ್ಲಿ ನೀಲಮ್ಮ ಕಿವಿಯೋಲೆಯಂ ತೆಗೆದು ಕೊಟ್ಟಳು.

### ಬಂದಿಕಾರರು.

ಆ ಲಿಂಗದ ಪರಮ ಪುರುಷೋತ್ತಮ ಸುಖಮಿರಲೊಂದು ದಿನ ಶಿವಾಜ್ಞೆಯಿಂದ ಏಳುಮಂದಿ ಬಂದಿಕಾರರು ತದ್ಬಸವನ ಸತಿಗೆ ಹತಿಸಿ ಪಸ್ತ ಪಾದ ನೇತ್ರ ಜಿಹ್ವೆ ಕಲೇವರಂಗಳಲ್ಲಿ ಪಂಚಪರುಷಂಗಳಂ ತೆಗೆದೊಯ್ದಪೆವೆಂದು ಕಪಟಜಂಗಮವಾಗಿ ಶರಣರೊಡನೊಳಪೊಕ್ಕು ಇರಲಾ ತತ್ಕಪಟ ಜಂಗಮ ಬಸವರಾಜನ ದರ್ಶನದಿ ನಿಜಜಂಗಮವಾಗೆ ಭೋಂಕನೆ ಬಸವನೆರಗಿ ನಿಜಲಿಂಗ ದೇವ ನಿಜಲಿಂಗ ಚಿಕ್ಕಯ್ಯ ನಿಜಲಿಂಗ ಬೊಲ್ಲಯ್ಯ ನಿಜಲಿಂಗ ಚೋಳಯ್ಯ ನಿಜಲಿಂಗ ಕಲ್ಲಯ್ಯ ನಿಜಲಿಂಗ ಚಾಮಯ್ಯ ನಿಜಲಿಂಗ ಶಾಂತಯ್ಯಗಳೆಂದು ಗುಣನಾಮಗಳ ಕೊಟ್ಟು ತತ್ಶರಣರು ಬೇಡಿದಿಷ್ಟಾರ್ಥಮಂ ಕೊಟ್ಟರು.

### ಪರವಾದಿಗಳು.

ಬಸವೇಶ್ವರನ ಶಿವಭಕ್ತಿಪ್ರಭಾವವ ಕಂಡು ಪರವಾದಿ ಸಂಕುಲ ತರಹರಿಸಲಾರದ ತಮ್ಮೊಳು ಕೋಳಟ್ಟು ಬಸವೇಶ್ವರನ ಕೊಲ್ಲಲುದ್ಯೋಗಿಸಿ ಹಾವಡಿಗರಂ ಕರೆದು ಲಂಚವಿತ್ತು ವಿಷಭೂತಸರ್ಪನಂ ಬಿಟ್ಟು ಕೊಲ್ಲೆಂದು ಬೋಧಿಸಿ ಕುಟಿಲವೇಷ ಕೊಟ್ಟು ಕಳುಹಲು ಆ ಕುಟಿಲ ಶರಣರೊಳಪೊಕ್ಕು ವಿಷಭೂತ ಸರ್ಪನಂ ಬಿಡಲು ವಜ್ರಕ್ಕೆ ಗೊರಲೆಕೊಂಬುದೇ, ವಿಷಭೂತಸರ್ಪನ ಸ್ತಂಭನವಾಗೆ, ಆ ಕುಟಿಲನು ತಡಬಡಂಗೊಳ್ಳೆ, ಕೆಲಬಲದ ಮಾಹೇಶ್ವರರು ವೇಷದ ಚೋರರು ಬಂದಿದಾರೆ



ಬಸವಾ ಎಂದು ಹೇಳಿ ಶಿವ ಶಿವಾ, ನಿಮ್ಮ ರೂಪಿಂಗೆ ವೇಷ ಉಂಟೇ ಎಂದು ಬಸವೇಶ್ವರನ ನುಡಿಪರುಷ ಕರ್ಣಲೋಹವ ಸೋಂಕಲೊಡನೆ ಶಿವಜ್ಞಾನ ಉದಯಿಸಿ ಶಿವಜಂಗಮವಾದರು.

### ಮಿಂಡಮಲ್ಲಯ್ಯ.

ಒಂದು ದಿನ ಮಿಂಡಮಲ್ಲಯ್ಯನೆಂಬ ಜಂಗಮದೇವರು ಬಸವಣ್ಣಾ ನಾವು ಬಿಜ್ಜಳನ ಮನೆಯ ನೋಡಬೇಕೆಂದು ಕೇಳಲು ಒಬ್ಬನ ಕೂಡಿಸಿ ಕಳುಹಲು ಅಂತಃಪುರಕ್ಕೆ ಹೋಗಿ ಜಾಳಂಧರ ದೇಶದ ಜಾಳಂಧರ ರಾಯನ ಮಗಳಾದ ಮೋಹಿತಾಂಬರೆಯ ಸಂಗದಲ್ಲಿ ಮಿಂಡಮಲ್ಲಯ್ಯನಿರಲು ಬಿಜ್ಜಳ ಕಂಡು ಇದೆಂತೆಂದನು, ಸೈಂಧವ ನಿಃಕುಂಭ ಲುಬ್ಧಕ ಧನ್ಯಕಪಾಳಾಪತಿ ಹರಿ ಸಂಹರ ಶಂಕ ಕುಕರ ಮಾಳಾವ ಕಳಾ ಚೋರ ಮೋದಕ ಅಕುಂತನ ರಾಷ್ಟ್ರಕೂಟ ಬಂದಿಲಾಳ ಸಿಂಧುಕ ಹರಿತ ಹೂಣಕ ಗೋಹಿಲ ಇವನ ಮಗ ವೀರಬಿಜ್ಜಳನ ಮಗ ಹಿಮ್ಮಡಿರಾಯನ ಮಗ ಪೇರ್ಮಡಿರಾಯನ ಮಗ ಚಾಳುಕ್ಯರಾಯನ ವಂಶಕ್ಕೆ ಕುಂದ ತಂದನಲ್ಲಾ ಬಸವಣ್ಣನು ಎನಲು, ಆಗ ಬಸವಣ್ಣ ಬಿಜ್ಜಳನ ಕೂಡೆಂದನು, ದಶರಥನು ಜಾಂಡಿಲ್ಯನ ಕೊಂದ ಪಾಪದಿಂದ ತಲೆ ಹತ್ತು ಸಾವಿರ ಹಾಳಾಯಿತ್ತು ರಾಮನು ರಾವಣನ ಕೊಂದ ಬ್ರಹ್ಮೇತಿಯಿಂದ ಮೂರು ಕೋಟಿ ಲಿಂಗಗಳ ನಿಲ್ಲಿಸಿದ, ಜಂಗಮವ ಕೊಂದ ಪಾಪ ನಿನ್ನ ಬಿಡದೆಂದು ಮಿಂಡಮಲ್ಲಯ್ಯನ ಬಿಜ್ಜಳನ ಸತಿಯ ಪ್ರಾಣವ ಪಡೆದು ಬಸವೇಶ್ವರ ಹೋಗಲು ಇತ್ತ ಬಿಜ್ಜಳನು ಶಸ್ತ್ರರಕ್ತವಾದ ಪಾಪಕ್ಕೆ ಮೂವತ್ತಾರು ಸಾವಿರ ಜಂಗಮಕ್ಕೆ ಪಟ್ಟೆಯ ಹಚ್ಚಡಗಳನು ನಮಸ್ಕಾರವ ಮಾಡಿದನು. ಬಳಿಕ ಲೋಹಿತಾಂಬರಿಯ ಜಂಗಮದೇವರರು ಮುಟ್ಟಿದರೆಂದು ತಾಯಿ ಎಂದು ಭಾವಿಸಿದನು.

ಬಸವೇಶ್ವರನ ಶಿವಭಕ್ತಿಯುನ್ನತಿಕೆಯ ಮಹತ್ವಂಗಳಂ ಕಂಡು ಬಿಜ್ಜಳ ಕಟಕಿಯಿಂದ ಹೊಗಳೆ ಕುಟಿಲದಿಂ ಮಂಚಣ್ಣನು ಕಪಟದ ಮಹಾತ್ಮೆಗಳನೇನ ಪೊಗಳ್ದಪಿರೆಂದು ನಾನೊಂದ ನೆಗಳ್ದಪೆ ನಾಳೆ ಬೇಂಟೆಯ ಪೋಪಲ್ಲಿ ಒಬ್ಬ ಓಲೆಯಕಾರನ ಜಂಗಮವೇಷವ ಮಾಡೆ ಹುಲಿಯ ಹಾಲ ಬೇಡಿಸಿ ತಿಳಿಯಬೇಕೆಂದು ಬಿಜ್ಜಳನಹುದೆಂದು ಬೇಂಟೆಯ ಪೋಗಿ ಪೆರ್ಬುಲಿಯ ಕಂಡು ಆ ಕಪಟ ಜಂಗಮನ ಕಳುಹಲ್ಬಂದು ಬಸವಾ ಜಂಗಮಕ್ಕೆ ಬೇಡಿದಿಷ್ಟಾರ್ಥವ ಕೊಡುತಿರ್ದಪನೆಂದು ಬಂದೆವು

ಈ ಪೆರ್ಬುಲಿಯ ಹಾಲು ನಮ್ಮ ನೇಮಕ್ಕೆ ಬೇಕೆನೆ ಮಹಾ ಪ್ರಸಾದವೆಂದು ಹಡಪದಪ್ಪಣ್ಣಗಳ ಕಯ್ಯ ಸೊಂಬಟ್ಟಲಂ ತೆಗೆದುಕೊಂಡು ವ್ಯಾಘ್ರಾಸುರ ಧರ್ಮತರ್ಧನನ ಭಕ್ತ ಬಸವಣ್ಣನಾಕ್ಷಣವೆ ಕರೆದಿತ್ತು ಆ ಕಪಟ ಲಾಂಛನನ ನಿಜ ಜಂಗಮವ ಮಾಡಿದರು.

---

## ೧೮೪ ನೆಯ ವಚನದ ಕಥೆ. (೧೧೦—೧೭)

### ರಾಜತಕ್ಕರ

ರಾಜತಕ್ಕರನೆಂಬ ಭಟ್ಟನು ಮಾಳುವ ದೇಶದಿಂದ ಬಿಜ್ಜಳನ ಸಭೆಗೆ ಬರೆ, ನೇತ್ರ ನಾಶಿಕ ಕರ್ಣ ಕರ ಚರಣಂಗಳೇನು ಕಾರಣ ಇಲ್ಲವೆಂದು ಕೇಳೆ ಭಟ್ಟನು ತನ್ನ ಪೂರ್ವ ವೃತ್ತಾಂತವ ಹೇಳುತ್ತಿದ್ದಾನು. ಎಲೆ ಬಿಜ್ಜಳ ನನಗೆ ಮಾಳವರಾಜನು ಸಪ್ತಾಂಗ ರಾಜ್ಯವನಿತ್ತು ಪಂಕ್ತಿಯಲುಣ್ಣೆನೆ ಒಲ್ಲೆನೆನೆ ಸರ್ವರ ನುತಿಪ ಭಟ್ಟನು ನೀನೆಂತಧಿಕನೆನೆ ಶಿವನು ತ್ರಿಪುರವ ಸಂಹರಿಪಲ್ಲಿ ಚಂಡಕೀರ್ತಿಯ ಮಾಡಿ ಹರಿಯಜರ ನುತಿಸೆ ಶಿವನು ಶಪಿಸೆ ಮೇದಿನಿಗೆ ಕಳುಹಿದ ನಾವು ಅಗ್ರಾಂಶರೆನೆ ಅವರಾವ ರಾಜನು ಕತ್ತರಿಸಿದನೆನೆ ಬಿಜ್ಜಳನು ಚಿಂತಿಸಿ ಕೊಂಡೆಯ ಮಂಚಣ್ಣನು ಭಟ್ಟನಿಗೆ ಜಂಗಮವೇಷವ ಧರಿಸಿ ಬಸವೇಶ್ವರಗೆ ತೋರೆ ವಂದಿಸಿ ಹಾಸ್ಯವ ಮಾಡಲು ಅವಯವಗಳ ಕೊಡಲು ಕೀರ್ತಿಸಿದನು.

---

## ೧೮೯ ನೆಯ ವಚನದ ಕಥೆ. (೧೧೦—೨೨]

### ಕೋಡಗದ ಮಾರಣ್ಣ

ಕೋಡಗದ ಮಾರಣ್ಣನು ಕೋಡಗವ ಕುಣಿಸಿ ಕೇಶಿರಾಜ ದಣ್ಣಾಯಕರು ಲಿಂಗವ ಕುಣಿಸೆನೆ ಕುಣಿಸಿ ಜಂಗಮದಲ್ಲಿ ಗುಣವ ನೋಡದೆ ನಿಷ್ಠೆಯಲ್ಲಿ ಅರ್ಚನೆಯ ಮಾಡಿದರು.

---

## ೨೦೬ ನೆಯ ವಚನದ ಕಥೆ. [೧೧೨—೫]

### ಭೋಗಣ್ಣ

ಕೆಂಭಾವಿ ಎಂಬ ಪುರದಲ್ಲಿ ಭೋಗಣ್ಣಗಳೆಂಬ ಶರಣರಿರ್ಪರು. ಅವರು ಶಿವಭಕ್ತರಲ್ಲಿ ಕುಲವನರಸರು. ಜಂಗಮ ಘನದಲ್ಲಿ ಗುಣಾವ



ಗುಣವ ನೋಡದೆ ನಿಷ್ಠೆಯಲ್ಲಿರುತ್ತಿರಲು ಒಂದು ದಿನ ಶಿವನ ವೇಷವ ಮರಸಿಕೊಂಡು ಸತ್ತ ಕರುವ ಹೊತ್ತುಕೊಂಡು ಭೋಗಣ್ಣನ ಮನೆಗೆ ಬರಲು ಅವರ ಲಿಂಗವ ಕಂಡು ಒಳಯಿಕೆ ಕರೆಕೊಂಡು ಹೋಗಿ ಕುಳ್ಳಿರಿಸಿ ಪಾದಾರ್ಚನೆಯ ಮಾಡಿ ಪಾದೋದಕ ಪ್ರಸಾದವ ಸಲಿಸಿರಲು ಅವರ ಹಾರುವರು ಕಂಡು ಚಂದಿಮರಸನೆಂಬರಸಿಗೆ ಹೇಳಿದರು. ಎಲೆ ಆರಸೆ ಇನ್ನು ನಿನ್ನೂರಲ್ಲಿರಲಾಗದೆನೆ ಅದೇಕೆನಲು ಭೋಗಣ್ಣ ಆಚಾರಗೆಟ್ಟನು, ನಿನ್ನಾಜ್ಞೆ ಎಂಬುದಿಲ್ಲ, ಹೊಲೆಯನ ಹಿರಿಯನೆ ಭಕ್ತನೆಂದು ಕಾಲಿಗೆ ಬಿದ್ದ ಮೇಲೆ ವಿಪ್ರಾಚಾರವೆಲ್ಲಿಯದೆನಲು, ಆರಸನದ ಕೇಳಿ ಭೋಗಣ್ಣನ ಕರಿಸಿ ಇಂತೆಂದನು, ಶ್ವಪಚನ ಮನೆಯ ಹೊಗಿಸುವರೇ, ಎನಲು ಅದಕ್ಕೆ ಭೋಗಣ್ಣನು ನಮ್ಮ ಮನೆಗೆ ಸೂರ್ಯಭಟ್ಟ ಶ್ವಪಚನು ಬಂದನೇ, ಕೃಷ್ಣಭಟ್ಟ ಶ್ವಪಚಬಂದನೇ, ವಿಷ್ಣುಭಟ್ಟ ಶ್ವಪಚ ಬಂದನೇ, ಎನಲು ಆ ಮಾತಿಗೆ ವಿಪ್ರರು ಕೋಪಿಸಿ ಮುಟ್ಟಿಯನಿಟ್ಟ ವಿಪ್ರರೆಲ್ಲರನು ಶ್ವಪಚರೆನಬಹುದೇ ಎನಲು ಆ ಮಾತಿಗೆ ಚಂದಿಮರಸು ನಮ್ಮ ಪುರದಲ್ಲಿರಬೇಡ ಹೋಗೆನಲು ಊರ ಹೊರಟು ಹೋಗುವಾಗ ಆ ಪುರದ ಲಿಂಗಗಳು ಸಂಗಡ ಹೋದವು. ಅಂತರದಲ್ಲಿ ಕೆಲವು ಭೂಮಿಯಲ್ಲಿ ಕೆಲವು ಉರುಳುತ ಕೆಲವು ಮರದ ನೆಳಲಲ್ಲಿ ಕೆಲವು ಸೋರುತಿದ್ದ ಫಲದ ರಸವೆ ಮಜ್ಜನವಾಗಿ ಉದುರುತಿಹ ಎಲೆಯೆ ಪತ್ರೆಯಾಗಿ ಈ ಪ್ರಕಾರದಲ್ಲಿ ಅಲ್ಲಿಯ ಲಿಂಗಗಳೇ ಭೋಗಣ್ಣನ ಹಿಂದಟ್ಟಿ ಹೋಗುತ್ತಿರಲು ಆ ಲಿಂಗಗಳ ಕೂಡೆ ಭೋಗಣ್ಣ ನಿಂತೆಂದನು. ದೇವಿಯರ ಬಿಟ್ಟು ಎನ್ನ ಕೂಡೆ ಹೇಗೆ ಚಳಿಗಾಳಿ ಬಿಸಿಲೊಳು ಬರುತೆಲೆ ಎಂದು ಬಲಗಡೆಯ ಲಿಂಗಗಳ ಬಲಗಯ್ಯೊಳಪ್ಪುತ ಸುತ್ತಲಿದ್ದ ಲಿಂಗಗಳ ಸುಳಿದಪ್ಪುತ ಎಡಗಡೆಯ ಲಿಂಗಗಳ ಎಡಗಯ್ಯೊಳಪ್ಪುತ ಹಿಂದೆ ಬರುವ ಲಿಂಗಗಳ ಬೆನ್ನಿನಲ್ಲಪ್ಪುತ ಮುಂದೆ ಬರುವ ಲಿಂಗಗಳ ಮುಂದಪ್ಪುತ ಮೇಲೆ ಹೋಗುವ ಲಿಂಗಗಳ ತಲೆಯಲ್ಲಪ್ಪುತ ನೋಡುವ ಲಿಂಗಗಳ ನಯನದಲ್ಲಪ್ಪುತ ಸುತ್ತಲಿದ್ದ ಲಿಂಗಗಳ ಸುಳಿಸುಳಿದಪ್ಪುತ ಭೋಗಣ್ಣನೊಡನೆ ಲಿಂಗಗಳು ಹೋಗುತ್ತಿರಲು ಇತ್ತ ಪೂಜಕರು ಗುಡಿಗೆ ಹೋಗಿ ನೋಡಲು ಪೀಠಗಳಲ್ಲಿ ಲಿಂಗಗಳಿಲ್ಲದಿರೆ ಭೋಗಣ್ಣ ನೊಂದುಕೊಂಡು ಹೋದ ಕಾರಣ ಲಿಂಗಗಳು ಹೋದವು ಅವರ ಕರಿಸದಿದ್ದರೆ ಬಹಳ ಕೇಡು ಬರುವುದು ಸಮುದ್ರ ಮೇರೆದಪ್ಪಿ ಪ್ರಳಯವಾದಿತ್ತು ಎಂದು ವಿಪ್ರರು ಹೇಳಲು ಆಗ ಚಂದಿಮರಸರು ವಾದ್ಯ ಕನ್ನಡಿ ಕಳಶ ಸಹವಾಗಿ ಹೋಗಿ

ಭೋಗಣ್ಣಗೆರಗಿ ನಿಮ್ಮ ಮಹಿಮೆಯನರಿಯದ ಪಾಪಿಗಳಿಗೆ ಕರುಣಿಸು ನರಕಕೆ ಬೀಳುವವರನೆತ್ತಿಕೋ ಎನಲು ಆಗ ಕರುಣದಿಂದ ಕೆಂಭಾವಿಗೆ ತಿರುಗಿ ಬಂದರು. ಶಿವನನು ದೇವಿಯನು ಒಂದು ಗೂಡಿಸಿದಂತೆ ಲಿಂಗಗಳು ಪೀಠದ ಮೇಲೆ ಕುಳಿತವು. ಆಗ ಪೂಮಳೆಗರಿದವು. ಶಿವನು ಮೆಚ್ಚಿ ಭೋಗಣ್ಣನ ಪುಷ್ಪಕದೊಳಗಿಟ್ಟು ಕೈಲಾಸಕ್ಕೆ ಕರೆದೊಯ್ದರು.

---

## ೨೧೦ ನೆಯ ವಚನದ ಕಥೆ (೧೧೨—೨)

### ಬಸವ.

ಬಿಜ್ಜಳನು ಬಸವೇಶ್ವರನ ನಂದಿಯುಂಗರವ ತೆಗೆದು ಕೈಮುಗಿ ಎನೆ ಗದ್ದುಗೆಯ ಮೇಲೆ ಮಡಗಿ ಕೈಮುಗಿಯೆ ಗದ್ದುಗೆ ಉರಿಯಿತ್ತು.

---

## ೨೧೪ ನೆಯ ವಚನದ ಕಥೆ (೧೧೩—೩)

### ಚೆನ್ನಯ್ಯ.

ಕರಿಕಾಲ ಚೋಳರಾಯನು ಪಿರಿಒಡೆಯರೆಂಬ ಲಿಂಗಕ್ಕೆ ಮೊನೆ ಮುರಿಯದ ಸಣ್ಣ ರಾಜಾನ್ನದಕ್ಕಿಯ ಮೂನ್ನೂರರುವತ್ತು ಖಂಡುಗದ ಬೋನವ ಮಾಡಿ ಮೂವತ್ತು ಕೊಳಗದ ಮೆಣಸಿನ ಅಮೃವ ಮಾಡಿ ಮೂನ್ನೂರು ಅಡ್ಡಣಿಗೆಯ ಮೇಲೆ ಮೂನ್ನೂರು ಚಿನ್ನದ ಹರಿವಾಣದಲ್ಲಿ ಎಡೆ ಮಾಡಿ ಮೂನ್ನೂರು ಚಿನ್ನದ ಕೆಲತಟ್ಟೆಯ ಮಡಗಿ ದೇವಾನ್ನ ದಿವ್ಯಾನ್ನ ಅಮೃತಾನ್ನ ಪದಾರ್ಥಂಗಳು ಹಪ್ಪಳ ಸಂಡಿಗೆ ಚಿಲುಪಾಲು ತುಪ್ಪ ಕೆನೆ ಮೊಸರು ಸಕ್ಕರೆಗಳ ನೀಡಿ ಜವನಿಕೆಯ ಹಾಕಿ ಹೊರಗೆ ನಿಂತು ಸಲಿಸುವುದನಾಲಿಸಲು ಸುಮ್ಮನಿರುವದ ಕಂಡು ತೆರೆಯ ತೆಗೆದು ನೋಡಿ ಎಡೆಗಳ ಕಂಡು ಖಡ್ಗವ ತಕ್ಕೊಂಡು ಕೊರಳ ಮೇಲೆ ಮಡಗಲು ಆಗ ಶಿವನು ಹೋ ಹೋ ನಿಲ್ಲೆಂದು ಚೆನ್ನನೊಡನೆ ಉಂಡೆವು ಎನುಗಿಂದು ಹಸುವಿಲ್ಲ ತೆಳ್ಳಂಬಕಳದ ಸವಿಯವನೇನ ಬಣ್ಣಿಪೆನು ಆ ಅಂಬಕಳ ಸವಿ ಚೋಳಾದಿಗಳಿಗೆ ದೊರೆಯದು ನೀನು ಇನ್ನು ಭಕ್ತಿಯ ಮಾಡಿಕೊಂಡು ಸುಖದಲ್ಲಿರು ಎಂದು ಅರಮನೆಗೆ ಕಳುಹಿದನು.

---



## ೨೧೫ ನೆಯ ವಚನದ ಕಥೆ (೧೧೩—೪)

### ನಿಂಬಿಯಕ್ಕ.

ಶಿವನು ಸಿರಿಯಾಳಶೆಟ್ಟಿಯ ಕೊಟ್ಟಣದ ನಿಂಬಿಯಕ್ಕನ ಮನೆಗೆ ಬರಲು ಆಕೆ ಸಲಿಸನೀಡಿಲು ನಾನೊಲ್ಲೆನೆನಲು ಸಲಿಸದಿದ್ದರೆ ಒನಕೆಯಲ್ಲಿ ಹೊಯ್ದೆನೆನಲು ಶಿವನು ರೂಪದೋರಿ ಕೈಲಾಸಕ್ಕೆ ಬಾರೆನಲು ಒಲ್ಲೆನೆಂದಳು.

---

## ೨೧೮ ನೆಯ ವಚನದ ಕಥೆ (೧೧೩—೬)

ಎಲೆ ದೇವನೆ ಬ್ರಹ್ಮ ಮೊದಲಾದವರು ಬಂದು ನಿನ್ನ ಸಮೀಪಸ್ಥರಾಗಿ ಇದ್ದಾರೆ ನಿಮ್ಮ ಗೋತ್ರವೇನೆಂದು ಬೆಸಗೊಳ್ಳುತ್ತಿದ್ದೇನೆ ಎಂಬ ಗಿರೀಶ್ವರನ ವಾಕ್ಯವನು ಕೇಳಿ ಉತ್ತರಂಗೊಡದೆ ಚಿಂತಿಸುತ್ತಿರ್ದ ಈಶ್ವರನ ಕಂಡು ಸಮಸ್ತ ಲೋಕಕ್ಕೆ ಒಡೆಯತನದಿಂ ಕುಲವಿಲ್ಲವೆಂದು ಸನುಮಿಸಿದರು. ॥ಗ್ರಂಥ॥ ಬ್ರಹ್ಮಾದಯೋ ದೇವಾಸ್ತತ್ಸಮೀಪಮಿಹಾಗತಾಃ ಕಿಂಗೋತ್ರಮಿತಿ ಪೃಚ್ಛಾಮ್ಯ ವಿಷಾಮಗ್ರೆ ವಿಭೋವದಾ ॥ಟೀಕು॥ ಬ್ರಹ್ಮಾದಯಃ ಬ್ರಹ್ಮ ಮೊದಲಾದಂಥ ಅಮಿದೇವಾಃ ಈ ದೆವರ್ಕಳು ಇಹ ಇಲ್ಲಿ ತತ್ಸಮೀಪವನು ನಿನ್ನ ಸಮೀಪವನು ಆಗತಾಃ ಎಯ್ದಿದರು ಗೋತ್ರಂ ಗೋತ್ರವು ಕಿಂ ಏನು ಇತಿ ಹೀಗೆಂದು ಪೃಚ್ಛಾಮಿ ಬೆಸಗೊಳುತ್ತಿದ್ದೆನು. ಭೋ ವಿಭೋ ಎಲೆ ಒಡೆಯನೆ ಏಷಾಂ ಇವರುಗಳ ಅಗ್ರೆ ಇದಿರಲ್ಲಿ ವದ ಹೇಳು. ಶೃತ್ವಾ ತುಭಾರತಿಂ ತಸ್ಯ ವಿಶ್ವೇಶೋ ವಿಶ್ವವಂದಿತಃ ಕಿಂ ಗೋತ್ರಮಿತಿ ಸಂಚಿಂತ್ಯನೋತರಂ ಚ ನ ಸಜಹ ॥ಟೀಕು॥ ವಿಶ್ವೇಶಃ ಸಮಸ್ತಲೋಕಕ್ಕೆ ಒಡೆಯನಾದಂಥ ವಿಶ್ವವಂದಿತಾಃ ಸಮಸ್ತಲೋಕದಿಂದ ವಂದೆ ವಂದಿಸಿಕೊಳ್ಳಲ್ಪಟ್ಟಂಥ ಆ ಪರಮೇಶ್ವರನು ತಸ್ಯ ಗಿರಿರಾಜನ ಭಾರತೀವಾಕ್ಯವನು ಶೃತ್ವಾ ತು ಕೇಳಿ ಗೋತ್ರಂ ಗೋತ್ರವು ಕಿಮಿತಿ ಏನೆಂದು ಸಂಚಿಂತ್ಯ ಚಿಂತಿಸಿ ಉತ್ತರಂ ಮಾತನು ನಸರ್ಜಹ ನುಡಿದುದಿಲ್ಲ. ದೃಷ್ಟ್ವಾ ನಿರುತ್ತರಂ ಶಂಭು ಜಹಸ್ತುರ್ದೇವದಾನವಾಃ ಏಷ ಏವಜಗದ್ಯೋನಿ ಗೋಜತ್ರಮಸ್ಯೆ ಕಥಂ ಭವೇತ್ ನಿರುತ್ತರಂ ಉತ್ತರವಿಲ್ಲದೆ ಇದ್ದಂಥ ಶಂಭು ಪರಮೇಶ್ವರನು ದೃಷ್ಟ್ವಾ ಕಂಡು ದೇವದಾ

ನವ ದೇವರ್ಕಳು ರಾಕ್ಷಸರು ಜಹಂತು ನಕ್ಕರು ಏಸವಿನ ಈ ಪರಮೇಶ್ವರನೆ ಜಗದ್ಯೋನಿಃ ಲೋಕಕ್ಕೆ ಉತ್ಪತ್ತಿ ಸ್ಥಾನವಾಹಂಥ ಆತನು ಅಸ್ಯ ಈ ಶಿವಂಗೆ ಗೋತ್ರಂ ಗೋತ್ರವು ಕಥಂ ಭವೇತ್ ಹೇಗಹುದು.

---

## ೨೨೦ ನೆಯ ವಚನದ ಕಥೆ (೧೧೪---೯)

### ಬಸವ.

ಬಸವೇಶ್ವರನ ಕೂಡೆ ಮೀಮಾಂಸಕತರ್ಕಕ್ಕೆ ನಿಂದೆಡೆಯೊಳು ತೃಣ ಪುರುಷನಿಂದಲೆ ಶಿವನೇ ಘನವೆಂದು ಅವನ ಗೆದ್ದ ಪ್ರಸ್ಥಾವದ ವಚನ.

---

## ೨೨೧ ನೆಯ ವಚನದ ಕಥೆ(೧೧೪—೧೧)

### ಬಸವ.

ಬಸವೇಶ್ವರ ದೇವರು ತೃಣಪುರುಷನಂ ಮಾಡಿ ಮೀಮಾಂಸಕಗೆ ಉತ್ತರವಂ ಕೊಡುಹೋಗೆನಲು ಆ ತೃಣಪುರುಷನು ಮಹಾಪ್ರಸಾದವೆಂದು ಕೈಕೊಂಡು ಮೀಮಾಂಸಕಂಗೆ ಉತ್ತರವಂ ಕೊಟ್ಟು ಶಿವವಿರಹಿತವಾದ ಕಾಳ್ಪುರಾಣವೆಲ್ಲವಂ ಬಯಲುಮಾಡಿ ನುಡಿಯಲು ಆತಂಗೆ ಶಿವಜ್ಞಾನ ತಲೆದೋರಿ ಆ ಬಸವೇಶ್ವರಂಗೆ ವಂದನೆಗೆಯ್ದು ಉಪದೇಶವಂ ಮಾಡಬೇಕೆನಲು ಆತಂಗೆ ವೀರಶೈವ ದೀಕ್ಷೆಯಂ ಮಾಡಿ ಷಟ್‌ಸ್ಥಲ ಮಾರ್ಗ ಕ್ರಿಯೆ ನಿರೂಪಿಸಿ ತಿಳಿಸಿದರು.

---

## ೨೨೨ ನೆಯ ವಚನದ ಕಥೆ(೧೧೫—೧೭)

### ಬಸವ

ಬಸವೇಶ್ವರನು ಪೆಟ್ಟಿಗೆ ಧನವ ಜಂಗಮಕ್ಕೆ ಕೊಟ್ಟ ಮುನ್ನಿನಂತೆ ನಿರ್ಮಿಸಿದರು.

---



## ೨೨೩ ನೆಯ ವಚನದ ಕಥೆ(೧೧೫—೨೧)

### ಬಸವ

ಕಾಳಿಂಗ ದೇಶದ ಮಹಾದೇವ ಸೆಟ್ಟಿಯ ಮುಂದೆ ಓರ್ವ ಮಹೇಶ್ವರನು ಬಸವಣ್ಣ ಹಾಡಿದ ವಚನ ಕೊಂಡಾಡಲು ಬೇಡಿದುದ ಶರಣರಿಗೆ ನೀಡದಿದ್ದರೆ ತಲೆದಂಡ ಕೂಡಲಸಂಗ ಅವರಾದರೂ ಎಂಬ ಗೀತವಂ ಪಾಡೆ ಮಹಾದೇವ ಶೆಟ್ಟಿ ಕೇಳಿ ನಡುಗಿ ಮಡಿವಾಳ ಮಾಚಯ್ಯ. ಮೋಳಿಗೆ ಮಾರಯ್ಯ. ಆಯದಕ್ಕಿ ಮಾರಯ್ಯ ಮೊದಲಾದವರು ಹೀಗೆ ನುಡಿಯಲಮ್ಮರು ಈ ವಚನದ ನೆವ ಪರೀಕ್ಷಿಸಿ ನೋಡಬೇಕೆಂದು ಮುತ್ತುರತ್ನಂಗಳ ಬೇಡುವೆನೆಂದು ಕಲ್ಯಾಣದ ಸಮೀಪದಲ್ಲಿದ್ದ ಶಿವಪುರದೊಳಗೆ ವಸ್ತಿಯ ಮಾಡಿದರು. ಇತ್ತ ಶಿವನು ಬಸವಣ್ಣನ ಮನವ ನೋಡುವೆನೆಂದು ಕೆಂಜೆಡೆಸರ್ಪ ಕುಂಡಲಂಗಳಂ ಧರಿಸಿ ಗಳಗಳನೆ ಬಂದು ಶಿವಯೋಗನಿದ್ರೆಯಲ್ಲಿರ್ದ ಬಸವಣ್ಣನ ಎಬ್ಬಿಸಿ ಮುಂದರಿಯದೆ ಗೀತವಂ ಪಾಡಿದೆ ಇದ ಮಹಾದೇವ ಶೆಟ್ಟಿ ಎಂಬ ಭಕ್ತನು ಚಿನ್ನ ರತ್ನಗಳ ಬೇಡುವದಕ್ಕೆ ಬರುತಿಹನು ನೀನು ಹೇಗೆ ಕೊಟ್ಟೆಯಾ ಎಂದರು. ಸಂಗಮೇಶ್ವರ ಪೇಳಿದ ಮಾತಿಂಗೆ ಶರಣರ ಮನೆಯ ಬಿರದಿನಂಕಕ್ಕೆ ಹಿಮ್ಮೆಟ್ಟೆನು ಓಡದಿರು ದೇವಾ ಎನಲು ಈತನ ನಿಷ್ಠೆಗೆ ನಿಲಲಮ್ಮದೆ ಕೈಲಾಸಕ್ಕೆ ಹೋದರು. ಇತ್ತ ಬಸವಣ್ಣ ಮಾಹೇಶ್ವರರ ನಡುವೆ ಭಯಭಕ್ತಿಯಿಂದ ಕುಳಿತಿರ್ಪ ಸಮಯದಲ್ಲಿ ಮಹಾದೇವ ಶೆಟ್ಟಿಯರು ಬಂದರೆಂಬುದ ಕೇಳಿ ಇದಿರೆದ್ದು ನಮಸ್ಕರಿಸಿ ಗದ್ದುಗೆಯಲ್ಲಿ ಮೂರ್ತವ ಮಾಡಿಸಿ ಪಾದಾರ್ಚನೆಯ ಮಾಡಿ ಗಣಂಗಳು ಸಹವಾಗಿ ಮಹಾದೇವಿ ಸೆಟ್ಟಿಯರ ಒಳಯಿಂಕೆ ಬಿಜಯಂಗೆಯಿಸಿ ಆರೋಗಣೆಯ ನೀಡಿ ಸಲಿಸುವಾಗ ಎಲೆ ಬಸವಣ್ಣ ನಿನ್ನ ವಚನದ ಬಿಂಕದ ಬಿರಿದ ಕೇಳಿ ನಿಮ್ಮ ಬೇಡಬಂದೆನೆಂದು ಶಿವಾಣತಿಯಿಂದ ನುಡಿ ತಡಬಡಿಸಿ ಮುತ್ತು ಮಾಣಿಕವ ಬೇಕೆಂಬುದ ಮರೆದು ಜೋಳ ಕಡಲೆ ತೊಗರೆಗಳ ಕೊಡು ಎನಲು ಆ ಮಾತಿಗೆ ಬಸವಣ್ಣ ನಕ್ಕು ನಿಮಗೆ ಭಯ ಬೇಡ ನೀವು ಏನು ಬಯಸಿದಿರಿ ಅದನೆ ಬೇಡಿ ಎನಲು ಆ ಭಕ್ತನು ಮುತ್ತು ಮಾಣಿಕ ಹೊನ್ನುಗಳು ಮೂವತ್ತು ಹೇರಾಗಬೇಕೆನಲು ಕೊಟ್ಟು ಕಳುಹಿದರು.

---

## ೨೩೭ ನೆಯ ವಚನದ ಕಥೆ(೧೧೬—೨)

### ಪಗಲ್ಚೋಳ

ಚೋಳಮಂಡಲದ ಕರವೂರಲ್ಲಿ ಪಗಲ್ಚೋಳನೆಂಬ ಭಕ್ತನಿಹನು. ಆತನು ಲಿಂಗವಲ್ಲದೆ ಅನ್ಯ ದೈವವ ನೋಡನು. ಜಂಗಮವಲ್ಲದೆ ಅನ್ಯ ದರ್ಶನವ ಮನ್ನಿಸದೆ ಹೀಗಿರುತ್ತ ಒಂದು ದಿನ ಅರಿರಾಜರ ಮೇಲೆ ದಂಡ ಕಳಹಲು ಬಳಿಕ ತಾನೇ ಹೋಗಬೇಕೆಂದು ಉಜ್ಜುಗಿಸಲು ಆಗ ಹಿರಿಯ ದಳವಾಯಿ ನೀವೇಕೆ ಹೋದಿರಿ ನಾ ಹೋದಿಹೆವೆಂದು ಹೋಗಿ ಕಾದಿ ಮೂವತ್ತು ಬಂಡಿ ತಲೆಗಳ ಹೊಯಿತರಲು ಅದರೊಳಗೆ ಒಂದು ತಲೆ ರಕ್ತದಿಂದ ನೆನೆದು ಜೆಡೆಗಟ್ಟಲು ಅದ ಕಂಡು ಅಯ್ಯೋ ಇದು ಜಂಗಮದ ತಲೆ ಪಾಪ ಬಂದಿತೆಂದುದು, ಪ್ರಾಣವ ಬಿಟ್ಟೆನೆಂಬಾಗ ಮಂತ್ರಿ ಎಂದನು ಇದಕೆ ಚಿನ್ನದ ತಲೆಯ ಮಾಡಿಕೊಟ್ಟರೆ ಪಾಪವಿಲ್ಲವೆನಲು ಅರಸೆಂದನು. ಇದರಿಂದಲೇನಾಗುವುದೆಂದು ತನ್ನ ಶಿರಸ್ಸ ಗುಡಿಯ ಮುಂದೆ ಕತ್ತರಸಿಕೊಂಬಾಗ ಆ ಲಿಂಗದೊಳಗಿಂದ ಶಿವನು ಜಂಗಮಕ್ಕೆ ಪ್ರಾಣವ ಕೊಟ್ಟೆವು ನಿಲ್ಲು ಎನಲು ಹಾಗಾಗಲೆಂದನು. ಆಗ ಅರಣ್ಯದಲ್ಲಿದ್ದ ಮುಂಡವು ಶಿರಸ್ಸಿನ ಬಳಿಗೆ ಬರಲು ರಾಯ ಆ ಶಿರವನೆತ್ತಿ ಮುಂಡದ ಮೇಲೆ ಇರಿಸಲು ಅದಕ್ಕೆ ಪ್ರಾಣ ಬಂದು ದಿಟದ ಜಂಗಮವಾಗಲು ಶಿವನು ಆ ಜಂಗಮದೇವರು ಸಹಿತವಾಗಿ ಪಗಲ್ಚೋಳನ ರಜತ ಪರ್ವತಕ್ಕೆ ಕೊಂಡುಹೋದನು

---



## ಪ್ರಸಾದಿಸ್ಥಲದ ವಚನದ ಕಥೆಗಳು.

## ೭ ನೆಯ ವಚನದ ಕಥೆ. (೧೧೮—೭)

### ಬಸವ

ಕಲ್ಯಾಣದಲ್ಲಿ ಬಸವೇಶ್ವರನು ತ್ರಿಪುರಾಂತಕಲಿಂಗದ ಮುಂದೆ ವಿಷವ ಅಮೃತವ ಮಾಡಿ ಮೆರೆದ ಪ್ರಸ್ತಾವದ ವಚನ.

---

## ಪ್ರಸಾದಿಯ ಶರಣ

## ೨೬ ನೆಯ ವಚನದ ಕಥೆ. (೧೨೧—೨)

### ಕಾಟಕೋಟ

ಗೋಲಗಿರಿ ಎಂಬ ಪುರದಲ್ಲಿ ಕಾಟಕೋಟನೆಂಬ ಗೊಲ್ಲನಿಪ್ಪನು. ಆತನು ಒಂದು ದಿನದಲ್ಲಿ ಆಡಿನ ಹಿಕ್ಕೆ ಲಿಂಗಾಕಾರವಾಗಿರಲು ಅದ ಕಂಡು ಮಳಲಲ್ಲಿ ಶಕ್ತಿಪೀಠವಮಾಡಿ ಹಿಕ್ಕೆಯ ತಂದಲ್ಲಿ ಮಡಗಿ ಹಾಲಿನಿಂದಭಿಷೇಕವ ಮಾಡಿ ಎಕ್ಕೆ ಕಕ್ಕೆ ಹುವ್ವಿನಿಂದ ಅರ್ಚಿಸಿ ಎದೆ ಎಂಬ ಹರೆಯ ಬಾಗಿಸಿ ಕೊಳಲನೂದುತ್ತ ಗೋಲಗಿರೀಶ್ವರಂಗೆ ಹಸಿವಾಯಿತ್ತೆಂದು ಆಡುಗಳ ಹಾಲು ಕರೆದು ನೀಡುತ್ತಿರಲು ಆ ಮೇಲೆ ತಂದೆಯು ಆಡುಗಳು ಹಾಲನೇಕೆ ಕರೆವುದಿಲ್ಲ ಇದೇನು ಕಾರಣ ನೋಡಬೇಕೆಂದು ಪೂಜೆಯ ಮಾಡುವಲ್ಲಿಗೆ ಬಂದು ಆ ಪೂಜೆಯನಳಿಯಲು ಆದ ಗೊಲ್ಲಾಳಯ್ಯ ಕಂಡು ಪರಸು ಕೊಡಲಿಯಿಂದ ತಂದೆಯ ಶಿರವನರಿವಾಗ ಶಿವನು ಮೆಚ್ಚಿದೆವು ಬೇಡು ಎನಲು ಯಾವ ಪದವಿಯನು ಒಲ್ಲೆನೆಂದು ಗುರುಕಾರುಣ್ಯವ ಪಡೆದು ವೀರಶೈವರಾಗಿ ಶಾಂಭವಲೋಕಕ್ಕೆ ಹೋದರು.

### ವೇಮಯ್ಯ

ಮೊರನ ವೇಮಯ್ಯಗೆ ಶಿವನು ಜಂಗಮವಾಗಿ ಬಂದು ಸಿದ್ಧರಸವ ಕೊಡವಲ್ಲೆನೆನೆ ಮನೆಯೊಳಗಿರಿಸಿ ಹೋಗಲು ಕಸನಲ್ಲಿ ತೊಡೆದು ಬಿಡೆ ಜಂಗಮ ಬಂದು ಸಿದ್ಧರಸವ ಕೊಡು ಎನೆ ಕಂಕುಳ ಮಲಿನ ಕೊಡಲು ಆ ಮಲಿನವ ಮಾನಸ್ತೋಕ ಪರ್ವತದ ಮೇಲೆ ಹಿಡಿಯೆ ಅದ ಸೋಂಕಿದ ಇಂದ್ರಕೀಲ ಹೊನ್ನಾಗಲು ರುದ್ರಗೆ ಕೊಟ್ಟರು.

---

# ಪ್ರಾಣಲಿಂಗಿಸ್ಥಲದ ವಚನದ ಕಥೆಗಳು

## ೧ ನೆಯ ವಚನದ ಕಥೆ(೧೨೧—೧)

ಗ್ರಂಥ॥ ತದ್ವೇಹಮಿಂದ್ರಿಯಾಣಿವಾ। ಸರ್ವಥಾಲಿಂಗಭೋಗಿನಾಂ। ತನ್ಮುಖ ಪಂಚವಕ್ತ್ರಂಚ। ಪ್ರಾಣಲಿಂಗಸ್ಯಲಕ್ಷಣಂ॥

ಪ್ರಾಣಪೂರ್ವಗುಣವಳಿದು ಪ್ರಾಣಲಿಂಗಿಯ ದೇಹವು ಆವಾಗಲೂ ಲಿಂಗಸಹಿತವಾಗಿ ಇಂದ್ರಿಯ ಭೋಗವ ಭೋಗಿಸುವುದು ಪ್ರಾಣಲಿಂಗಿಸ್ಥಲದ ಲಕ್ಷಣವು ಹೇಗೆಂದಡೆ ಈಶ್ವರನ ಪಂಚಮುಖಕ್ಕೆ ಪಂಚೇಂದ್ರಿಯ ಮುಖಂಗಳಲ್ಲಿ ಸಮರ್ಪಿಸುವುದು.

---

## ೧೨ ನೆಯ ವಚನದ ಕಥೆ. (೧೨೩—೧೭)

### ತಂಗಟೂರು ಮಾರಯ್ಯ

ತಂಗಟೂರ ಮಾರಯ್ಯಗಳು ಪ್ರಾಣಲಿಂಗಸಂಬಂಧಿಗಳಾಗಿ ಬಸವಣ್ಣನವರ ಮನೆಯ ಪಾರಿಯ ಕಾವುತ್ತಿರಲು ಅವರು ಅಪ್ಪಣೆಯಕೊಟ್ಟದಿಲ್ಲವೆಂದು ಹನ್ನೆರಡು ವರುಷ ಮನೆಗೆ ಬಾರದಿರಲು ಬಸವಣ್ಣನದ ತಿಳಿದು ಮನೆಗೆ ಹೋಗಿ ಎಂದು ಕಳುಹಲು ಬಂದು ಸತಿಪತಿಗಳು ಪವಡಿಸಿರಲು ಒಬ್ಬರ ಲಿಂಗ ಒಬ್ಬರಿಗೆ ಪಲ್ಲಟವಾಗಿರಲು ಆಗ ಮಾರಯ್ಯ ಐಕ್ಯವಾಗಲು ಅವರ ಮನೆಯಲ್ಲಿ ಸೇವೆಯ ಮಾಡುವ ಅಕ್ಕಮ್ಮನು ಉದಕಕ್ಕೆ ಹೋದಲ್ಲಿ ಈ ಸುದ್ದಿಯ ಕೇಳಿ ತಾನು ಐಕ್ಯವಾದಳು. ಬಳಿಕ ಸತ್ಯಣ್ಣಗಳು ಮಾರಯ್ಯಗಳ ಐಕ್ಯವಾದ ಠಾವಿಗೆ ಬಂದು ಇವರು ಲಿಂಗ ಪ್ರಾಣಿಗಳೆಂಬುದ ತಿಳಿದು ಅವರವರ ಲಿಂಗವ ಅವರವರಿಗೆ ಕೊಡಲು ಸತಿಪತಿಗಳೆದ್ದರು. ಇದ ಕೇಳಿ ಅಕ್ಕಮ್ಮ ಎದ್ದು ಆಗ್ಗಣಿಯ ಕೊಂಡು ಬಂದಳು. ಇತ್ತ ಚನ್ನಬಸವೇಶ್ವರ ದೇವರು ಸತ್ಯಣ್ಣಗಳ ಲಿಂಗ ಪ್ರಾಣತ್ವವ ನೋಡಬೇಕೆಂದು ಸಜ್ಜೆಯೊಳಗಣ ಲಿಂಗವ ಸತ್ಯಣ್ಣ ಮಲಗಿದಾಗ ತರಿಸಿ ಬಸವೇಶ್ವರನ ಮನೆಯಲ್ಲಿ ಗದ್ದುಗೆಯ ಮೇಲಿಟ್ಟು ಎಲ್ಲರಿಗೆ ಎಡೆಮಾಡುವಂತೆ ಈ ಲಿಂಗದ ಮುಂದೆ ಎಡೆಮಾ



ಡಲು ಮರಿದೇವರಾಗಿ ಸಲಿಸಿ ಮತ್ತೆ ಲಿಂಗವಾಗಲು ಕೊಂಡು ಬಂದು ಸೆಜ್ಜೆಯೊಳಗೆ ಮಡಗಿ ಚೆನ್ನಬಸವಣ್ಣ ಕೇಳುವಂತೆ ಸತ್ಯಣ್ಣಗಳೇ ಸಲಿಸುವುದಕ್ಕೆ ಬನ್ನಿ ಎಂದು ಬಸವಣ್ಣನ ಮನೆಯುವರು ಕರೆಯಲು ನಾವು ಸಲಿಸಿದೆವೆನಲು ಅದ ಕೇಳಿ ಚೆನ್ನಬಸವಣ್ಣನಚ್ಚರಿವಟ್ಟನು.

---

## ೧೫ ನೆಯ ವಚನದ ಕಥೆ. (೧೨೪—೧)

### ಮಹಾದೇವಿಯಕ್ಕ.

ಗಿರಿಜೆಯಂಶವಾದ ರುದ್ರಕರ್ಣಿಕೆಯೆ ನಿರ್ಮಳ ಸುಮತಿಗೆ ಉಡುತಡೆಯ ಮಹಾದೇವಿಯಕ್ಕನೆಂಬ ನಾಮದಿಂ ಪ್ರಸನ್ನಳಾಗಿ ಭವಿಸಂಗ ಸೋಂಕದೆ ಉಡಿಗೆ ತೊಡಿಗೆಯ ಪರಿದು ಹಾಕಿ ದಿಗಂಬರದಿ ಪರಮ ವೈರಾಗ್ಯದಿಂ ಕಲ್ಯಾಣಕ್ಕೆ ಬರಲು ಪ್ರಭುಸ್ವಾಮಿ ಮುಖ್ಯವಾದ ಶರಣರು ಒರೆದು ನೋಡಲು ಕಿನ್ನರಯ್ಯಗಳಂತಹ ಕಾಮನ ಸುಟ್ಟ ಭಸ್ಮವ ಗುಹ್ಯದಲ್ಲಿ ತೋರಲು ಬಸವಣ್ಣ ಮುಖ್ಯವಾದ ಪ್ರಮಥರು ಕೊಂಡಾಡಿ ಬೀಳ್ಕೊಂಡು ಕದಳಿಯಲ್ಲಿ ಮಲ್ಲಿಕಾರ್ಜುನನಲ್ಲಿ ಏಕಾರ್ಥವಾದಳು.

---

## ೨೫ ನೆಯ ವಚನದ ಕಥೆ. (೧೨೫--೧೧)

### ವಿಕ್ರಮಚೋಳ.

ಕರವೂರಿನಲ್ಲಿ ವಿಕ್ರಮಚೋಳನು ಹೊನ್ನ ದೇಗುಲವ ಮಾಡಿ ಶಿವನೊಲಿದಪ್ಪಿದನು.

### ಓಹಿಲಯ್ಯ.

ತಿರುಪನ್ನೆ ಎಂಬ ಪುರದಲ್ಲಿ ಓಹಿಲಯ್ಯನು ಭಾವಲಿಂಗ ಪೂಜೆಯಿಂದಿರೆ ಶಿವನು ಜಂಗಮವಾಗಿ ಬಂದು ಬೇಡು ಎನೆ ಹೃದಯವ ಬಗಿದು ಲಿಂಗವನು ಪುಷ್ಪವನು ತೋರೆ ಶಿವನೊಲಿದನು.

---

## ೨೮ ನೆಯ ವಚನದ ಕಥೆ. (೧೨೬—೩)

### ಬಸವ

ಬಸವೇಶ್ವರನು ಶಿವಯೊಗ ನಿದ್ರಾಮುದ್ರೆಯಲ್ಲಿ ಜಂಗಮದ ಕೂಡೆ ಪ್ರಾಣ ಪೋಗೆ ಚನ್ನಬಸವೇಶ್ವರ ಜಂಗಮವ ಕರಿಸೆ ಪ್ರಾಣ ಬಂದಿತ್ತು.

ಶಿವನು ಇನ್ನೊವ್ಮೆ ಬಸವೇಶ್ವರನು ಜಂಗಮ ಪ್ರಾಣತ್ವವ ನೋಡಬೇಕೆಂದು ಕಿನ್ನರಯ್ಯನ ಪ್ರಾಣವ ಕೊಂಡೊಯ್ಯೆ ಬಸವೇಶ್ವರನು ಪ್ರಾಣವ ಬಿಡೆ ಮಡಿವಾಳಯ್ಯಗಳಿಂದ ಕಿನ್ನರಯ್ಯನ ಬಸವೇಶ್ವರನ ಪ್ರಾಣವ ಬಂದುದು.

---

## ೩೪ ನೆಯ ವಚನದ ಕಥೆ. (೧೨೭--೧)

### ಬಸವ

ಬಸವೇಶ್ವರನ ಕಿಲಾರದ ಗೋವ ಕಳ್ಳರು ಹೊಡೆದು ಬಿಡೆ ಕಳ್ಳರಿಗೆ ಜ್ಞಾನೋದಯವಾಗಿ ಗೋವನೊಪ್ಪಿಸಿ ವಂದಿಸಿ ನೂರೊಂದು ಕಳ್ಳರು ಅವರು ಗಣಂಗಳಾದರು.

---

## ೫೪ ನೆಯ ವಚನದ ಕಥೆ (೧೩೦--೫)

### ಹರಳಯ್ಯ

ಪಂಡಿತಾರಾಧ್ಯರ ಶಿಷ್ಯರು ದೊನಮಯ್ಯನು ಅವರ ಶಿಷ್ಯ ಹರಳಯ್ಯನ ಮನೆಯ ಬಚ್ಚಲನೀರ ಮಧುವಯ್ಯನ ಮನೆಯ ತೊತ್ತು ಮಾಯಿದೇವಿಯು ತಂದು ಮಿಣಯಿಸೆ ಮಧುವಯ್ಯನ ತೊನ್ನಳಿದುದು.

### ಬೊಮ್ಮಯ್ಯ

ಸೊನ್ನಲಾಪುರದಲ್ಲಿ ಅಣ್ಣ ಬೊಮ್ಮಯ್ಯನಿಂತೆಂದು ನುಡಿವನು ಸಿದ್ಧರಾಮಯ್ಯ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗುಡಿಗಳ ಕಟ್ಟಿಸಿದರು, ನಮಗೊಂದು ಲಿಂಗಸ್ಥಾನವ ಕಟ್ಟುವುದಕ್ಕೆ ಹಣವಿಲ್ಲೆಂದು ಚಿಂತಿಸುತ್ತಿರಲು ಅದ ರಾಮಯ್ಯ ತಿಳಿದು ಅಣ್ಣ ಬೊಮ್ಮಯ್ಯನ ಕರೆದು ತಮ್ಮ ಅಂಗಳವನಗಿಸಿ ಒಂದು ಕೊಪ್ಪರಿಗೆ ಹೊನ್ನ ತೋರಲು ಅದರಿಂದ ಗುಡಿಗಳ ಕಟ್ಟಿಸಿ ಲಿಂಗವ ಪೂಜಿಸಿ ಸುಖದಲ್ಲಿದ್ದರು.

---



# ಶರಸ್ಥಲದ ವಚನದ ಕಥೆಗಳು.

## ೪ ನೆಯ ವಚನದ ಕಥೆ. (೧೩೧-೪)

### ಮಾರ್ಕಂಡೇಯ

ಭೃಗುವಿನ ಸತಿ ಖ್ಯಾತಿಯ ಮಗ ದಾತಾರನ ಮಗ ಪ್ರಾಣ ಈತಗೆ ಮೇರುವಿನ ಸತಿ ಧರಣಿಯ ಮಗಳು ಸತಿಯಾದಳು. ಈಕೆಯ ಮಗ ಮೃಕಂಡುವಿನ ಸತಿ ಹೇರಂಬದೇವಿ ಇವರಿಬ್ಬರು ರಾಮದಿಪುರದ ವನದಲ್ಲಿ ತಪವ ಮಾಡುವಾಗ ಶಿವ ಮೆಚ್ಚಿ ಏನು ಬೇಕೆನಲು ಮಗ ಬೇಕೆನಲು ಹದಿನಾರು ವರುಷ ಬದುಕುವ ಬಲ್ಲಿದ ಬೇಕೋ ನೂರು ವರುಷ ಬದುಕುವ ಹೆಡ್ಡ ಬೇಕೋ ಎನಲು ಹದಿನಾರು ವರುಷದ ಪ್ರೌಢ ಬೇಕೆನಲು ಅಂತವನೆ ಹುಟ್ಟಲು ಬಳಿಕ ಹದಿನಾರು ವರುಷಕ್ಕೆ ವೇದಶಾಸ್ತ್ರಂಗಳ ಪಠಿಸಿ ಸುಖದಲ್ಲಿರುವಾಗ ಆಯುಷ್ಯ ತೀರಿತ್ತೆಂದು ತಂದೆ ತಾಯಿಗಳು ಅಳುತ್ತಿರಲು ನಿಲ್ಲಿಸಿ ಲಿಂಗದ ಪೂಜೆಯ ಮಾಡುತ್ತಿರಲು ಯಮ ಬಂದು ಪಾಶವ ಹಾಕಲು ಶಿವನೇ ಎಂದು ಮೊರೆಯಿಟ್ಟು ಲಿಂಗವನಪ್ಪಿಕೊಳ್ಳಲು ಶಿವನು ಯಮನ ಒದ್ದು ಕೆಡಹಿ ಮಾರ್ಕಂಡೇಯ ಮೆಚ್ಚಿದೆ ಬೇಡು ಎನಲು ಎಂದೆಂದು ಹದಿನಾರು ವರುಷದ ಪ್ರಾಯವಾಗಿರುವದ ಕೊಡು ಎನಲು ಹಾಗೆ ಬದುಕು ಎಂದು ವರವ ಕೊಟ್ಟು ಶಿವನು ಹೋದನು.

---

## ೨೨ ನೆಯ ವಚನದ ಕಥೆ. (೧೩೪-೪)

### ಬಸವ

ಬಸವೇಶ್ವರನರಮನೆಯಲ್ಲಿ ಪ್ರಸಾದವಂ ಕರಿಯ ಬಿಡಾಲ ಮುಟ್ಟುತ್ತಿರೆ ಬಸವೇಶ್ವರನು ಬಿಜ್ಜಳನೋಲಗದಿ ಚುಃ ಚಾಃ ಎಂದು ಕೆಯ್ಯ ಚಪ್ಪಳಿಕ್ಕೆ ಬಿಜ್ಜಳನಿದೇನೆಂದು ಕೇಳೆ ಪ್ರಸಾದವ ಬಿಡಾಲ ಮುಟ್ಟುತ್ತಿರೆ ಹೊಡೆದೆವು. ೧೦ ಚರರ ಕಳುಹಿ ನೋಡಿಸಿ ನಿಜವೆನೆ ಅರಸು ತಾವೇ ಹೋಗಿ ನೋಡಲು ಜಂಗಮದ ಪಾದಾರ್ಚನೆಯ ಕೊಳನ ಕಂಡು ಇದು ಓಕುಳಿಯೋ ಎಂದು ಬಸವಣ್ಣನ ಕೇಳೆ ಜಂಗಮದ ಪಾದಪರುಷದ ರಸವೆನೆ ಮತ್ತೊಂದು ಕಬ್ಬುನದ ಮೊಟ್ಟೆಗಳ ಹಾಕಿ ತೆಗೆಯೆ ಸುವರ್ಣವಾಗೆ ಮುಂದೆ ಎಸೆಯೆ ಬಸವೇಶ್ವರಗೆ ದಂಡಪ್ರಣಾತನಾಗಿ ಸಾಷ್ಟಾಂಗವೆರಗಿ ವಂದಿಸಿ ರತ್ನಾಂಬರವ ಕಾಣಿಕೆಗೆ ತನ್ನ ಶಿರವನಿಕ್ಕಿದನು.

---

# ಅಕ್ಷರಾನುಗುಣ ವಿಷಯಸೂಚಿಕೆ.


ಅಗಸ್ತ್ಯ ೧೧, ೮೩
ಅಣುಪುರ ಸಿದ್ಧಯೋಗಿ ೮೭
ಅಣ್ಣಾಮಲೇಶ್ವರ ೨೪
ಅನಿರುದ್ಧ ೨೯
ಅನುಮಿಷಯ್ಯ ೫೩
ಅನುಸೂಯೆ ೬೭
ಅಮೃತಮತಿ ೬೮, ೮೫
ಅರುಹ ೬೯
ಅರ್ಜುನ ೪೦
ಅರ್ಧನಾರೀಶ್ವರ ೫೭
ಅಸ್ಫಾತಿ ೨೫
ಅಂಧಕಾಸುರ ೬೬
ಆಯುದಕ್ಕಿ ಮಾರಯ್ಯ ೪೯
ಇಪ್ಪಿದೇವ ೨೪
ಇಳೆಯಾಂಡ ಗುಡಿಮಾರ ೩೩
ಇಂದ್ರ ೬೫, ೬೮
ಉತ್ತರನಾಥ ೮೬
ಉತ್ತರಪ್ರಕಾಶ ೬೫
ಉತ್ತುಂಗಚೋಳ ೨೪
ಉದ್ದಾಲ ೩೬
ಎಡೆಮಟದನಾಗಯ್ಯ ೪೨
ಏಕಾಶಿ ೬೫
ಓಹಿಲಯ್ಯ ೬೦, ೧೦೫
ಕಕ್ಕಯ್ಯ ೯, ೬೬
ಕಣ್ಣಪ್ಪ ೫೮
ಕನ್ನದ ಚಾಮಯ್ಯ ೮
ಕಪಿಲಮುನಿ ೮, ೧೧, ೨೫
ಕಬ್ಬಿಲರು ೧೬
ಕರಿಕಾಲಚೋಳ ೪೯, ೫೭, ೯೮
ಕರ್ಣ ೭, ೩೯
ಕಲಕೇತ ಬೊಮ್ಮಯ್ಯ ೩೭
ಕಲಾವತಿ ೧೬
ಕಂಕಾಳ ೧
ಕಾಟಕೋಟ ೧೦೩
ಕಾರ್ತವೀರ್ಯ ೩೪, ೬೨
ಕಾಮ ೧೪
ಕಾಲಲೋಚನ ಗಣೇಶ್ವರ ೬
ಕಾಳಿದಾಸ ೫೯
ಕಿನ್ನರಯ್ಯ ೪೭, ೧೦೬
ಕಿಂದಮಋಷಿ ೪೩
ಕೇದಗೆರಾಜ ೪
ಕೇಶಿರಾಜ ೯೬
ಕೈಕಸೆ ೩೮, ೮೭
ಕೊಡಗದ ಮಾರಣ್ಣ ೯೬
ಕೋಲಶಾಂತಯ್ಯ ೩೫
ಖಚರ ೪೧, ೮೫
ಗಣಪತಿರಾಯ ೯೩
ಗುಪ್ತಮಂಚಣ್ಣ ೧೮
ಗುರುವಕ್ಕ ೨೬
ಗುಂಡಬ್ರಹ್ಮ ೯೨
ಗೌತಮ ೭೫
ಚನ್ನಬಸವ ೧೦, ೯೨

ಚನ್ನಯ್ಯ ೯೮
ಚಲದಂಕ ಬಲ್ಲಯ್ಯ ೮೭
ಚಂಗಳೆ ೨೭
ಚಂಡಗಣೇಶ್ವರ ೧೬
ಚಂಡಸೋಮವ್ವೆ ೪೯
ಚಂದಿಮರಸು ೯೭
ಚಂದ್ರ ೧೦
ಚಂದ್ರಹಾಸ ೬೪
ಚಿನ್ನಗಾಯಕದ ಬೊಮ್ಮಣ್ಣ ೮
ಚಿಲ್ಲಾಳ ೨೭
ಚೇರಮರಾಯ ೫೦
ಚೊರಚಿಕ್ಕಯ್ಯ ೫೧
ಜಗದೇವ ೮೧
ಜಡೆಯುಶಂಕರ ೭೩
ಜಮದಗ್ನಿ ೬೨, ೭೭
ಜಾತಿಕಾರರು ೧೭
ತಂಗಟೂರುಮಾರಯ್ಯ ೧೦೪
ತಾರಕ ೨
ತಿರುವಂಜಿಕಾಳನಾಥ ೫೦
ತಿರುವಾಲೂರು ೨೨
ತಿರುನೀಲಕಂಠ ೩೦
ತ್ರಿಪುರ ೨
ತೆಲುಗುಜೊಮ್ಮಯ್ಯ ೬೧
ದತ್ತಾತ್ರೇಯ ೬೭
ದಮಯಂತಿ ೭೮
ದಸರಯ್ಯ ೪೨
ದಕ್ಷ ೭೬
ದಾಮೋದರ ೮
ದಾರುಕ ೭೬
ದಾಸಾರ್ಹರಾಯ ೧೬
ದುಗ್ಗಳೆ ೨೬
ದೂರ್ವಾಸ ೬೭, ೭೧
ದೇವರದಾಸ ೨೬, ೬೫, ೮೬
ದೇಸಿಂಗರಾಯ ೮೬
ಧರಣೀಂದ್ರ ೬೫
ನರವರ್ಮ ೩೫
ನರಸಿಂಗಮೊನೆಯಾರ್ ೧೯
ನಳ ೭೮
ನಂದರಾಜ ೪೬
ನಂದೀಶ್ವರ ೫, ೫೮
ನಂಬಿಯಣ್ಣ ೨೦
ನಾಗಲಾಂಬಿಕೆ ೧೮
ನಾಗಾರ್ಜುನ ೭೬
ನಾರಾಯಣ ೧೦
ನಿಜಲಿಂಗಚಿಕ್ಕಯ್ಯ ೫೧, ೯೪
ನಿಂಬಿಯಕ್ಕ ೫೨, ೯೯
ನಿಃಕುಂಬ ೬೦
ನೀಲಲೋಚನೆ ೭, ೯೪
ನೀಲಲೋಹಿತ ೬
ಪಗಲ್ಕೋಳ ೧೦೨
ಪರವೆನಾಚಿ ೨೪
ಪರಶುರಾಮ ೭೬
ಪರೋಕ್ಷರಾಯ ೮೯
ಪಲ್ಯಣಾಚಾರ್ಯ ೨೨
ಪಂಡಿತಾರಾಧ್ಯ ೨೩
ಪಂಪಾಕ್ಷೇತ್ರ ೧೪
ಪಾರ್ವತಿ ೪
ಪೂಸಲನೈನಾರು ೫೮



ಪೊರ್ಮಡಿರಾಯ ೬೧
ಪೌಲಸ್ತ್ಯ ೮೭
ಬಲಿ ೧, ೩೯
ಬಸವ ೪, ೫, ೭, ೮, ೧೨
೧೬, ೧೭, ೨೬, ೪೨
೪೮, ೫೧, ೫೫, ೫೭
೮೧, ೯೨, ೯೩, ೯೪
೯೫, ೯೮, ೧೦೦, ೧೦೩
೧೦೪, ೧೦೫, ೧೦೬
೧೦೭
ಬಂದಿಕಾರರು ೯೪
ಬ್ರಹ್ಮ ೩, ೩೮, ೬೪, ೬೮
ಬಾಣ ೪೬
ಬಾಣಾಸುರ ೨೯
ಬಾಲಚಂಡಯ್ಯ ೩೬
ಬಾಲಸಂಗಯ್ಯ ೫೪
ಬಿಜ್ಜಳ ೮೧, ೯೫, ೯೬, ೨೮
೩೫, ೪೨
ಬೊಮ್ಮಯ್ಯ ೧೦೬
ಭದ್ರದತ್ತ ೮೮
ಭರ್ತೃಹರಿ ೪೫
ಭಗವಾನ ೮೨
ಭೀಮ ೪೨
ಭೃಗು ೬೭
ಭೃಂಗೀಶ್ವರ ೭೨
ಭೈರವ ೧
ಭೋಗಣ್ಣ ೯೬
ಭೋಜರಾಜ ೫೯, ೯೦
ಮಡಿವಾಳಯ್ಯ ೫೫
ಮಧುವಯ್ಯ ೧೦೬
ಮನುಜೇಂದ್ರಚೋಳ ೫೬, ೫೮
ಮನೋಹರ ಗಣೇಶ್ವರ ೬
ಮಯೂರ ೪೬
ಮಲ್ಲಿಕಾರ್ಜುನ ೮೨
ಮಲ್ಲಿಕಾರ್ಜುನ ಪಂಡಿತ ೨೨
ಮಲ್ಲಿಬೊಮ್ಮಯ್ಯ ೮೧
ಮಲ್ಲಿರಾಜ ೮೯
ಮಹಾದೇವಶೆಟ್ಟಿ ೧೦೧
ಮಹಾದೇವಯಕ್ಕ ೧೦೫
ಮಹಾದೇವರಾಣಿ ೫೧
ಮಹಿಷಾಸುರ ೬೬
ಮಂಜಣ್ಣ ೧೨
ಮಂಡೋದರಿ ೮೦
ಮಂತ್ರಲಕ್ಷ ೯೧
ಮಾದರಚನ್ನಯ್ಯ ೪೯
ಮಾಯಭಟ್ಟಾಚಾರ್ಯ ೭೭
ಮಾರ್ಕಂಡೇಯ ೧೦೭
ಮಾರಿ ೭೧
ಮಿಂಡಮಲ್ಲಯ್ಯ ೯೫
ಮೀಮಾಂಸಕ ೧೦೦
ಮುಚುಕುಂದ ೬೫
ಮುನೀಂದ್ರ ೫೬
ಮೇದಾರಕೇತಯ್ಯ ೫೪
ಮೈಲಾರ ೭೪
ಮೊನೆಧರಗಣನಾಥ ೫೩
ಮೊನೆವಿಡುನೈನಾರ ೪೪
ಮೊರಟದ ಬಂಕಿದೇವ ೧೫
ಮೊರನವೇಮಯ್ಯ ೧೦೩

ಮೋಳಿಗೆಮಾರಯ್ಯ ೪೮
ಯಮ ೬೫, ೭೨
ರಾಘವಾಂಕ ೧೮
ರಾಜತಕ್ಸ್ವರ ೯೬
ರಾಮ ೮೪
ರಾವಣ ೩೮, ೮೦
ರಾಹುಕೇತು ೧೦
ರೇಣುಕಾದೇವಿ ೭೭
ವಾಗೀಶ ೨೫
ವಾಲ್ಮೀಕಿನಾಥ ೨೨
ವ್ಯಾಸ ೭೦
ವಿಕ್ರಮಚೋಳ ೧೦೫
ವಿವಳ ೩೭
ವಿದ್ಯುನ್ಮಾಲಿ ೨
ವಿಷ್ಣು ೩, ೬೪, ೬೮, ೭೨
ವಿಹಲ್ಯಕರಣಿ ೯೧
ವಿಶ್ವೇಶ್ವರ ೮೮
ವೀರ ೨
ವೀರಭದ್ರ ೭೧, ೭೬
ವೃಷಭ ೬
ವೇಲ್ನಾಡಚೋಳ ೨೩
ವೈಷ್ಣವಚೋಳ ೫೭
ಶಂಕರ ೧೫
ಶಂಕರದಾಸಿಮಯ್ಯ ೭೩
ಶ್ವಪಚಯ್ಯ ೩೨, ೮೨
ಶಿಬಿ ೪೧
ಶಿರಿಯಾಳಶೆಟ್ಟಿ ೨೭
ಶಿಲಾದಮುನಿ ೫, ೫೮
ಶಿವ ೧೨, ೫೭
ಶಿವಚಿತ್ತ ೮೩
ಶಿವನಾಗಮಯ್ಯ ೮, ೫೭
ಶಿವರಾತ್ರಿಯ ಸಂಕಣ್ಣ ೧೫
ಶಿವಾನಂದ ೬೧
ಸಗರ ೩೪
ಸತ್ಯಣ್ಣ ೧೦೪
ಸತ್ಯೇಂದ್ರಚೋಳ ೯೧
ಸ್ಕಂದ ೬
ಸಾಮವೇದಿ ೩೨
ಸಿದ್ಧಣ್ಣಮಂತ್ರಿ ೭, ೯೪
ಸಿದ್ಧರಾಮ ೮೨, ೧೦೬
ಸಿದ್ಧಿಶೆಟ್ಟಿ ೧೬
ಸಿರಿಯಾಳಶೆಟ್ಟಿ ೯೯
ಸಿಂಧುಬಲ್ಲಾಳ ೨೮
ಸಿಂಧುಮರಾಳ ೪೪
ಸಿಂಹಸೂದ್ರಿಕ ೭೨
ಸುಕುಮಾರ ೮೩
ಸುದೇವಿ ೩೫
ಸೂರಸಾನಾಂಬೆ ೩೮
ಸೇದಿರಾಜ ೪೩
ಸೋಮಣ್ಣ ೫೪
ಸೋಮುಖ ೮೭
ಸೌಂದರ ಗಣೇಶ್ವರ ೧೯
ಸೌಂದರನಾಚಯ್ಯ ೮೧
ಸೌಂದರ ಪೆರುಮಾಳೆ ೨೦
ಹರಳಯ್ಯ ೧೦೬
ಹರಿ ೬೪
ಹರಿದಾಸ ೩೫
ಹರಿಹರ ೧೮
ಹಾದರಥಬೊಮ್ಮಯ್ಯ ೨೬
ಹೇರೂರು ನಾಚಯ್ಯ ೫೩


---

236.

